26 November 2025 Wednesday SINCE 1957

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

# ವರ್ತಮಾನ

ಭವಿಷ್ಯದ ಮುನ್ನುಡಿ

ಸಂಪಾದಕ: ಕೆ.ಎನ್.ರವಿ

info.varthaman@gmail.com

9742504916 ಮೈಸೂರು ಮಂಡ್ಯ ಬೆಂಗಳೂರು ಹಾಸನ ಚಾಮರಾಜನಗರ ರಾಮನಗರ ಬೆಂಗಳೂರು ಗ್ರಾಮಾಂತರ ಕೊಡಗು ಕಾರ್ಯನಿರ್ವಾಹಕ ಸಂಪಾದಕ - ಕೆ.ಆರ್.ಮಿಹಿರ್ ಆಕಾಶ್

VARTHAMAN Volume: 69 Issue: 41 Pages: 06 KA/SK/MYS/1098/2023-2025 R.N.I. No.3577/1957 www.varthaman.in Price-3

**ಭಾವನಾಂತರಂಗ**

ಮನವು ಅಹಂಕಾರವನ್ನು ಧರಿಸಿದಷ್ಟು
ಸುಲಭವಾಗಿ ಸರಳತೆಯನ್ನು
ಪಡೆಯುವುದಿಲ್ಲ!

ಸ್ನೇಹಾ ಆನಂದ್

**ಒಂದೊಳ್ಳೆ ಮಾತು**

"ಬದುಕಿನಲ್ಲಿ
ನೋವಾದಾಗ ಅತ್ತು....,
ಸಂತೋಷ ಆದಾಗ ನಕ್ಕು...,
ನಿರಾಸೆ ಆದಾಗ ನಿಟ್ಟುಸಿರಿಟ್ಟು
ಮತ್ತದೇ ದಿನಚರಿಗೆ
ಹಾಜರಾತಿ ಹಾಕಿ
ಜೀವಿಸುವುದೇ "ಜೀವನ"

ಮೈಲಾರ ಸಾವಿತ್ರಿಬಾಯಿ

# ನಾಡಿನಾದ್ಯಂತ ಇಂದು ಚಂಪಾ ಷಷ್ಠಿ

## ಆರೋಗ್ಯ, ಸಂಪತ್ತು ವೃದ್ಧಿಗೆ ಸುಬ್ರಹ್ಮಣ್ಯನ ಮೊರೆ



**ಮಾಧುರಿ ದೇಶಪಾಂಡೆ**

ಮಾರ್ಗಶಿರ ಮಾಸದ ಶುದ್ಧ ಷಷ್ಠಿ ಸುಬ್ರಹ್ಮಣ್ಯ ಷಷ್ಠಿಯಾಗಿದೆ. ಅದರಲ್ಲಿ ವಿಶೇಷವಾಗಿ ಭಾನುವಾರ ಮತ್ತು ವಿಶಾಖ ನಕ್ಷತ್ರ ಹಾಗೂ ವೈಧೃತಿ ಯೋಗವು ಕೂಡಿ ಬಂದಾಗ ಚಂಪಾ ಷಷ್ಠಿ ಎನ್ನಲಾಗುತ್ತದೆ. ಸುಬ್ರಹ್ಮಣ್ಯ ಷಷ್ಠಿಯ ಆಚರಣೆ ಮಹತ್ವವನ್ನು ತಿಳಿಯುವುದಾದರೆ. ಹಿಂದೆ ಅಸುರರ ಉಪಟಳವು ಜಾಸ್ತಿಯಾದಾಗ ಅದರಲ್ಲಿ ತಾರಕಾಸುರ ಬಹಳ ಉತ್ಪಾತವನ್ನು ಮಾಡುತ್ತಲಿದ್ದ. ತಾರಕಾಸುರನು ಸತಿದೇವಿಯು ಹೋಮಕುಂಡವನ್ನು ಹಾರಿ ಪ್ರಾಣ ಕೊಟ್ಟ ನಂತರ ತಪಸ್ಸನ್ನು ಮಾಡಿ ಶಿವ-ಸತಿಯರ ಪುತ್ರನಿಂದ ಮಾತ್ರ ತನ್ನ ವಧೆ ಎಂಬ ವರವನ್ನು ಬೇಡಿ ಪಡೆದು ತಪಸ್ಸನ್ನು ಆಚರಿಸುವ ಶಿವ ಏಳಲಾರ ಶಿವನ ಪುತ್ರ ಹುಟ್ಟುವುದು ಅಸಾಧ್ಯ ಎಂಬ ಭ್ರಮೆಯಲ್ಲಿ ವರವನ್ನು ಪಡೆದು ತಾನು ಅಮರ ಎಂಬ ಮದದಿಂದ ದೇವತೆಗಳನ್ನು ಹಿಂಸಿಸುತ್ತಾ ಇರುತ್ತಾನೆ. ಆಗ ದೇವತೆಗಳು ಬ್ರಹ್ಮದೇವರ – ವಿಷ್ಣುವಿನ ಮೊರೆ ಹೋದಾಗ ಶಿವನನ್ನು ತಪಸ್ಸಿನಿಂದ ಎಚ್ಚರಿಸಲು ಹೇಳುತ್ತಾರೆ. ಇದೇ ಸಮಯದಲ್ಲಿ ಸತಿ ದೇವಿಯು ಪರ್ವತ ರಾಜನ ಕುಮಾರಿಯಾಗಿ ಜನಿಸಿ ಶಿವನನ್ನೇ ಪತಿಯನ್ನಾಗಿ ಪಡೆಯಲು ತಪಸ್ಸನ್ನು ಆಚಿಸಿರುತ್ತಾಳೆ. ದೇವತೆಗಳ ವಿಶೇಷವಾಗಿ ಕಾಮದೇವನು ರುದ್ರ ದೇವರ ಮೂರನೆಯ ಕಣ್ಣಿನ ತಾಪಕ್ಕೆ ತುತ್ತಾಗಿ ಸುಟ್ಟು ಬೂದಿಯಾಗಿ ದೇವತೆಗಳ ಸಹಾಯ ಮಾಡುತ್ತಾನೆ. ಪುಟ 2ಕ್ಕೆ

### ಪೂಜಾ ವಿಧಾನ

ಸುಬ್ರಹ್ಮಣ್ಯ ಷಷ್ಠಿ ದಿನದಂದು ಮುಂಜಾನೆ ಬೇಗ ಎದ್ದು ಸ್ನಾನ ಮಾಡಿ ಶುದ್ಧವಾದ ಬಟ್ಟೆಯನ್ನು ಧರಿಸಬೇಕು, ಬಳಿಕ ದೇವರ ಕೋಣೆಯನ್ನು ಗಂಗಾಜಲದಿಂದ ಶುದ್ಧಗೊಳಿಸಬೇಕು. ಕಾರ್ತಿಕೇಯನ ವಿಗ್ರಹ ಅಥವಾ ಚಿತ್ರವನ್ನು ಸ್ವಚ್ಛವಾದ ಪೀಠದ ಮೇಲೆ ಸ್ಥಾಪಿಸಬೇಕು. ವಿಗ್ರಹವನ್ನು ಪಂಚಾಮೃತದಿಂದ ಅಭಿಷೇಕ ಮಾಡಿ, ಶ್ರೀಗಂಧ ಮತ್ತು ಕುಂಕುಮದ ತಿಲಕವನ್ನು ಪುಟ 2ಕ್ಕೆ

### ಈ ಪೂಜೆಯಿಂದ ಹಿಂದೆ ಅನುಗ್ರಹ ಪಡೆದವರು

ಬ್ರಹ್ಮಂಡದಲ್ಲಾಗುತ್ತಿರುವ ಕೆಡುಕನ್ನು ನಾಶಮಾಡಲು ಕಾರ್ತಿಕೇಯನು ಈ ದಿನದಂದು ಜನಿಸಿದನು, ಸ್ಕಂದ ಷಷ್ಠಿಯ ಪೂಜೆಯಿಂದ ಚ್ಯವನ ಋಷಿ ದೃಷ್ಟಿ ಪಡೆದನೆಂದು ಹೇಳುತ್ತಾರೆ. ಸ್ಕಂದ ಷಷ್ಠಿಯ ಕೃಪೆಯಿಂದ ಪ್ರಿಯವ್ರತನ ಮರಣ ಹೊಂದಿದ ಮಗು ಮರಳಿ ಜೀವ ಪಡೆಯಿತು. ಆದ್ದರಿಂದ ಈ ದಿನ ಉಪವಾಸ ವ್ರತ ಮಾಡಿ ಸುಬ್ರಹ್ಮಣ್ಯ ಸ್ವಾಮಿಯನ್ನು ಪೂಜಿಸಿದರೆ ವ್ಯಕ್ತಿಯ ಎಲ್ಲಾ ರೀತಿಯ ತೊಂದರೆಗಳು ದೂರಾಗುವುದು. ನಿಮ್ಮ ಮಕ್ಕಳು ಸುಖ ಜೀವನವನ್ನು ಹೊಂದುತ್ತಾರೆ ಎಂಬುದು ಬಲವಾದ ನಂಬಿಕೆ.

# ಸಿಎಂ ಗದ್ದುಗೆ: ಡಿಕೆಶಿಗೆ ಖರ್ಗೆ ಅಭಯ

## ದೆಹಲಿಗೆ ಹೊರಟಿದ್ದ ಮಲ್ಲಿಕಾರ್ಜುನ ಖರ್ಗೆ ಭೇಟಿ ಮಾಡಿದ ಡಿ.ಕೆ.ಶಿವಕುಮಾರ್

**ಬೆಂಗಳೂರು:** ಮುಖ್ಯಮಂತ್ರಿ ಸ್ಥಾನಕ್ಕಾಗಿ ಅಡ್ಡದಾರಿ ಹಿಡಿಯದೆ ತಾಳ್ಮೆಯಿಂದ ಇರಿ. ಹೈಕಮಾಂಡ್ ಶೀಘ್ರದಲ್ಲಿಯೇ ನಿರ್ಧಾರ ಮಾಡಲಿದೆ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಡಿಸಿಎಂ ಡಿ.ಕೆ.ಶಿವಕುಮಾರ್ ಅವರಿಗೆ ಕಿವಿ ಮಾತು ಹೇಳಿದ್ದಾರೆ ಎನ್ನಲಾಗಿದೆ.

ದೆಹಲಿಗೆ ಹೊರಟಿದ್ದ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಜೊತೆ ಮಂಗಳವಾರ ಬೆಳಿಗ್ಗೆ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಕೆಲಹೊತ್ತು ಮಾತುಕತೆ ನಡೆಸಿದರು. ಈ ಸಂದರ್ಭದಲ್ಲಿ ಡಿಕೆಶಿ ಅವರನ್ನು ಖರ್ಗೆ ಸಮಾಧಾನ ಮಾಡಿದ್ದಾರೆ.

ಕಳೆದ ನಾಲ್ಕು ದಿನಗಳಿಂದ ಸದಾಶಿವನಗರದ ತಮ್ಮ ನಿವಾಸದಲ್ಲಿದ್ದ ಖರ್ಗೆಯವರು ಮಂಗಳವಾರ ದೆಹಲಿಗೆ ತೆರಳಲು ತಮ್ಮ ಮನೆಯಿಂದ ಹೊರಡುತ್ತಿದ್ದಂತೆ ಅಲ್ಲಿಗೆ ಡಿ.ಕೆ.ಶಿವಕುಮಾರ್ ಆಗಮಿಸಿದರು. ಬಳಿಕ ಇಬ್ಬರೂ ಒಂದೇ ಕಾರಿನಲ್ಲಿ ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ತೆರಳಿದರು.

ಈ ಸಂದರ್ಭದಲ್ಲಿ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಖರ್ಗೆ ಅವರು, ಸಂವಿಧಾನ ದಿನಾಚರಣೆ ಇದೆ. ಆ ಕಾರ್ಯಕ್ರಮದಲ್ಲಿ ಭಾಗವಹಿಸಲು ದೆಹಲಿಗೆ ಹೋಗುತ್ತಿದ್ದೇನೆ ಎಂದರು. ಬೇರೆ ವಿಚಾರಗಳಿಗೆ ಪ್ರತಿಕ್ರಿಯೆ ನೀಡದೆ ಅವರು ತೆರಳಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ, ಕೆಲವು ಸಚಿವರು, ಶಾಸಕರು ಖರ್ಗೆ ಅವರನ್ನು ಭೇಟಿ ಮಾಡಿ ಮಾತುಕತೆ ನಡೆಸಿದ್ದರು. ಪುಟ 2ಕ್ಕೆ



### ರಹಸ್ಯ ಒಪ್ಪಂದ ಬಹಿರಂಗಪಡಿಸಲ್ಲ: ಡಿಕೆಶಿ

**ಬೆಂಗಳೂರು:** ಮುಖ್ಯಮಂತ್ರಿ ಬದಲಾವಣೆ ವಿಷಯವನ್ನು ಸಾರ್ವಜನಿಕವಾಗಿ ಚರ್ಚಿಸಲು ನಾನು ಬಯಸುವುದಿಲ್ಲ. ಏಕೆಂದರೆ ಇದು ಪಕ್ಷದ ಹೈಕಮಾಂಡ್ ಹಂತದಲ್ಲಿ ನಾಲ್ಕರಿಂದ ಐದು ಜನರ ನಡುವೆ ನಡೆದ ರಹಸ್ಯ ಒಪ್ಪಂದವಾಗಿದೆ ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ಬಹಿರಂಗಪಡಿಸಿದ್ದಾರೆ. ಸುದ್ದಿಗಾರರ ಜೊತೆ ಮಾತನಾಡಿದ ಅವರು, ಪುಟ 4ಕ್ಕೆ

### ರಾಜ್ಯ ರಾಜಕೀಯ ಬೆಳವಣಿಗೆ: ಹೈಕಮಾಂಡ್‌ಗೆ ಖರ್ಗೆ ವರದಿ

**ಬೆಂಗಳೂರು:** ರಾಜ್ಯ ರಾಜಕೀಯ ಬೆಳವಣಿಗೆ ಕುರಿತು ಮಲ್ಲಿಕಾರ್ಜುನ ಖರ್ಗೆ ಅವರು ವರದಿ ನೀಡಿದ ಬಳಿಕ ರಾಹುಲ್ ಗಾಂಧಿಯವರು ಸಿದ್ದರಾಮಯ್ಯ ಮತ್ತು ಡಿ.ಕೆ.ಶಿವಕುಮಾರ್ ಇಬ್ಬರನ್ನೂ ದೆಹಲಿಗೆ ಕರೆಸಿಕೊಳ್ಳುವ ಸಾಧ್ಯತೆ ಇದೆ. ಬೆಳಗಾವಿಯಲ್ಲಿ ಡಿ.8ರಿಂದ ನಡೆಯಲಿರುವ ವಿಧಾನ ಮಂಡಲ ಅಧಿವೇಶನದಲ್ಲಿ ನಾಯಕತ್ವ ಗೊಂದಲವನ್ನೇ ಮುಂದಿಟ್ಟುಕೊಂಡು ವಿರೋಧ ಪಕ್ಷಗಳು ಪುಟ 2ಕ್ಕೆ

### ಬಹಿರಂಗವಾಗಿ ಚರ್ಚಿಸಲ್ಲ

ನವದೆಹಲಿ: ರಾಜ್ಯದ ನಾಯಕತ್ವ ಬದಲಾವಣೆ ವಿಷಯವು ಸಾರ್ವಜನಿಕವಾಗಿ ಚರ್ಚಿಸಬೇಕಾದ ವಿಷಯವಲ್ಲ ಎಂದು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹೇಳಿದರು. ಸುದ್ದಿಗಾರರ ಜೊತೆ ಮಂಗಳವಾರ ಮಾತನಾಡಿದ ಅವರು, ರಾಹುಲ್ ಗಾಂಧಿ ಜೊತೆಗಿನ ಅವರ ಸಂಭಾವ್ಯ ಭೇಟಿಯ ಬಗ್ಗೆ ಕೇಳಿದಾಗ, ಅಧ್ಯಕ್ಷರು ಬೇರೆಲ್ಲಿಯೂ ಚರ್ಚಿಸುವುದಿಲ್ಲ ಎಂದು ನಿಮಗೆಲ್ಲರಿಗೂ ತಿಳಿದಿದೆ. ಸಭೆ ನಡೆದರೆ ಆ ಬಗ್ಗೆ ನಾವು ಚರ್ಚಿಸುತ್ತೇವೆ ಎಂದು ಖರ್ಗೆ ತಿಳಿಸಿದರು.



### ರಾಹುಲ್–ಪ್ರಿಯಾಂಕ್ ಭೇಟಿ

ನವದೆಹಲಿ: ಮುಖ್ಯಮಂತ್ರಿ ಸ್ಥಾನದ ಗೊಂದಲದ ನಡುವೆಯೇ ಸಚಿವ ಪ್ರಿಯಾಂಕ್ ಖರ್ಗೆ ಅವರು ರಾಹುಲ್ ಗಾಂಧಿ ಅವರನ್ನು ಮಂಗಳವಾರ ಭೇಟಿ ಮಾಡಿ ಒಂದು ಗಂಟೆಗೂ ಹೆಚ್ಚು ಕಾಲ ಚರ್ಚೆ ನಡೆಸಿದ್ದಾರೆ. ರಾಜ್ಯ ರಾಜಕೀಯದ ಬೆಳವಣಿಗೆಗಳ ಬಗ್ಗೆ ರಾಹುಲ್ ಅವರು ಪ್ರಿಯಾಂಕ್ ಜೊತೆ ಸುದೀರ್ಘವಾಗಿ ಚರ್ಚೆ ಪುಟ 2ಕ್ಕೆ

# ಗೊಂದಲಗಳಿಗೆ ಹೈಕಮಾಂಡ್ ಫುಲ್ ಸ್ಟಾಪ್ ಇಡಲಿ: ಸಿಎಂ



**ಬೆಂಗಳೂರು:** ರಾಜ್ಯದಲ್ಲಿ ವಾರದಿಂದ ಉಂಟಾಗಿರುವ ಎಲ್ಲ ರಾಜಕೀಯ ಗೊಂದಲಗಳಿಗೆ ತೆರೆ ಎಳೆಯಲು ಹೈಕಮಾಂಡ್ ತೀರ್ಮಾನಿಸಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಆಗ್ರಹಿಸಿದರು.

ಸುದ್ದಿಗಾರರೊಂದಿಗೆ ಮಂಗಳವಾರ ಮಾತನಾಡಿದ ಸಿದ್ದರಾಮಯ್ಯ ಅವರು, ಎಲ್ಲ ಸಮಸ್ಯೆಗಳಿಗೂ ಹೈಕಮಾಂಡ್ ಫುಲ್ ಸ್ಟಾಪ್ ಇಡಬೇಕಿದೆ. ಸಚಿವ ಸಂಪುಟ ಪುನರ್ ರಚನೆಯನ್ನು ಪಕ್ಷದ ವರಿಷ್ಠರು ಸೂಚನೆ ನೀಡಿದಾಗ ಕೈಗೊಳ್ಳಲಾಗುವುದು, ರಾಹುಲ್ ಗಾಂಧಿ ಅವರನ್ನು ಭೇಟಿ ಮಾಡುವ ಇರಾದೆ ಸದ್ಯಕ್ಕೆ ನನಗೆ ಇಲ್ಲ ಎಂದು ತಿಳಿಸಿದರು.

ಶಾಸಕರ ಮತ್ತೊಂದು ತಂಡ ದೆಹಲಿಗೆ ತೆರಳಿ ಹೈಕಮಾಂಡ್ ನಾಯಕರ ಭೇಟಿ ಕುರಿತ ಪ್ರಶ್ನೆಗೆ ಉತ್ತರಿಸಿದ ಮುಖ್ಯಮಂತ್ರಿ, ಶಾಸಕರಿಗೆ ಅವರ ಅಭಿಪ್ರಾಯ ತಿಳಿಸುವ ಸ್ವಾತಂತ್ರ್ಯ ಇದೆ. ಪಕ್ಷದ ವರಿಷ್ಠರು ಏನು ಹೇಳುತ್ತಾರೆ ಎಂಬುದನ್ನು ನೋಡೋಣ ಎಂದರು.

# ಎರಡು ದಿನದಲ್ಲಿ ಡಿಕೆಶಿ ಸಿಎಂ ಆಗದಿದ್ದರೆ ಮತ್ತೆಂದೂ ಆಗಲ್ಲ!

## ಲಲಿತಾ ಭಾರತಿ ವಿಜಯೇಂದ್ರ ತೀರ್ಥರ ಭವಿಷ್ಯ

**ಮೈಸೂರು:** ಪ್ರಸ್ತುತ ಗ್ರಹಗತಿಗಳ ಪ್ರಕಾರ ಡಿ.ಕೆ.ಶಿವಕುಮಾರ್ ಅವರು ಇನ್ನೆರಡು ದಿನಗಳಲ್ಲಿ ಮುಖ್ಯಮಂತ್ರಿ ಆಗಬೇಕು. ಇಲ್ಲದಿದ್ದರೆ ಈ ಜನ್ಮದಲ್ಲಿ ಸಿಎಂ ಆಗುವ ಯೋಗವಿಲ್ಲ ಎಂದು ಲಲಿತಾ ಭಾರತಿ ವಿಜಯೇಂದ್ರ ತೀರ್ಥ ಗುರುಗಳು ಸ್ಫೋಟಕ ಭವಿಷ್ಯ ನುಡಿದಿದ್ದಾರೆ.

ಮೈಸೂರಿನಲ್ಲಿ ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿ ಆಗಲೆಂದು ಮಂಗಳವಾರ ಅವರು ವಿಶೇಷ ಪೂಜೆ ಸಲ್ಲಿಸಿದ್ದಾರೆ. ಬಳಿಕ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದರು. ರಾಜ್ಯಲಕ್ಷ್ಮಿ ಪೀಠ ಪ್ರಾಪ್ತ್ಯರ್ಥ ಸಂಕಲ್ಪ ಪೂಜೆ ಮಾಡಲಾಗಿದೆ. ಹುಡ್ಕೋ ಬಡಾವಣೆಯ ನವಗ್ರಹ ಸಹಿತ ಬಲಮುರಿ ಶಕ್ತಿ ಗಣಪತಿ ದೇವಸ್ಥಾನದಲ್ಲಿ ಪೂಜೆ ನೆರವೇರಿಸಲಾಗಿದೆ. ಗಣಪತಿ ಹಾಗೂ ಲಲಿತಾ ತ್ರಿಪುರಸುಂದರಿ ದೇವಿಗೆ ಪೂಜೆ ಮಾಡಲಾಗಿದೆ. ಪೂಜೆ ಮೂಲಕ ಮುಖ್ಯಮಂತ್ರಿ ಪದವಿ ಪ್ರಾಪ್ತಿಗೆ ಸಂಕಲ್ಪ ಮಾಡಿಕೊಳ್ಳಲಾಗಿದೆ ಎಂದು ಹೇಳಿದರು.

ಆದರೆ, ಇನ್ನು ಎರಡು ದಿನಗಳಲ್ಲಿ ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿ ಆಗಬೇಕು. ಅದಕ್ಕಾಗಿ ಸಂಕಲ್ಪ ಪೂಜೆ ಮಾಡಿದ್ದೇವೆ. ದೇವಿ ಕೂಡ ಬಲಗಡೆಯಿಂದ ಪುಟ 2ಕ್ಕೆ

**ಕಾರು ಅಪಘಾತ**

# ಐಎಎಸ್ ಅಧಿಕಾರಿ ಮಹಾಂತೇಶ್ ಬಿಳಗಿ ಸೇರಿ ಮೂವರ ಸಾವು



ಕಲಬುರಗಿ: ಕಾರು ಅಪಘಾತದಲ್ಲಿ ಗಂಭೀರವಾಗಿ ಗಾಯಗೊಂಡಿದ್ದ ಹಿರಿಯ ಐಎಎಸ್ ಅಧಿಕಾರಿ ಮಹಾಂತೇಶ್ ಬೀಳಗಿ ಸೇರಿ ಮೂವರು ಮೃತಪಟ್ಟಿದ್ದಾರೆ.

ಕರ್ನಾಟಕ ರಾಜ್ಯ ಖನಿಜ ನಿಗಮ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರಾಗಿದ್ದ ಮಹಾಂತೇಶ್ ಬೀಳಗಿ ಹಾಗೂ ಅವರ ಸಹೋದರರು ಪ್ರಯಾಣಿಸುತ್ತಿದ್ದ ಇನ್ನೋವಾ ಕಾರು ಇಂದು ಜೇವರ್ಗಿ ಬೈಪಾಸ್ ಬಳಿ ಅಪಘಾತಕ್ಕೀಡಾಗಿದೆ. ಭೀಕರ ಅಪಘಾತದಲ್ಲಿ ಮಹಾಂತೇಶ್ ಬಿಳಗಿ ಅವರ ಸಹೋದರ ಶಂಕರ ಬೀಳಗಿ ಹಾಗೂ ಈರಣ್ಣ ಶಿರಸಂಗಿ ಅವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಅಪಘಾತದಲ್ಲಿ ಗಂಭೀರವಾಗಿ ಗಾಯಗೊಂಡಿದ್ದ ಮಹಾಂತೇಶ್ ಬೀಳಗಿ ಅವರನ್ನು ಕಲಬುರಗಿಯ

# ನೀವ್ ನೀವೇ ಅಗ್ರಿಮೆಂಟ್ ಮಾಡಿಕೊಂಡರೆ ನಾವೇನು ಮಾಡಬೇಕು?: ರಾಯರೆಡ್ಡಿ ಪ್ರಶ್ನೆ

**ಕೊಪ್ಪಳ:** ನೀವ್ ನೀವೇ ಅಗ್ರಿಮೆಂಟ್ ಮಾಡಿಕೊಂಡರೆ ಇದೇನು ಕಾಂಟ್ರಾಕ್ಟಾ. ಹಾಗಾದರೆ ನಾವೇನು ಮಾಡಬೇಕು ಎಂದು ಸಿಎಂ ಆರ್ಥಿಕ ಸಲಹೆಗಾರ ಬಸವರಾಜ ರಾಯರೆಡ್ಡಿ ಖಾರವಾಗಿ ಪ್ರಶ್ನಿಸಿದ್ದಾರೆ.



ಸಿಎಂ ಸ್ಥಾನ ಹಂಚಿಕೆ ಬಗ್ಗೆ ಮಾತುಕತೆ ಆಗಿದೆ ಅಂತಾರೆ. ಆದರೆ ಈ ಬಗ್ಗೆ ಅವರೇನು ನಮಗೆ ಹೇಳಿದ್ರಾ? ಎರ ಡೂವರೆ ವರ್ಷ ಅವರು, ಎರಡೂವರೆ ವರ್ಷ ಇವರು ಅಂತಾ ನಮಗೆ ಹೇಳಿಲ್ಲ. ಹೀಗಾಗಿ ಸಿದ್ದರಾಮಯ್ಯ ಐದು ವರ್ಷ ಸಿಎಂ. ಡಿಕೆ ಶಿವಕುಮಾರ್ ಕೂಡಾ ಎಲ್ಲೂ ಸಿಂ ಆಗ್ತೀನಿ ಅಂದಿಲ್ಲ ಎಂದು ಕಿಡಿಕಾರಿದರು.

ಕೆಲವು ಶಾಸಕರಿಗೆ ಡಿ.ಕೆ ಶಿವಕುಮಾರ್ ಟಿಕೆಟ್ ಕೊಟ್ಟಿರ್ತಾರೆ. ಅಭಿಮಾನಕ್ಕೆ ಏನೋ ಹೇಳ್ತಾರೆ. ಶಾಸಕಾಂಗ ಸಭೆ ಕರೆದು ಸಿದ್ದರಾಮಯ್ಯ ಬದಲಾವಣೆ ಮಾಡ್ತೀವಿ ಅಂತಾ ಹೇಳಬೇಕು. ಬದಲಾವಣೆ ಆಗಬೇಕು ಅಂದರೆ, ಯಾಕೆ ಬದಲಾವಣೆ ಮಾಡ್ತೀರಿ ಅಂತಾ ನಾನು ಪ್ರಶ್ನೆ ಮಾಡುತ್ತೇನೆ ಎಂದು ತಿಳಿಸಿದರು.

ನಮ್ಮ ಪಕ್ಷದಲ್ಲಿ ಸಿದ್ದರಾಮಯ್ಯ ಬಣ, ಡಿ.ಕೆ ಶಿವಕುಮಾರ್ ಬಣಗಳಿಲ್ಲ. ನಾವೆಲ್ಲ ಕಾಂಗ್ರೆಸ್ ಪಾರ್ಟಿಯವರು. ಸಿಎಂ ಆಗಬೇಕು, ಸಚಿವರಾಗಬೇಕು ಅನ್ನೋ ಆಸೆ ಇರೋದು ಸಹಜ. ಎರಡೂವರೆ ವರ್ಷ ಆಯ್ತು, ಸಿದ್ದರಾಮಯ್ಯ ಮುಖ್ಯಮಂತ್ರಿ ಬಿಟ್ಟು ಬಿಡಬೇಕು ಅನ್ನೋ ತೀರ್ಮಾನ ಆಗಿರೋದು ನಮಗೆ ಗೊತ್ತಿಲ್ಲ. ಶಾಸಕಾಂಗ ಪಕ್ಷದ ಸಭೆಯಲ್ಲಿ ಸಿದ್ದರಾಮಯ್ಯಗೆ ಬಹುಮತ ಬಂತು, ಹೀಗಾಗಿ ಸಿದ್ದರಾಮಯ್ಯ ಆಯ್ಕೆಯಾದರು. ಇವಾಗ ಸಿದ್ದರಾಮ ಯ್ಯನ ತೆಗೆಯೋ ಮಾತು ಯಾಕೆ ಎಂದು ಕೇಳಿದರು.

ನಾನು ರಾಜ್ಯ ಉಸ್ತುವಾರಿಗಳನ್ನ ಪ್ರಶ್ನೆ ಮಾಡುತ್ತೀನಿ. ಸಿದ್ದರಾಮಯ್ಯ ಭ್ರಷ್ಟಾಚಾರ ಮಾಡಿದ್ದಾರೆಯೇ? ಜನ ವಿರೋಧಿ ಕೆಲಸ ಮಾಡಿದ್ದಾರಾ ಅಂತಾ ಕೇಳುತ್ತೇನೆ. ಎರಡೂವರೆ ವರ್ಷ ಮಾತು ಕೊಟ್ಟಿದ್ದೇವೆ ಅಂದರೆ, ಆಗ ನಾನು ಮೊದಲೇ ಯಾಕೆ ಹೇಳಿಲ್ಲ ಅಂತಾ ಕೇಳುತ್ತೇನೆ. ನನಗೆ ಗೊತ್ತಿರೋ ಪ್ರಕಾರ ಸಿದ್ದರಾಮಯ್ಯ ಐದು ವರ್ಷ ಸಿಎಂ ಆಗಿ ಪುಟ 2ಕ್ಕೆ

# ನನ್ನ ಮುಖ್ಯಮಂತ್ರಿ ಮಾಡಿ ಎಂದು ಕೇಳಿಲ್ಲ

## ಪಕ್ಷವನ್ನು ದುರ್ಬಲಗೊಳಿಸುವ ಕೆಲಸ ಮಾಡಲ್ಲ | ಡಿಕೆಶಿ ಭಾವುಕ ಮಾತು

**ಕನಕಪುರ:** ನನ್ನನ್ನು ಮುಖ್ಯಮಂತ್ರಿ ಮಾಡಿ ಎಂದು ಪಕ್ಷದ ನಾಯಕರನ್ನು ನಾನು ಕೇಳಿಲ್ಲ. ನಾವು ಆತ್ಮಸಾಕ್ಷಿಗೆ ಅನುಗುಣವಾಗಿ ಕೆಲಸ ಮಾಡುವವರು. ಪಕ್ಷವನ್ನು ಮುಜುಗರಕ್ಕೀಡು ಮಾಡುವುದಕ್ಕೆ ಅಥವಾ ದುರ್ಬಲಗೊಳಿಸುವುದಕ್ಕೆ ನಾನು ಇಷ್ಟಪಡುವುದಿಲ್ಲ ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಭಾವುಕರಾಗಿ ಮಾತನಾಡಿದರು.

ಕನಕಪುರದಲ್ಲಿ ಮುಖ್ಯಮಂತ್ರಿ ಬದಲಾವಣೆ ಚರ್ಚೆ ಕುರಿತ ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು,

ಪಕ್ಷ ಮತ್ತು ಕಾರ್ಯಕರ್ತರಿದ್ದರೆ ನಾವೇ ಹೊರತು, ನಮ್ಮಿಂದ ಪಕ್ಷವಲ್ಲ ಎಂದು ಹೇಳಿದರು.

ಹಿರಿಯರಾದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪಕ್ಷದ ಆಸ್ತಿ. ವಿರೋಧ ಪಕ್ಷದ ನಾಯಕರಾಗಿದ್ದ ಅವರು ಪಕ್ಷಕ್ಕಾಗಿ ದುಡಿದಿದ್ದಾರೆ. ಎರಡನೇ ಸಲ ಸಿ.ಎಂ ಆಗಿ ಎರಡೂವರೆ ವರ್ಷ ಮುಗಿಸಿರುವ ಅವರು, ಮುಂದಿನ ಬಜೆಟ್ ಸಹ ಮಂಡಿಸುವುದಾಗಿ ಹೇಳಿದ್ದಾರೆ. ಅವರಿಗೆ ಒಳ್ಳೆಯದಾಗಲಿ ಪುಟ 2ಕ್ಕೆ



### ಕಷ್ಟದಲ್ಲಿದ್ದಾಗ ಮಾಡಿದ ಪೂಜೆ ಮುಖ್ಯ

ನಾನು ಇಂದು ಉಪ ಮುಖ್ಯಮಂತ್ರಿಯಾಗಿದ್ದೇನೆ ಎಂಬ ಕಾರಣಕ್ಕಾಗಿ ಮುಖ್ಯಮಂತ್ರಿಯಾಗಲಿ ಎಂದು ನನ್ನ ಬೆಂಬಲಿಗರು ಸೇರಿದಂತೆ ಹಲವರು ದೇವಸ್ಥಾನಗಳಲ್ಲಿ ವಿಶೇಷ ಪೂಜೆ ಮಾಡುತ್ತಿದ್ದಾರೆ. ಆದರೆ, ಇವತ್ತಿನ ಪೂಜೆಗಿಂತ ನಾನು ಜೈಲಿನಲ್ಲಿದ್ದಾಗ ನನ್ನ ಬಿಡುಗಡೆಗಾಗಿ ಪ್ರಾರ್ಥಿಸಿ ಮಾಡಿದ ಪೂಜೆ ಮುಖ್ಯ. ಆಗ ಎಷ್ಟೋ ತಾಯಂದಿರು, ಹಿರಿಯರು, ಯುವಜನರು ಹಾಗೂ ದೇವಸ್ಥಾನದ ಅರ್ಚಕರು ಸಹ ನನಗಾಗಿ ಪೂಜೆ ಮಾಡಿದ್ದಾರೆ. ಹರಕೆ ಹೊತ್ತಿದ್ದಾರೆ. ನಾನು ಬಿಡುಗಡೆಯಾಗುವವರೆಗೆ ಹಲವರು ಚಪ್ಪಲಿ ಧರಿಸದೆ ಪುಟ 2ಕ್ಕೆ

# ನೆರವೇರಿದ 500 ವರ್ಷಗಳ ಹಳೆಯ ಸಂಕಲ್ಪ

## ಭಾರತೀಯ ನಾಗರಿಕತೆಯ ಪುನರ್ ಜಾಗೃತಿ ಧ್ವಜ: ಮೋದಿ ಆಶಯ



**ನವದೆಹಲಿ:** ಇದು ಭಾರತೀಯ ನಾಗರಿಕತೆಯ ಪುನರ್ ಜಾಗೃತಿಯ ಧ್ವಜ. 500 ವರ್ಷಗಳ ಹಳೆಯ ಸಂಕಲ್ಪದ ನೆರವೇರಿದೆ. ಧ್ವಜವು ಭಗವಾನ್ ಶ್ರೀ ರಾಮನ ಆದರ್ಶಗಳನ್ನು ಸಾಕಾರಗೊಳಿಸಿತು. ಸತ್ಯ ಮತ್ತು ಸದಾಚಾರದ ವಿಜಯವನ್ನು ಸಂಕೇತಿಸುತ್ತದೆ ಎಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ತಿಳಿಸಿದರು.

ಅಯೋಧ್ಯೆಯಲ್ಲಿ ರಾಮಮಂದಿರ ನಿರ್ಮಾಣ ಕಾರ್ಯ ಪೂರ್ಣಗೊಂಡಿರುವ ಹಿನ್ನೆಲೆಯಲ್ಲಿ ಮಂಗಳವಾರ ದೇಗುಲದ ಶಿಖರದ ಮೇಲೆ 10 ಅಡಿ ಎತ್ತರದ ಭಗವಾಧ್ವಜವನ್ನು ಪ್ರಧಾನಿ ಮೋದಿಯವರು ಹಾರಿಸಿ ಮಾತನಾಡಿದರು.



ಶತಮಾನಗಳಷ್ಟು ಹಳೆಯದಾದ ಗಾಯಗಳು ವಾಸಿಯಾಗುತ್ತಿದ್ದಂತೆ ಪ್ರತಿಯೊಬ್ಬ ರಾಮ ಭಕ್ತನ ಹೃದಯವು ಆಳವಾದ ತೃಪ್ತಿ, ಅಪಾರ ಕೃತಜ್ಞತೆ ಮತ್ತು ದೈವಿಕ ಸಂತೋಷದಿಂದ ತುಂಬಿರುತ್ತದೆ ಎಂದು ಮಾರ್ಮಿಕವಾಗಿ ಮಾತನಾಡಿದರು. ಧ್ವಜದಲ್ಲಿರುವ ಕೇಸರಿ ಬಣ್ಣ, ಸೂರ್ಯವಂಶದ ಚಿಹ್ನೆ, ಪುಟ 2ಕ್ಕೆ

### ಭಗವಾಧ್ವಜ ಹಾರಿಸಿದ ಮೋದಿ

**ಅಯೋಧ್ಯೆ:** ಅಯೋಧ್ಯೆಯಲ್ಲಿ ರಾಮ ಮಂದಿರ ನಿರ್ಮಾಣ ಕಾರ್ಯ ಪೂರ್ಣಗೊಂಡಿರುವ ಹಿನ್ನೆಲೆಯಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ದೇಗುಲದ ಶಿಖರದ ಮೇಲೆ 10 ಅಡಿ ಎತ್ತರದ ಭಗವಾಧ್ವಜವನ್ನು ಮಂಗಳವಾರ ಹಾರಿಸಿದರು.

ಈ ಸಂದರ್ಭದಲ್ಲಿ ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್, ಉತ್ತರ ಪ್ರದೇಶ ರಾಜ್ಯಪಾಲೆ ಆನಂದಿಬೆನ್ ಪಟೇಲ್ ಮತ್ತು ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಭಾಗವಹಿಸಿದ್ದರು.

ಹಿಂದೂ ಸಂಪ್ರದಾಯದಲ್ಲಿ ಶುಭವೆಂದು ಪರಿಗಣಿಸಲಾದ 'ಅಭಿಜಿತ್ ಮುಹೂರ್ತ'ದ ಸಮಯದಲ್ಲಿ ಧ್ವಜಾರೋಹಣ ನೆರವೇರಿಸಲಾಗಿದೆ. ಈ ದಿನ ಮಾರ್ಗಶಿರ ಶುಕ್ಲ ಪಂಚಮಿ ತಿಥಿಯಾಗಿದ್ದು, ಇದೇ ದಿನ ಶ್ರೀರಾಮ ಮತ್ತು ಸೀತೆಯರ ವಿವಾಹವಾಗಿತ್ತು ಪುಟ 2ಕ್ಕೆ

# ಭ್ರಷ್ಟ ಅಧಿಕಾರಿಗಳಿಗೆ 'ಲೋಕಾ ಶಾಕ್'

## ರಾಜ್ಯದ 10 ಕಡೆಗಳಲ್ಲಿ ಏಕಕಾಲದಲ್ಲಿ ಲೋಕಾಯುಕ್ತ ದಾಳಿ

ಬೆಂಗಳೂರು: ಭ್ರಷ್ಟ ಅಧಿಕಾರಿಗಳಿಗೆ ಮಂಗಳವಾರ ಬೆಳ್ಳಂಬೆಳ್ಳಗೆ ಲೋಕಾಯುಕ್ತ ಶಾಕ್ ನೀಡಿದೆ. ರಾಜ್ಯದ 10 ಕಡೆಗಳಲ್ಲಿ ಏಕಕಾಲದಲ್ಲಿ ಹಲವು ಸರ್ಕಾರಿ ಅಧಿಕಾರಿಗಳ ಮನೆ ಹಾಗೂ ಕಚೇರಿಗಳ ಮೇಲೆ ದಾಳಿ ಮಾಡಿರುವ ಲೋಕಾಯುಕ್ತ ಅಧಿಕಾರಿಗಳು



ಅಪಾರ ಪ್ರಮಾಣದ ನಗದು, ಚಿನ್ನಾಭರಣ, ಆಸ್ತಿ ಪತ್ರಗಳನ್ನು ವಶಪಡಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

10 ಅಧಿಕಾರಿಗಳಿಗೆ ಸಂಬಂಧಿಸಿದೆ ಎನ್ನಲಾದ ಮನೆ ಹಾಗೂ ಕಚೇರಿಗಳ ಮೇಲೆ ದಾಳಿ ನಡೆಸಿರುವ ಲೋಕಾಯುಕ್ತ ಅಧಿಕಾರಿಗಳು, ಸದ್ಯ ಪರಿಶೀಲನೆ ನಡೆಸುತ್ತಿದ್ದಾರೆ ಎಂಬ ಮಾಹಿತಿ ಲಭ್ಯವಾಗಿದೆ. ದಾವಣಗೆರೆ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ (ಎಪಿಎಂಸಿ) ಮಾರಾಟ ವಿಭಾಗದ ಸಹಾಯಕ ನಿರ್ದೇಶಕ ಜೆ. ಪ್ರಭು ಅವರ ಮನೆ ಸೇರಿದಂತೆ ಮೂರು ಸ್ಥಳಗಳ ಮೇಲೆ ಪುಟ 2ಕ್ಕೆ

### ದಾಳಿಗೊಳಗಾದ ಭ್ರಷ್ಟ ಕುಳಗಳು

- ಬೆಂಗಳೂರು (ಎಲೆಕ್ಟ್ರಾನಿಕ್ ಸಿಟಿ)– ಆರ್‌ಟಿಒ ಸೂಪರಿಂಟೆಂಡೆಂಟ್ ಕುಮಾರಸ್ವಾಮಿ
- ಮಂಡ್ಯ ನಗರಪಾಲಿಕೆ ಸಿಇಒ– ಪುಟ್ಟಸ್ವಾಮಿ
- ಬೀದರ್– ಕೃಷ್ಣಾ ಮೇಲ್ದಂಡೆ ಯೋಜನೆ ಮುಖ್ಯ ಇಂಜಿನಿಯರ್ ಪ್ರೇಮ್ ಸಿಂಗ್
- ಮೈಸೂರು– ಹೂಟಗಳ್ಳಿ ನಗರಸಭೆ ರೆವಿನ್ಯೂ ಇನ್ಸ್‌ಪೆಕ್ಟರ್ ರಾಮಸ್ವಾಮಿ
- ಧಾರವಾಡ– ಕರ್ನಾಟಕ ವಿವಿ ಸಹ ಪ್ರಾಧ್ಯಾಪಕ ಸುಭಾಶ್ ಚಂದ್ರ
- ಧಾರವಾಡ– ಪಶು ಕ್ಲಿನಿಕ್ ಹುಲಿಗೋಲ್ ಹಿರಿಯ ಪರೀಕ್ಷಕ ಸತೀಶ್
- ಶಿವಮೊಗ್ಗ– ಸಿಮ್ಸ್ ಮೆಡಿಕಲ್ ಕಾಲೇಜು ಎಫ್‌ಡಿಎ– ಲಕ್ಷ್ಮೀಪತಿ ಸಿ.ಎನ್

ಪುಟ 2ಕ್ಕೆ

ವರ್ತಮಾನ

ಬುಧವಾರ
ನವೆಂಬರ್ 26, 2025

ಮೊದಲ ಪುಟದಿಂದ

## ನಾಡಿನೆಲ್ಲಡೆ ಇಂದು ಚಂಪಾ ಷಷ್ಠಿ

ತಪೋ ಭಂಗವಾದ ಶಿವನು ಪಾರ್ವತಿಯ ತಪಸ್ಸಿಗೆ ಮೆಚ್ಚಿ ಅವಳನ್ನು ವರಿಸುತ್ತಾನೆ. ಇವರಿರ್ವರ ಮಗನೇ ಕುಮಾರ, ಸ್ಕಂದ, ಕಾರ್ತೀಕೆಯ.

ಈ ಕಾರ್ತೀಕೇಯನು ದೇವ ಸೇನಾಪತಿಯಾಗಿ ತಾರಕಾಸುರನೊಂದಿಗೆ ಹೋರಾಡಿ ಅವನ ವಧೆಯನ್ನು ಮಾಡಿ ದೇವತೆಗಳ , ಮನುಷ್ಯರನ್ನು ಆ ರಾಕ್ಷಸನಿಂದ ಕಾಪಾಡಿದ ಈ ಸುದಿನವನ್ನು ಸುಬ್ರಹ್ಮಣ್ಯ ಷಷ್ಠಿ ಎಂದು ಅವನ ಪೂಜೆಯನ್ನು ಆರಾಧನೆಯನ್ನು ಮಾಡಲಾಗುತ್ತದೆ. ಇಂದಿನ ದಿನ ಭಕ್ತರು ಸುಬ್ರಹ್ಮಣ್ಯನ ಪ್ರೀತಿಗಾಗಿ ಅಭಿಷೇಕವನ್ನು ಪೂಜೆಯನ್ನು ಮಾಡಿ ವಿಶೇಷವಾಗಿ ಉಪವಾಸವನ್ನು ಮಾಡುತ್ತಾರೆ. ಆರೋಗ್ಯ, ಸಂಪತ್ತು ಸಮೃದ್ಧಿಯ ಪ್ರಾಪ್ತಿಗಾಗಿ ಸುಬ್ರಹ್ಮಣ್ಯ ಷಷ್ಠಿಯಂದು ಉಪವಾಸವನ್ನು ಮಾಡಿ ಹುತ್ತಕ್ಕೆ ಅಥವಾ ನಾಗರ ಕಲ್ಲಿಗೆ ತನಿ ಎರೆಯುತ್ತಾರೆ. ದೀಪವನ್ನು ಪ್ರಜ್ವಲಿಸಿ. ಬ್ರಹ್ಮಚಾರಿಗಳಿಗೆ ದಾನ ದಕ್ಷಿಣೆಗಳನ್ನು ಕೊಡುತ್ತಾರೆ. ಈ ಸುಬ್ರಹ್ಮಣ್ಯ ಪೂಜೆ ವ್ರತವನ್ನು ಮಾಡುವುದರಿಂದ ಚರ್ಮರೋಗಗಳು, ಬ್ರಹ್ಮ ಹತ್ಯಾದೋಷ ಮೊದಲಾದ ಪಾಪಗಳನ್ನು ಕಳೆದು ಉತ್ತಮ ಜೀವನವನ್ನು ನೀಡುತ್ತದೆ..

ಇಂದಿನ ದಿನ ಬ್ರಹ್ಮಚಾರಿಗಳನ್ನು ಏಕೆ ಕರೆದು ಪೂಜಿಸುತ್ತಾರೆ ಎಂದರೆ ಸಣ್ಣ ಮಕ್ಕಳಿಗೆ ಬ್ರಹ್ಮಚಾರಿಗಳಿಗೆ ಮನದಲ್ಲಿ ದ್ವೇಷ ಅಸೂಯೆಗಳು ಇರುವುದಿಲ್ಲ ಶುದ್ಧವಾದ ಇಂತಹ ಬ್ರಹ್ಮಚಾರಿಗಳ ಪೂಜೆ ನೇರವಾಗಿ ದೇವತಾ ಪೂಜೆಯನ್ನು ಮಾಡಿದಂತೆ ಅದಕ್ಕಾಗಿ ಬ್ರಹ್ಮಚಾರಿ ಪೂಜೆಯನ್ನು ಮಾಡುತ್ತಾರೆ. ಕರ್ನಾಟಕದಲ್ಲಿ ಕುಕ್ಕೆ ಸುಬ್ರಹ್ಮಣ್ಯ ಮತ್ತು ಘಾಟಿ ಸುಬ್ರಹ್ಮಣ್ಯಗಳು ಸ್ಕಂದನ ಕ್ಷೇತ್ರಗಳಾಗಿವೆ. ಇಲ್ಲಿ ಮಾರ್ಗಶಿರ ಶುದ್ಧ ಷಷ್ಠಿಯಂದು ವಿಶೇಷ ಪೂಜೆ ಮತ್ತು ಉತ್ಸವಗಳು ನಡೆಯುತ್ತವೆ. ವಿಶೇಷವಾಗಿ ಸಂತಾನ ಪ್ರಾಪ್ತಿಗಾಗಿ, ಸರ್ಪದೋಷ ನಿವಾರಣೆಗೆಗಾಗಿ ಸುಬ್ರಹ್ಮಣ್ಯ ಷಷ್ಠಿಯ ಪೂಜೆಯನ್ನು ಮಾಡುತ್ತಾರೆ. ಇನ್ನು ಮಕ್ಕಳ ದೀರ್ಘಾಯಸ್ಸು ಮತ್ತು ಆರೋಗ್ಯಕ್ಕಾಗಿ ಕೂಡ ಸುಬ್ರಹ್ಮಣ್ಯನ ಪೂಜೆಯನ್ನು ಮಾಡಲಾಗುತ್ತದೆ.

### ಪೂಜಾ ವಿಧಾನ

**ಹಚ್ಚಬೇಕು. ತುಪ್ಪದ ದೀಪವನ್ನು ಹಚ್ಚಿ ಮತ್ತು ಅಗರಬತ್ತಿ ಅಥವಾ ಧೂಪವನ್ನು ಹಾಕಬೇಕು. ದೇವರಿಗೆ ಹಣ್ಣು ಮತ್ತು ಹೂವುಗಳ ಮಾಲೆಗಳನ್ನು ಅರ್ಪಿಸಬೇಕು. ಪೂಜೆಯ ಕೊನೆಯಲ್ಲಿ ನೈವೇದ್ಯವನ್ನು ಅರ್ಪಿಸಿ ಆರತಿ ಮಾಡಬೇಕು.**

## ನೆರವೇರಿದ ಹಳೆಯ ಸಂಕಲ್ಪ

ಓಂ ಪದ ಮತ್ತು ಕೋವಿದಾರ ಮರವು ರಾಮ ರಾಜ್ಯದ ವೈಭವವನ್ನು ಅನಾವರಣಗೊಳಿಸುತ್ತದೆ. ಈ ಧ್ವಜವು ಒಂದು ಸಂಕಲ್ಪ, ಯಶಸ್ಸು, ಸೃಷ್ಟಿಗಾಗಿ ನಡೆದ ಹೋರಾಟದ ಕಥೆ, 100 ವರ್ಷಗಳ ಹೋರಾಟದ ಭೌತಿಕ ರೂಪ. ಮುಂಬರುವ ಸಾವಿರಾರು ಶತಮಾನಗಳವರೆಗೆ ಈ ಧ್ವಜವು ಭಗವಾನ್ ರಾಮನ ಮೌಲ್ಯಗಳನ್ನು ಪೋಷಿಸುತ್ತದೆ ಎಂದರು.

ಅಯೋಧ್ಯೆ ಮತ್ತೊಂದು ಐತಿಹಾಸಿಕ ಮೈಲಿಗಲ್ಲಿಗೆ ಸಾಕ್ಷಿಯಾಗುತ್ತಿದೆ. ಇಡೀ ದೇಶ ಮತ್ತು ಜಗತ್ತು ರಾಮನ ಜಪದಲ್ಲಿ ಮುಳುಗಿದೆ. ಅಂತಿಮವಾಗಿ ಸತ್ಯವು ಸುಳ್ಳಿನ ಮೇಲೆ ವಿಜಯ ಸಾಧಿಸುತ್ತದೆ ಎಂಬುದಕ್ಕೆ ಈ ಧ್ವಜ ಸಾಕ್ಷಿಯಾಗಿದೆ ಎಂದು ಹೇಳಿದರು.

ರಾಮ ಮಂದಿರಕ್ಕೆ ಬಂದಾಗ ಪ್ರತಿಯೊಬ್ಬ ನಾಗರಿಕನೂ ಸಪ್ತ ಮಂಟಪಕ್ಕೆ ಭೇಟಿ ನೀಡಬೇಕೆಂದು ನಾನು ಒತ್ತಾಯಿಸುತ್ತೇನೆ. ಈ ಮಂಟಪಗಳು ನಂಬಿಕೆ, ಸ್ನೇಹ, ಕರ್ತವ್ಯ ಮತ್ತು ಸಾಮಾಜಿಕ ಸಾಮರಸ್ಯದ ಮೌಲ್ಯಗಳನ್ನು ಬಲಪಡಿಸುತ್ತವೆ. ನಮ್ಮ ರಾಮನು ಭಾವನೆಗಳ ಮೂಲಕ ಒಂದಾಗುತ್ತಾನೆ, ವಿಭಜನೆಯಲ್ಲ, ಅವನಿಗೆ ಮುಖ್ಯವಾದುದು ಭಕ್ತಿ, ವಂಶಾವಳಿಯಲ್ಲ ಎಂದರು.

ಕೆಲವು ದಿನಗಳ ಹಿಂದೆ, ಮುಂದಿನ 10 ವರ್ಷಗಳಲ್ಲಿ ಭಾರತವನ್ನು ಗುಲಾಮಗಿರಿಯ ಮನಸ್ಥಿತಿಯಿಂದ ಮುಕ್ತಗೊಳಿಸುವುದು ನಮ್ಮ ಗುರಿ ಎಂದು ನಾನು ಹೇಳಿದ್ದೆ. ನಾವು ಸ್ವಾತಂವನ್ನು ಗಳಿಸಿದ್ದೇವೆ. ಆದರೆ, ನಾವು ಕೀಳರಿಮೆಯಿಂದ ನಮ್ಮನ್ನು ಮುಕ್ತಗೊಳಿಸಿಕೊಳ್ಳಲು ಸಾಧ್ಯವಾಗಲಿಲ್ಲ. ವಿದೇಶಿ ಶ್ರೇಷ್ಠ ಮತ್ತು ನಮ್ಮದು ಕೀಳು ಎಂದು ನಾವು ನಂಬಲು ಪ್ರಾರಂಭಿಸಿದೆವು. ನಮ್ಮ ಸಂವಿಧಾನವು ವಿದೇಶಿ ಸಂವಿಧಾನಗಳಿಂದ ಪ್ರೇರಿತವಾಗಿದೆ ಎಂದು ಹೇಳಲಾಗುತ್ತಿತ್ತು. ಆದರೆ, ಸತ್ಯವೆಂದರೆ ಭಾರತ ಪ್ರಜಾಪ್ರಭುತ್ವದ ತಾಯಿ. ಪ್ರಜಾಪ್ರಭುತ್ವ ನಮ್ಮ ಡಿಎನ್‌ಎಯಲ್ಲಿದೆ ಎಂದು ತಿಳಿಸಿದರು. ನಮ್ಮ ರಾಮ ತಾರತಮ್ಯ ಮಾಡುವುದಿಲ್ಲ ಮತ್ತು ನಾವು ಕೂಡ ಅದೇ ಮನೋಭಾವದಿಂದ ಮುಂದುವರಿಯುತ್ತೇವೆ. 2047ರ ಹೊತ್ತಿಗೆ ನಾವು ಭಾರತದ ಸ್ವಾತಂದ 100 ವರ್ಷಗಳನ್ನು ಪೂರ್ಣಗೊಳಿಸುವಾಗ, ಅಭಿವೃದ್ಧಿ ಹೊಂದಿದ ಭಾರತವಾಗುವುದನ್ನು ಖಚಿತಪಡಿಸಿಕೊಳ್ಳಬೇಕು ಎಂದು ತಿಳಿಸಿದರು. ಧ್ವಜಾರೋಹಣ ಸಮಾರಂಭಕ್ಕೂ ಮುನ್ನ, ಪ್ರಧಾನಿ ಮೋದಿಯವರು ಮಹರ್ಷಿ ವಾಲ್ಮೀಕಿ ಅಂತರಾಷ್ಟ್ರೀಯ ವಿಮಾನ ನಿಲ್ದಾಣದಿಂದ ದೇವಾಲಯ ಸಂಕೀರ್ಣದವರೆಗೆ ರೋಡ್ ಶೋ ನಡೆಸಿದರು. ಭಾರೀ ಭದ್ರತಾ ನಿಯೋಜನೆಯ ನಡುವೆ ಮೋದಿ ಅವರ ಬೆಂಗಾವಲು ಪಡೆ ಹಾದು ಹೋಗುವಾಗ ಮಹಿಳೆಯರು ಮತ್ತು ಯುವಕರು ಸೇರಿದಂತೆ ಹೆಚ್ಚಿನ ನಿವಾಸಿಗಳು ಮತ್ತು ಭಕ್ತರು ಮಾರ್ಗದುದ್ದಕ್ಕೂ ಸಾಲುಗಟ್ಟಿ ನಿಂತು ಹೂವಿನ ಮಳೆಯನ್ನೇ ಸುರಿಸಿರು. ಹಲವರು ತ್ರಿವರ್ಣ ಧ್ವಜವನ್ನು ಬೀಸಿದರೆ, ಇತರರು ಕಮಲದ ಲಾಂಛನವಿರುವ ಬಿಜೆಪಿ ಧ್ವಜಗಳನ್ನು ಹಿಡಿದು ನಿಂತಿರುವುದು ಕಂಡು ಬಂದಿತು.

## ಭ್ರಷ್ಟ ಅಧಿಕಾರಿಗಳಿಗೆ 'ಲೋಕಾಶಾಕ್'

ಲೋಕಾಯುಕ್ತ ಪೊಲೀಸರು ಮಂಗಳವಾರ ಬೆಳಿಗ್ಗೆ ದಾಳಿ ನಡೆಸಿದ್ದಾರೆ. ತೋಟದ ಮನೆ ಹಾಗೂ ಕಚೇರಿ ಮೇಲೆ ಲೋಕಾಯುಕ್ತ ಪೊಲೀಸ್ ವರಿಷ್ಠಾಧಿಕಾರಿ ಎಂ.ಎಸ್. ಕೌಲಾಪೂರೆ ನೇತೃತ್ವದಲ್ಲಿ ದಾಳಿ ನಡೆದಿದೆ.

ಅಕ್ರಮ ಆಸ್ತಿ ಸಂಪಾದನೆಯ ಆರೋಪದ ಮೇರೆಗೆ ಈ ದಾಳಿ ನಡೆದಿದ್ದು, ದಾಖಲೆಗಳನ್ನು ಪರಿಶೀಲಿಸಲಾಗುತ್ತಿದೆ. ಡಿವೈಎಸ್‌ಪಿ ಕಲಾವತಿ, ಇನ್‌ಸ್ಪೆಕ್ಟರ್ ಗುರುಬಸವರಾಜ್ ತಂಡ ಪರಿಶೀಲನೆ ನಡೆಸುತ್ತಿದೆ. ಮಡಿಕೇರಿ ಲೋಕೋಪಯೋಗಿ ಇಲಾಖೆಯ ಎಇಇ ಗಿರೀಶ ಅವರ ಇಲ್ಲಿನ ವಸತಿ ಗೃಹ ಹಾಗೂ ಮೈಸೂರಿನ ನಿವಾಸದ ಮೇಲೆ ಲೋಕಾಯುಕ್ತ ಪೊಲೀಸರು ಮಂಗಳವಾರ ದಾಳಿ ನಡೆಸಿ ಪರಿಶೀಲನೆ ನಡೆಸಿದ್ದಾರೆ. ಮೈಸೂರಿನ ಹೂಟಗಳ್ಳಿ ನಗರಸಭೆಯ ಕಂದಾಯ ನಿರೀಕ್ಷಕ ರಾಮಸ್ವಾಮಿ ಅವರ ತಿ.ನರಸೀಪುರದ ನಿವಾಸದ ಮೇಲೂ ದಾಳಿ ನಡೆಸಲಾಗಿದೆ.

### ದಾಳಿಗೊಳಗಾದ ಭ್ರಷ್ಟ ಕುಳಗಳು

- **ದಾವಣಗೆರೆ– ಎಪಿಎಂಸಿ ಸಹ ನಿರ್ದೇಶಕ ಪ್ರಭು ಜೆ.**
- **ಮೈಸೂರು– ಮಡಿಕೇರಿ ಪಿಡಬ್ಲ್ಯೂಡಿ ಇಂಜಿನಿಯರ್ ಗಿರೀಶ್ ಡಿ.ಎಂ**
- **ಹಾವೇರಿ – ಶೇಕಪ್ಪ, ಇಇ, ಯೋಜನಾ ನಿರ್ದೇಶಕ ಕಚೇರಿ ಹಾವೇರಿ**

## ಭಗವಾಧ್ವಜ ಹಾರಿಸಿದ ಮೋದಿ

ಎನ್ನಲಾಗಿದೆ. ಅಯೋಧ್ಯೆಯಲ್ಲಿ 48 ಗಂಟೆಗಳ ಕಾಲ ಅಖಂಡ ತಪಸು ಕೈಗೊಂಡ ಸಿಖ್ ಗುರು ತೇಗಬಹದ್ದೂರರ ಬಲಿದಾನ ದಿನವೂ ಇವತ್ತೇ ಬಂದಿದೆ. ಹಾಗಾಗಿ ಇದೇ ದಿನ ಈ ಮಂಗಳ ಕಾರ್ಯವನ್ನು ಹಮ್ಮಿಕೊಳ್ಳಲಾಗಿದೆ ಎಂದು ಪಿಎಂಒ ತಿಳಿಸಿದೆ. ಶಿಖರದ ಮೇಲೆ ಸ್ಥಾಪಿಸಲಾದ 42 ಅಡಿ ಎತ್ತರದ ಧ್ವಜಸ್ತಂಭವನ್ನು 360 ಡಿಗ್ರಿ ತಿರುಗುವಂತೆ ವಿನ್ಯಾಸಗೊಳಿಸಲಾಗಿದೆ. ಧ್ವಜವು ಕೇಸರಿ ಬಣ್ಣ ಹಾಗೂ ತ್ರಿಕೋನಾಕೃತಿಯಲ್ಲಿದೆ. 10 ಅಡಿ ಎತ್ತರ ಮತ್ತು 20 ಅಡಿ ಉದ್ದವಿದೆ. ಇದರ ಮೇಲೆ ಸೂರ್ಯ, 'ಓಂ' ಹಾಗೂ ಕೋವಿದಾರ ಮರವನ್ನು ಚಿತ್ರಿಸಲಾಗಿದೆ. ಸೂರ್ಯನ ಚಿತ್ರ ರಾಮನ ವಂಶವಾದ ಸೂರ್ಯವಂಶವನ್ನು ಸೂಚಿಸುತ್ತದೆ. ಓಂ' ಶುಭ ಸೂಚಕವಾಗಿದ್ದು, ಕೋವಿದಾರ ಮರವು ಅಯೋಧ್ಯೆಯ ಪ್ರಾಚೀನ ಸಂಪ್ರದಾಯಗಳನ್ನು ಪ್ರತಿನಿಧಿಸುತ್ತದೆ.

## ಹೈಕಮಾಂಡ್‌ಗೆ ಖರ್ಗೆ ವರದಿ

ಸರ್ಕಾರವನ್ನು ಮುಜುಗರಕ್ಕೀಡುಮಾಡುವ ಸಾಧ್ಯತೆಯಿದೆ. ಹೀಗಾಗಿ, ಅದಕ್ಕೂ ಮೊದಲೇ ಇಬ್ಬರೂ ನಾಯಕರನ್ನು ಒಟ್ಟಿಗೆ ಕುಳ್ಳಿರಿಸಿ ಗೊಂದಲ ಪರಿಹರಿಸಲು ಕಾಂಗ್ರೆಸ್ ಹೈಕಮಾಂಡ್ ಪ್ರಯತ್ನಿಸುವ ಸಾಧ್ಯತೆಯಿದೆ ಎಂದು ಕಾಂಗ್ರೆಸ್ ಮೂಲಗಳು ತಿಳಿಸಿವೆ. ರಾಹುಲ್ ಗಾಂಧಿ ಅವರನ್ನು ಸೋಮವಾರ ಭೇಟಿ ಮಾಡಿ ಚರ್ಚೆ ನಡೆಸಿರುವ ವಿಧಾನ ಪರಿಷತ್ ಸದಸ್ಯ ಬಿ.ಕೆ.ಹರಿಪ್ರಸಾದ್ ಅವರು ಬೆಂಗಳೂರಿಗೆ ವಾಪಸಾಗಿದ್ದಾರೆ.

# ಗಮನ ಸೆಳೆದ ವಿಜ್ಞಾನ ವಸ್ತು ಪ್ರದರ್ಶನ

ಮೈಸೂರು: ನಗರದ ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ನಡೆದ ಯುವ ಜನೋತ್ಸವದಲ್ಲಿ ವಿವಿಧ ಮಾದರಿಗಳ ವಿಜ್ಞಾನ ವಸ್ತು ಪ್ರದರ್ಶನ ಮತ್ತು ಸಾಂಸ್ಕೃತಿಕ ಚಟುವಟಿಕೆಗಳು ಗಮನ ಸೆಳೆದವು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ??ಂವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ನೆಹರು ಯುವ ಕೇಂದ್ರ, ರಾಷ್ಟ್ರೀಯ ಸೇವಾ ?ಂಜನೆ, ಮೈಸೂರು ವಿವಿ, ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು, ರಾಜ್ಯ ವಿಜ್ಞಾನ ಮತ್ತು ಜ್ಞಾನ ಮಂಡಳಿ ಸಹಯೋಗದಲ್ಲಿ ನಡೆದ ಕಾರ್ಯಕ್ರಮದಲ್ಲಿ ಕಂಸಾಳೆ, ಡೊಳ್ಳು ಕುಣಿತದ ನೃತ್ಯಗಳು ಆಕರ್ಷಿಸಿದವು.

ಮಹಾರಾಣಿ ವಿಜ್ಞಾನ ಕಾಲೇಜಿನ ವಿದ್ಯಾರ್ಥಿನಿಯರು ಮಹದೇಶ್ವರ ಗೀತೆಗೆ ಕಂಸಾಳೆ ನೃತ್ಯ ಪ್ರದರ್ಶಿಸಿದರು. ಮತ್ತೊಂದು ತಂಡ ಡೊಳ್ಳು ನಾದಕ್ಕೆ ಸಮೂಹ ನೃತ್ಯಕ್ಕೆ ನೆರೆದಿದ್ದ ಯುವ ಸಮೂಹ ಮನಸೋತರು. ಇದರೊಂದಿಗೆ ವಿವಿಧ ಕಾಲೇಜಿನ ವಿದ್ಯಾರ್ಥಿಗಳು ಜಾನಪದ ನೃತ್ಯ, ಕಥೆ ಬರೆಯುವ ಸ್ಪರ್ಧೆ, ಚಿತ್ರಕಲೆ, ಕವಿತೆ ಬರೆಯುವ ಸ್ಪರ್ಧೆಗಳು ನಡೆದವು.



**ವಿಜ್ಞಾನ ಮಾದರಿಗಳ ಆಕರ್ಷಣೆ:** ಮಹಾರಾಣಿ ವಿಜ್ಞಾನ ಕಾಲೇಜಿನ ಪ್ರಾಣಿಶಾಸ, ಗಣಿತಶಾಸ, ಜೈವಿಕ ರಸಾ?ಂನಶಾಸ, ಜೀವ ರಸಾ?ಂನಶಾಸ, ಸಸ್ಯಶಾಸ, ಸೂಕ್ಷ್ಮ ಜೀವ ಶಾಸ ವಿಭಾಗದ ವಿದ್ಯಾರ್ಥಿನಿಯರು ಮಳೆ ನೀರು ಕುಯಿಲು, ರಕ್ತ ಪರಿಚಲನೆ, ಆಹಾರ ಕಲ ಬೆರೆಕೆ, ರಕ್ತ ಶುದ್ಧೀಕರಣ, ಡಿಎನ್‌ಎ ಮಾದರಿ, ಋತು ಚಕ್ರ ಸಂಬಂ ಕಾಯಿಲೆಯ, ಪೈಥರೋರಸ್‌ನ ಪ್ರಮೇಯ ಟೂಡಿ ಯಿಂದ ತ್ರಿ ಡಿ ಮಾದರಿಗಳನ್ನು ತಯಾರಿಸಿ ವಿವರಣೆ ನೀಡುತ್ತ ಗಮನ ಸೆಳೆದರು. ಜೆಎಸ್‌ಎಸ್ ಕಾಲೇಜಿನ ವಿದ್ಯಾರ್ಥಿಗಳು ಬೆಳಕು ಚೆಲ್ಲುವ ಸಸ್ಯಗಳನ್ನು ಕುರಿತು ವಿವರಿಸಿದರು. ಈ ವಿಜ್ಞಾನ ವಸ್ತು ಪ್ರದರ್ಶನವೂ ಹೆಚ್ಚು ಗಮನ ಸೆಳೆಯಿತು. ಕಾರ್ಯಕ್ರಮಕ್ಕೆ ಬಂದವರು ವಿಜ್ಞಾನ ವಸ್ತು ಪ್ರದರ್ಶನ ಭೇಟಿ ನೀಡಿ ವಿದ್ಯಾರ್ಥಿನಿಯರಿಂದ ಮಾಹಿತಿ ಪಡೆದು ತಮ್ಮಗೆ ತಿಳಿಯದ ವಿಜ್ಞಾನದ ವಿಸ್ಮಯಗಳನ್ನು ಕೌತುಕದಿಂದ ಆಲಿಸಿದರು.

ಶಾಸಕ ತನ್ವೀರ್ ಸೇಠ್ ವಾತನಾಡಿ, ಪತ್ಯದೊಂದಿಗೆ ಯುವ ಸಮೂಹ ಸಾಂಸ್ಕೃತಿಕ, ಕ್ರೀಡಾ ಚಟುವಟಿಕೆಯಲ್ಲಿ ಪಾಲ್ಗೊಳ್ಳುವುದು ಅತಿ ಅವಶ್ಯ. ಸೋಲು ಗೆಲುವಿನ ಲೆಕ್ಕಚಾರವನ್ನು ಬಿಟ್ಟು ಚಟುವಟಿಕೆಯಲ್ಲಿ ಭಾಗವಹಿಸಬೇಕು. ಯುವ ಸಮೂಹ ತಾರುಣ್ಯಾವ ಒಂದು ಸಂಕಿರ್ಣ ಸಂ.ಕ್ರಮಣದ ಕಾಲಘಟ್ಟ. ಇಂತಹ ಕಾಲಘಟ್ಟದಲ್ಲಿ ಗುರಿಯನ್ನು ನಿರ್ಧರಿಸಬೇಕು. ನನ್ನಿಂದ ಸಾಧ್ಯವಿಲ್ಲ ಎಂದು ಹೇಳಬೇಡಿ ಎಂದು ಹೇಳಿದರು. ಪ್ರಾದೇಶಿಕ ಆಯುಕ್ತ ನಿತೀಶ್ ಕುಮಾರ್ ಮಾತನಾಡಿ, ಕಠಿಣ ಪರಿಶ್ರಮ, ಆಸಕ್ತಿ, ಕ್ರೀಯಾಶೀಲತೆ ಯಶಸ್ಸಿನ ಮಂತ್ರಗಳು. ವಿದ್ಯಾರ್ಥಿಗಳು ಇವುಗಳನ್ನು ಮೈಗೂಡಿಸಿಕೊಂಡರೆ ಸಾಧನೆಯ ಹಾದಿಯಲ್ಲಿ ಸಾಗಬಹುದು ಎಂದು ಹೇಳಿದರು. ಮಹಾರಾಣಿ ವಿಜ್ಞಾನ ಕಾಲೇಜಿನ ಪ್ರಾಂಶುಪಾಲ ಡಾ.ಅಬ್ದುಲ್ ರೆಹಮಾನ್, ಪ್ರಾಧ್ಯಾಪಕ ಗೋವಿಂದರಾಜು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕ ಭಾಸ್ಕರ್ ನಾಯಕ ವೇದಿಕೆಯಲ್ಲಿ ಹಾಜರಿದ್ದರು. ಪ್ರೊ.ಶಿವಲಿಂಗ್‌ಂಯ್ಯ, ಶಿವಪ್ರಸಾದ, ಸೆಂಟ್ ಫಿಲೋಮಿನಾದ ಅಲ್ಫೋನ್ ಡಿಸೋಜಾ ತೀರ್ಪುಗಾರರಾಗಿದರು.

# ಪ್ರತಿ ಜಿಲ್ಲೆಯಲ್ಲೂ ಸೈಬರ್ ಲ್ಯಾಬ್

## ಗೃಹಸಚಿವ ಡಾ.ಜಿ.ಪರಮೇಶ್ವರ್ ಹೇಳಿಕೆ । ನಜರ್‌ಬಾದ್ ಪೊಲೀಸ್ ಠಾಣೆಗೆ ಭೇಟಿ

ಮೈಸೂರು: ಕರ್ನಾಟಕ ರಾಜ್ಯ ಸೇರಿದಂತೆ ದೇಶದಲ್ಲೇ ಹೆಚ್ಚು ಹೆಚ್ಚು ಸೈಬರ್ ಅಪರಾಧ ಮತ್ತು ವಂಚನೆ ಪ್ರಕಣಗಳು ನಡೆಯುತ್ತಿದ್ದು ಸೈಬರ್ ಅಪರಾಧ ತಡೆಗಟ್ಟುವ ಬಗ್ಗೆ ಪೊಲೀಸರಿಗೆ ತರಬೇತಿ ನೀಡಲಾಗುತ್ತಿದೆ ಎಂದು ಗೃಹ ಸಚಿವ ಡಾ.ಜಿ.ಪರಮೇಶ್ವರ್ ತಿಳಿಸಿದರು.

ನಗರದ ನಜರ್ ಬಾದ್ ಪೊಲೀಸ್ ಠಾಣೆಗೆ ಮಂಗಳವಾರ ದಿಢೀರ್ ಭೇಟಿ ನೀಡಿದ ಅವರು, ಪೊಲೀಸ್ ಠಾಣೆ ಪರಿಶೀಲಿಸಿ, ದೂರು ನೀಡಲು ಆಗಮಿಸಿದ್ದ ಸಾರ್ವಜನಿಕರೊಂದಿಗೆ ಚರ್ಚಿಸಿದರು. ಬಳಿಕ ಮಾಧ್ತಮದವರೊಂದಿಗೆ ಮಾತನಾಡುದ ಅವರು, ರಾಜ್ಯ ಸೇರಿದಂತೆ ದೇಶದಲ್ಲಿ ಹೆಚ್ಚು ಹೆಚ್ಚು ಸೈಬರ್ ವಂಚನೆ ನಡೆಯುತ್ತಿದೆ. ವಿದ್ಯಾವಂತರೆ ಸೈಬರ್ ವಂಚನೆಗೆ ಬಲಿಯಾಗುತ್ತಿದ್ದಾರೆ. ಮೈಸೂರು ನಗರ ಒಂದರಲ್ಲೇ ಈ ವರ್ಷ ರೂ.30 ಕೋಟಿ ವಂಚನೆ ಪ್ರಕರಣ ನಡೆದಿದೆ. ಅದರಲ್ಲಿ 4–5 ಕೋಟಿ ಮಾತ್ರ ರಿಕವರ್ ಆಗಿದ್ದು ಇನ್ನು 25 ಕೋಟಿ ವಂಚನೆಯಾಗಿದೆ. ಕಳೆದ ವರ್ಷ ರೂ.40 ಕೋಟಿ ಸೈಬರ್ ವಂಚನೆ ನಡೆದಿತ್ತು. ಸೈಬರ್ ಅಪರಾಧ ನಡೆದರೆ ತಕ್ಷಣ ಅದನ್ನು ಪತ್ತೆಹಚ್ಚುವುದು ಹೇಗೆ ಮತ್ತು ಅದನ್ನು ತಡೆಗಟ್ಟುವುದು ಹೇಗೆ ಎಂಬುದರ ಬಗ್ಗೆ ಪೊಲೀಸರಿಗೆ ತರಬೇತಿ ನೀಡಲಾಗುವುದು ಎಂದು ಹೇಳಿದರು.

ಪ್ರತಿಯೊಬ್ಬ ಪೊಲೀಸ್ ಪೇದೆಯಿಂದ ಹಿಡಿದು ಹಿರಿಯ ಅಧಿಕಾರಿವರೆಗೂ ಸೈಬರ್ ಅಪರಾಧದ ಬಗ್ಗೆ ಮಾಹಿತಿ ಮತ್ತು ತಿಳುವಳಿಕೆ ಇರಬೇಕು. ಅದಕ್ಕಾಗಿ ಪ್ರತಿಜಿಲ್ಲೆಯಲ್ಲೂ ಸೈಬರ್ ಲ್ಯಾಬ್ ತೆರೆಯಲಾಗುತ್ತಿದೆ. ಈಗಾಗಲೇ ಕೆಲವು ಜಿಲ್ಲೆಯಲ್ಲಿ ಆರಂಭವಾಗಿದ್ದು, ಬೆಂಗಳೂರು ನಗರದಲ್ಲಿ ಸೈಬರ್



ಲ್ಯಾಬ್ ಕಾರ್ಯನಿರ್ವಹಿಸುತ್ತಿದೆ. ಈ ಲ್ಯಾಬ್ ಮೂಲಕ ಪೊಲೀಸರಿಗೆ ತರಬೇತಿ ಜೊತೆಗೆ ಸರ್ವಾಜನಿಕ ಜಾಗೃತಿಯನ್ನು ಮೂಡಿಸಲಾಗುವುದು ಎಂದು ಹೇಳಿದರು. ಸೈಬರ್ ವಂಚನೆಗೆ ವಿದ್ಯಾವಂತರೆ ಬಲಿಯಾಗುತ್ತಿರುವುದು ಕಳವಳಕಾರಿಯಾಗಿದೆ. ಬೆಂಗಳೂರಿನಲ್ಲಿ ಐಟಿ ಉದ್ಯೋಗಿಯೊಬ್ಬರು ರೂ.32 ಕೋಟಿ ವಂಚನೆಗೊಳಗಾಗಿದ್ದಾರೆ. ಒಂದು ವರ್ಷದಿಂದ ಅವರು ವಂಚನೆಗೆ ಒಳಗಾಗಿ ಹೇಳಿಕೊಳ್ಳದ ಸ್ಥಿತಿಯಲ್ಲಿದ್ದು ಈಗ ದೂರು ನೀಡಿದ್ದಾರೆ. ಸೈಬರ್ ವಂಚನೆಗೊಳಗಾಗಿ ಇಪ್ಪತ್ತನಾಲ್ಕು ಗಂಟೆ ಒಳಗೆ ಪೊಲೀಸರಿಗೆ ದೂರು ನೀಡಿದರೆ ಅದು ಗೋಲ್ಡನ್ ಸಮಯ ಆಗಲಿದ್ದು, ಅಪರಾಧಿಗಳನ್ನು ಪತ್ತೆ ಹಚ್ಚಿ ಹಣ ರಿಕವರಿ ಮಾಡಲು ಹೆಚ್ಚು ಅನುಕೂಲವಾಗಲಿದೆ. ಸಾರ್ವಜನಿಕರಿಗೆ ಈ ಬಗ್ಗೆ ಜಾಗೃತಿ ಮೂಡಿಸುವ ಕೆಲಸವನ್ನು ಪೊಲೀಸರು ಮಾಡುವಂತೆ ಸೂಚಿಸಿದ್ದೇನೆ. ಸೈಬರ್ ವಂಚಕರು ಬೆಂಗಳೂರಿನಲ್ಲಿ ಕುಳಿತುಕೊಂಡು ಅಮೇರಿಕಾ ಮತ್ತು ಇತರೆ ದೇಶಗಳಲ್ಲಿ ವಂಚನೆ ಮಾಡುತ್ತಾರೆ. ಈ ಸಂಬಂಧ ಬೆಂಗಳೂರಿನಲ್ಲಿ ಇಂತಹದೊಂದು ಪ್ರಕರಣ ಪತ್ತೆ ಹಚ್ಚಿ ಹಲವರನ್ನು ಬಂಧಿಸಲಾಗಿದೆ. ಹಾಗಾಗಿ ಸೈಬರ್ ಅಪರಾಧದ ಬಗ್ಗೆ ಜಾಗೃತಿ ಅಗತ್ಯವಾಗಿದೆ ಎಂದು ಹೇಳಿದರು.

ನ್ಯಾಷನಲ್ ಪೊಲೀಸ್ ಕಮೀಷನ್ ಪ್ರಕಾರ ಒಬ್ಬ ಪೊಲೀಸ್ ಪೇದೆಗೆ ಎಷ್ಟು ಸಮಯ ಕೆಲಸ ನೀಡಬೇಕೊ ಆ ನಿಯಮದ ಪ್ರಕಾರವೇ ನಡೆದುಕೊಳ್ಳಲಾಗುತ್ತಿದೆ. ಪಿ.ಎಸ್.ಐ ಸ್ಕ್ಯಾಮ್ ಸೇರಿದಂತೆ ಇತರೆ ವಿಚಾರಗಳಿಂದ ಪೊಲೀಸ್ ನೇಮಕ ಆಗಿರಲಿಲ್ಲ. ಈಗ ಮೈಸೂರಿನಲ್ಲೇ 900 ಮಂದಿ ಪಿ.ಎಸ್.ಐ.ಗಳು ತರಬೇತಿ ಪಡೆಯುತ್ತಿದ್ದು ಶೀಘ್ರದಲ್ಲೇ ಕರ್ತವ್ಯಕ್ಕೆ ಹಾಜರಾಗಲಿದ್ದಾರೆ. ನೇಮಕಾತಿ ವಿಳಂಭವಾದ ಸಮಯದಲ್ಲಿ ಪೊಲೀಸರಿಗೆ ಸ್ವಲ್ಪ ಒತ್ತಡವಾಗುವುದು ನಿಜ ಎಂದು ಹೇಳಿದರು.

### ಸಿಎಂ ಬದಲಾವಣೆ ಉತ್ತರಿಸಲ್ಲವೆಂದ ಪರಂ

ಮೈಸೂರು: ರಾಜ್ಯದಲ್ಲಿ ಮುಖ್ಯಮಂತ್ರಿ ಬದಲಾವಣೆ ವಿಚಾರ ಸೇರಿದಂತೆ ರಾಜಕೀಯದ ಯಾವುದೇ ಪ್ರಶ್ನೆಗಳಿಗೂ ನಾನು ಉತ್ತರ ನೀಡುವುದಿಲ್ಲ ಎಂದು ಗೃಹ ಸಚಿವ ಡಾ.ಜಿ.ಪರಮೇಶ್ವರ್ ಹೇಳಿದರು.

ನಗರದಲ್ಲಿ ಶುಕ್ರವಾರ ಮಾಧ್ಯಮದವರೊಂದಿಗೆ ಮಾತನಾಡಿದ ಅವರನ್ನು ರಾಜ್ಯದಲ್ಲಿ ನಡೆಯುತ್ತಿರುವ ರಾಜಕೀಯ ವಿದ್ಯಮಾನಗಳಿಗೆ ಸಂಬಂಧಪಟ್ಟಂತೆ ಕೇಳಿದ ಮಾಧ್ಯಮದವರ ಪ್ರಶ್ನೆಗಳಿಗೆ ಯಾವುದಕ್ಕೂ ಉತ್ತರ ಕೊಡುವುದಿಲ್ಲ ಎಂದು ಹೇಳಿದರು. ಸಿಎಂ ಬದಲಾವಣೆ ಸೇರಿದಂತೆ ರಾಜಕೀಯದ ಬಗ್ಗೆ ಹಲವಾರು ಜನರು ಮಾತನಾಡುತ್ತಿದ್ದಾರೆ. ನಾನು ಮಾತನಾಡುವುದಿಲ್ಲ, ಜಾಣ ಮೌನ ಎಂದಾದರೂ ತಿಳಿದುಕೊಳ್ಳಿ ಅಥವಾ ಬೇರೆ ಏನಾದರು ತಿಳಿದುಕೊಳ್ಳಿ ನಾನು ಮಾತ್ರ ಯಾವುದಕ್ಕೂ ಉತ್ತರಿಸುವುದಿಲ್ಲ ಎಂದು ಹೇಳಿದರು.

ಮೊದಲ ಪುಟದಿಂದ

## ನನ್ನ ಮುಖ್ಯಮಂತ್ರಿ ಮಾಡಿ ಎಂದು ಕೇಳಿಲ್ಲ

ಎಂದು ಮಾರ್ಮಿಕವಾಗಿ ಉತ್ತರಿಸಿದರು. ವಿಧಾನಸಭಾ ಚುನಾವಣೆ ಸಂದರ್ಭದಲ್ಲಿ ನಾನು ಸಹ ಮುಖ್ಯಮಂತ್ರಿ ಹುದ್ದೆಯ ಆಕಾಂಕ್ಷಿಯಾಗಿದ್ದೆ. ಪ್ರಚಾರದ ಸಂದರ್ಭದಲ್ಲಿ ಕೆಲವೆಡೆ ನನ್ನ ಮುಖ ನೋಡಿ ಮತ ಕೊಡಿ ಎಂದು ಕೇಳಿದ್ದೇನೆ. ನನ್ನೊಂದಿಗೆ ಎಲ್ಲರೂ ಸಾಮೂಹಿಕವಾಗಿ ಮತ ಯಾಚಿಸಿದ್ದಾರೆ. ಅದರಿಂದಾಗಿಯೇ ಪಕ್ಷ ಅಧಿಕಾರಕ್ಕೆ ಬಂದಿದೆ ಎಂದು ಹೇಳಿದರು.

ನಿಮ್ಮ ಪರವಾಗಿ ಕೆಲ ಶಾಸಕರು ದೆಹಲಿಗೆ ಭೇಟಿ ನೀಡಿದ್ದಾರಲ್ಲ? ಎಂಬ ಪ್ರಶ್ನೆಗೆ, ನನ್ನ ಪರವಾಗಿ ದೆಹಲಿಗೆ ಹೋಗಿ ಎಂದು ಯಾರಿಗೂ ನಾನು ಹೇಳಿಲ್ಲ. ಫೋನ್ ಕಾಲ್ ಸಹ ಮಾಡಿಲ್ಲ. ಹೋಗಿರುವವರಿಗೆ ಯಾಕೆ ಹೋಗಿದ್ದೀರಿ ಎಂದು ಸಹ ಕೇಳಿಲ್ಲ. ಕೆಲವರು ಸಚಿವರಾಗಲು ಓಡಾಡುತ್ತಿದ್ದಾರೆ. ಅದೆಲ್ಲಾ ಅವರಿಗೆ ಬಿಟ್ಟದ್ದು ಎಂದು ಪ್ರತಿಕ್ರಿಯಿಸಿದರು.

ಲಿಂಗಾಯತ ಕೋಟಾದಲ್ಲಿ ನಾನೇಕೆ ಸಿ.ಎಂ ಆಗಬಾರದು ಎಂಬ ಮುಖ್ಯಮಂತ್ರಿ ಆರ್ಥಿಕ ಸಲಹೆಗಾರ ಬಸವರಾಜ ರಾಯರಡ್ಡಿ ಹೇಳಿಕೆ ಹಾಗೂ ರಾಜ್ಯದ ಇತಿಹಾಸದಲ್ಲೇ ಮೊದಲ ಬಾರಿಗೆ ಪಕ್ಷದೊಳಗೆ ಶಾಸಕರ ಖರೀದಿ ಎಂಬ ಬಿಜೆಪಿಯ ಮಾಜಿ ಮುಖ್ಯಮಂತ್ರಿ ಡಿ.ವಿ.ಸದಾನಂದ ಗೌಡ ಅವರ ಹೇಳಿಕೆ ಕುರಿತ ಪ್ರಶ್ನೆಗೆ, ಅವರ ಹೇಳಿಕೆಗೆ ನಾನು ಪ್ರತಿಕ್ರಿಯಿಸುವುದಿಲ್ಲ. ಇಷ್ಟಕ್ಕೂ ನಾನು ಅವರ ವಕ್ತಾರನಲ್ಲ ಎಂದು ಹೇಳಿದರು.

## ಕಷ್ಟದಲ್ಲಿದ್ದಾಗ ಮಾಡಿದ ಪೂಜೆ ಮುಖ್ಯ

**ಓಡಾಡಿದ್ದಾರೆ. ಹಲವರು ತಿಹಾರ್ ಜೈಲಿಗೆ ಬಂದು ಭೇಟಿ ಮಾಡಿ, ಕಷ್ಟಕಾಲದಲ್ಲಿ ಜೊತೆಗೆ ನಿಂತಿದ್ದಾರೆ. ನನ್ನ ಪತ್ನಿ ಮತ್ತು ಮಕ್ಕಳಿಗೆ ಧೈರ್ಯ ತುಂಬಿದ್ದಾರೆ. ಈಗಿನ ಪೂಜೆಗಿಂತ ಆಗಿನ ಪೂಜೆ ಮುಖ್ಯವಾದುದು. ಅವರ ಋಣ ತೀರಿಸಲಾಗದು ಎಂದು ಡಿ.ಕೆ.ಶಿವಕುಮಾರ್ ಪ್ರತಿಕ್ರಿಯಿಸಿದರು.**

## ರಹಸ್ಯ ಒಪ್ಪಂದ ಬಹಿರಂಗಪಡಿಸಲ್ಲ: ಡಿಕೆಶಿ

ನಾನು ಆತ್ಮಸಾಕ್ಷಿಯನ್ನು ನಂಬುತ್ತೇನೆ. ಆತ್ಮಸಾಕ್ಷಿಗೆ ತಕ್ಕಂತೆ ನಾವು ಕೆಲಸ ಮಾಡಬೇಕು ಎಂದು ಪರೋಕ್ಷವಾಗಿ ಸಿದ್ದರಾಮಯ್ಯ ಬಣಕ್ಕೆ ತಿರುಗೇಟು ನೀಡಿದ್ದಾರೆ.

ರಾಜ್ಯದಲ್ಲಿ ನಾಯಕತ್ವ ಬದಲಾವಣೆ ವಿಚಾರವಾಗಿ ಖರ್ಗೆ ಹಾಗೂ ರಾಹುಲ್ ಗಾಂಧಿ ಚರ್ಚೆ ವಿಚಾರವಾಗಿ ಮಾತನಾಡಿದ ಅವರು, ಚರ್ಚೆ ಮಾಡುವ ವಿಚಾರ ನನಗೆ ಗೊತ್ತಿಲ್ಲ. ಅವರು ನನಗೆ ಈ ಬಗ್ಗೆ ಹೇಳಿಲ್ಲ.

ನಾವೆಲ್ಲರೂ ಸೇರಿ 2028 ಹಾಗೂ 2029ರ ಚುನಾವಣೆ ಗುರಿಯತ್ತ ಗಮನ ಹರಿಸಬೇಕು ಎಂದರು.

## ಸಿಎಂ ಗದ್ದುಗೆ: ಡಿಕೆಶಿಗೆ ಖರ್ಗೆ ಅಭಯ

ಆದರೆ, ಇದುವರೆಗೂ ಶಿವಕುಮಾರ್ ಅವರು ಭೇಟಿ ಮಾಡಿರಲಿಲ್ಲ. ದೆಹಲಿಯಲ್ಲಿ ರಾಹುಲ್ ಗಾಂಧಿ ಅವರನ್ನು ಭೇಟಿ ಮಾಡಿ ರಾಜ್ಯ ನಾಯಕತ್ವದ ಗೊಂದಲ, ಪ್ರಸಕ್ತ ರಾಜಕೀಯ ವಿದ್ಯಮಾನಗಳ ಕುರಿತು ಖರ್ಗೆ ಅವರು ನಾಳೆ ಸಮಾಲೋಚನೆ ನಡೆಸುವ ಸಾಧ್ಯತೆಯಿದೆ. ಜೊತೆಗೆ ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ, ಸಚಿವರ ಜೊತೆಗಿನ ಮಾತುಕತೆಯ ವಿಚಾರಗಳನ್ನೂ ಚರ್ಚಿಸುವ ಸಂಭವವಿದೆ.

## 2ದಿನದಲ್ಲಿ ಸಿಎಂ ಆಗದಿದ್ದರೆ ಮತ್ತೆಂದೂ ಆಗಲ್ಲ!

ಹೂ ವರ ಕೊಟ್ಟಿದ್ದಾಳೆ. ಡಿ.ಕೆ.ಶಿವಕುಮಾರ್ ಖಂಡಿತ ಮುಖ್ಯಮಂತ್ರಿ ಆಗುತ್ತಾರೆ. ಯಾರು ಏನೇ ಮಾಡಿದರೂ ದೈವ ಸಂಕಲ್ಪದ ಮುಂದೆ ಯಾವುದೂ ನಡೆಯೋದಿಲ್ಲ ಎಂದು ಅವರು ಪ್ರತಿಕ್ರಿಯೆ ನೀಡಿದ್ದಾರೆ.

## ಮಹಾಂತೇಶ್ ಬೀಳಗಿ ಸೇರಿ ಮೂವರ ಸಾವು

ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ ಚಿಕಿತ್ಸೆ ಫಲಕಾರಿಯಾಗದೆ ಸಾವನ್ನಪ್ಪಿದ್ದಾರೆ.

ವಿಜಯಪುರದಿಂದ ಕಲಬುರಗಿಗೆ ತೆರಳುತ್ತಿದ್ದ ವೇಳೆ ಕಲಬುರಗಿ ಜಿಲ್ಲೆಯ ಜೇವರ್ಗಿ ತಾಲೂಕಿನ ಗೌನಳ್ಳಿ ಕ್ರಾಸ್ ಬಳಿ ಈ ಅಪಘಾತ ಸಂಭವಿಸಿದೆ. ಕಾರಿಗೆ ಅಡ್ಡ ಬಂದ ನಾಯಿಯನ್ನು ಉಳಿಸಲು ಹೋಗಿ ಕಾರು ಚಾಲಕನ ನಿಯಂತ್ರಣ ತಪ್ಪಿ ಪಲ್ಟಿಯಾಗಿದೆ ಎಂದು ತಿಳಿದುಬಂದಿದೆ.

ಹಿರಿಯ ಐಎಎಸ್ ಅಧಿಕಾರಿಯಾಗಿದ್ದ ಮಹಾಂತೇಶ್ ಬೀಳಗಿ ಅವರು ಬೆಸ್ಕಾಂ ಎಂಡಿ ಆಗಿ, ದಾವಣಗೆರೆ ಜಿಲ್ಲಾಧಿಕಾರಿಯಾಗಿ ಕಾರ್ಯನಿರ್ವಹಿಸಿದ್ದರು.

### ರಾಹುಲ್– ಪ್ರಿಯಾಂಕ್ ಭೇಟಿ

**ನಡೆಸಿದ್ದಾರೆ. ಅಲ್ಲದೆ, ಮುಖ್ಯಮಂತ್ರಿ ಸ್ಥಾನದ ಕುರಿತು ರಾಜ್ಯ ನಾಯಕರಿಗೆ ಪ್ರಿಯಾಂಕ್ ಮೂಲಕ ಸ್ಪಷ್ಟ ಸಂದೇಶ ರವಾನಿಸಿದ್ದಾರೆ ಎಂದು ತಿಳಿದುಬಂದಿದೆ.**

## ನೀವ್ ನೀವೇ ಅಗ್ರಿಮೆಂಟ್ ಮಾಡಿಕೊಂಡರೆ ನಾವೇನು ಮಾಡಬೇಕು?

ಎಂದು ಹೇಳಿದರು. ಲಿಂಗಾಯತ ನಾಯಕರ ಬೆಂಬಲ ಸಿದ್ದರಾಮಯ್ಯಗೆ ಇದೆ. ಸಿದ್ದರಾಮಯ್ಯ ಅವರಿಗೆ ಲಿಂಗಾಯತ ಸಮಾಜ ಸಪೋರ್ಟ್ ಕೊಡ್ತಾ ಇದೆ. ಲಿಂಗಾಯತ ಸಮಾಜದ ಯಾರಾದರೂ ಸಿದ್ದರಾಮಯ್ಯರನ್ನ ತೆಗೀರಿ ಎಂದಿ ದ್ದಾರಾ? ಮೊನ್ನೆ ಎಲ್ಲಾ ಸ್ವಾಮೀಜಿಗಳು ಸಿದ್ದರಾಮಯ್ಯಗೆ ವಿಭೂತಿ ಹಚ್ಚಿ ಕೂರಿಸಿದ್ದರು. ಬಸವಣ್ಣನ ಪರ ಲಿಂಗಾಯತರಗಿಂತ ಹೆಚ್ಚು ಪ್ರಚಾರ ಮಾಡೋದೆ ಸಿದ್ದರಾಮಯ್ಯ. ಹೀಗಾಗಿ, ಸಿದ್ದರಾಮಯ್ಯ ಅವರನ್ನು ಎಲ್ಲ ಲಿಂಗಾಯತರು ಇಷ್ಟ ಪಡ್ತಾರೆ ಎಂದರು.

ವರ್ತಮಾನ
ಜಾಹಿರಾತಿಗೆ ಉತ್ತಮ ಮಾಧ್ಯಮ


**ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ**
ಕಾರ್ಯದರ್ಶಿಗಳ ಕಾರ್ಯಾಲಯ, ಚಾಮುಂಡಿಬೆಟ್ಟ, ಮೈಸೂರು–570010.
Phone: 0821-2590027, e-mail: beerecochamunditemple@gmail.com

ಸಂ.: ಶ್ರೀಚಾಕ್ಷೇಅಪ್ರಾ(10)ಸಿಆರ್: /2025–26 ದಿನಾಂಕ: 22.11.2025

**ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ CALL-2 (ದ್ವಿ ಲಕೋಟೆ)**
**ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ**

ಮೈಸೂರು ಚಾಮುಂಡಿಬೆಟ್ಟ ಶ್ರೀ ಚಾಮುಂಡೇಶ್ವರಿ ದೇವಸ್ಥಾನದಲ್ಲಿ ಕಛೇರಿಯಿಂದ ಸೂಚಿತ ಅವಧಿಗೆ ಈ ಕೆಳಕಂಡ ವಿವಿಧ ಬಾಬ್ತುಗಳಿಗೆ ಟೆಂಡರ್ ಕರೆಯಲಾಗಿದೆ. ಆಸಕ್ತರು ಟೆಂಡರ್ ನಮೂನೆಗಳನ್ನು ಇ–ಪ್ರೊಕ್ಯೂರ್‌ಮೆಂಟ್ (https://kppp.karnataka.gov.in) ಮೂಲಕ ಸಲ್ಲಿಸಬಹುದಾಗಿದೆ. ಟೆಂಡರ್ ದಾಖಲೆಯಲ್ಲಿ ತಿಳಿಸಿರುವಂತೆ (Technical qualification criteria)ದ ಎಲ್ಲಾ ಅಗತ್ಯ ದಾಖಲೆಗಳನ್ನು ಸಲ್ಲಿಸುವುದು. ಈ ಕೆಳಕಂಡಂತೆ ನಿಗದಿಪಡಿಸಿದ ಇ.ಎಂ.ಡಿ.ಯನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನಮೂದಿಸಿದ ಯಾವುದಾದರು ಒಂದು ರೀತಿಯಲ್ಲಿ ಸಲ್ಲಿಸತಕ್ಕದ್ದು. ಇ.ಎಂ.ಡಿ.ಯು ಟೆಂಡರ್‌ನ ನ್ಯಾಯ ಸಮ್ಮತಾ ಮಾನ್ಯತಾ ಅವಧಿಗಿಂತ (Validity period) 45 ದಿನಗಳ ನಂತರದ ವರೆಗೆ ಮಾನ್ಯತೆ ಇರತಕ್ಕದ್ದು. ಹೆಚ್ಚಿನ ಮಾಹಿತಿಗಳನ್ನು ಕಛೇರಿ ವೇಳೆಯಲ್ಲಿ ಪಡೆಯಬಹುದು.

| ಕ್ರ ಸಂ | ಟೆಂಡರ್ ವಿವರ | ಅಂದಾಜು ಮೊತ್ತ (ರೂ.ಗಳಲ್ಲಿ) | ಇ.ಎಂ.ಡಿ ಮೊತ್ತ (ರೂ.ಗಳಲ್ಲಿ) |
|---|---|---|---|
| 1 | ಚಾಮುಂಡಿಬೆಟ್ಟ ಶ್ರೀ ಚಾಮುಂಡೇಶ್ವರಿ ದೇವಸ್ಥಾನದಲ್ಲಿ ಜರುಗುವ ಚಂಡಿ ಹೋಮಕ್ಕೆ ಅಗತ್ಯವಾಗಿ ಬೇಕಾದ ಪದಾರ್ಥಗಳನ್ನು ಸರಬರಾಜು ಮಾಡುವ ಗುತ್ತಿಗೆ ಹಕ್ಕು (ಒಂದು ವರ್ಷದ ಅವಧಿಗೆ) | 21,00,000 | 42,000 |

**ಇ–ಪ್ರೊಕ್ಯೂರ್‌ಮೆಂಟ್ ವ್ಯವಸ್ಥೆಯಡಿ ಟೆಂಡರ್ ಷೆಡ್ಯೂಲ್ ದಿನಾಂಕಗಳು ಈ ಕೆಳಕಂಡಂತಿದೆ.**

| ಕ್ರ ಸಂ | ವಿವರ | ದಿನಾಂಕ | ಸಮಯ |
|---|---|---|---|
| 1 | ಇ–ಪೋರ್ಟಲ್‌ನಲ್ಲಿ ಟೆಂಡರ್ ದಾಖಲೆಗಳು ಚಾಲ್ತಿಗೆ ಬರುವುದು | 22.11.2025 | ಸಂಜೆ 5:00 ಗಂಟೆಯ ನಂತರ |
| 2 | ಟೆಂಡರ್ ಡೌನ್‌ಲೋಡ್ ಮಾಡಲು ಮತ್ತು ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ | 02.122025 | ಸಂಜೆ 5.30 ಗಂಟೆ |
| 3 | ತಾಂತ್ರಿಕ ಟೆಂಡರ್‌ಗಳನ್ನು ತೆರೆಯುವ ದಿನಾಂಕ: | 04.12.2025 | ಬೆಳಿಗ್ಗೆ 11.00 ಗಂಟೆ ನಂತರ |
| 4 | ಹಣಕಾಸಿನ ಟೆಂಡರ್‌ನ್ನು ತೆರೆಯುವ ದಿನಾಂಕ : | 06.12.2025 | ಬೆಳಿಗ್ಗೆ 11.00 ಗಂಟೆ ನಂತರ |

ಸಹಿ/– ಕಾರ್ಯದರ್ಶಿ
ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ, ಚಾಮುಂಡಿಬೆಟ್ಟ
DIPR/MYS/1278/SA/2025-26

# ಕನ್ನಡಿಗರ ಹಿತರಕ್ಷಣೆ, ಸ್ವಾಭಿಮಾನದ ಬದುಕಿಗಾಗಿ ತ್ಯಾಗಕ್ಕೂ ಸಿದ್ಧ

## ರಾಜಕೀಯ ಪಕ್ಷಗಳಿಗೆ ನಾಡು, ನುಡಿ, ಜಲ ವಿಚಾರದಲ್ಲಿ ಬದ್ಧತೆ ಇಲ್ಲ : ಟಿ.ಎ.ನಾರಾಯಣಗೌಡ ಆರೋಪ

ಚಾಮರಾಜನಗರ: ಕರ್ನಾಟಕದಲ್ಲಿರುವ ಕನ್ನಡಿಗರ ಹಿತರ ಕ್ಷಣೆ ಹಾಗೂ ಅವರ ಸ್ವಾಭಿಮಾನದಿಂದ ಬದುಕು ವಾತಾವರಣವನ್ನು ನಿರ್ಮಿಸಿಕೊಡುವುದಲ್ಲಿ ಕರ್ನಾಟಕ ರಕ್ಷಣಾ ವೇದಿಕೆ ಯು ಯಾವುದೇ ತ್ಯಾಗಕ್ಕು ಸಿದ್ದವಿದೆ ಕರ್ನಾಟಕ ರಕ್ಷಣಾ ವೇದಿಕೆಯ ಅಧ್ಯಕ್ಷ ರಾಜ್ಯಾಧ್ಯಕ್ಷ ಟಿ.ಎ. ನಾರಾಯಣಗೌಡ ತಿಳಿಸಿದರು.

ನಗರದ ಡಾ. ರಾಜಕುಮಾರ್ ಕಲಾ ಮಂದಿರದಲ್ಲಿ ಕರ್ನಾಟಕ ರಕ್ಷಣಾ ವೇದಿಕೆಯ ಜಿಲ್ಲಾ ಘಟಕದಿಂದ ನಡೆದ ಕನ್ನಡ ದೀಕ್ಷೆ ಸ್ವೀಕಾರ ಸಮಾರಂಭವನ್ನು ಉದ್ಘಾಟಿಸಿ, ಕನ್ನಡ ದೀಕ್ಷೆಯನ್ನು ಭೋದಿಸಿ ಅವರು ಮಾತನಾಡಿದರು. ಕಳೆದ 27 ವರ್ಷಗಳಿಂದ ಕರ್ನಾಟಕದಲ್ಲಿ ಕನ್ನಡ ರಕ್ಷಣಾ ವೇದಿಕೆಯ ತನ್ನದೇ ಆದ ಹೋರಾಟವನ್ನು ಮಾಡುತ್ತಾ ಬಂದಿದೆ. ಯಾವುದೇ ರಾಜಕೀಯ ಪಕ್ಷದೊಂದಿಗೆ ರಾಜೀಯಾಗದೇ ಕನ್ನಡಿಗರ ಶಕ್ತಿಯಾಗಿ ಹೋರಾಟ ಮಾಡಿಕೊಂಡಿರುವ ಬಂದಿರುವ ಹೆಮ್ಮೆ ಕರವೇ ಕಾರ್ಯಕರ್ತರಿಗೆ ಇದೆ. ನಮ್ಮ ಕರವೇ ಪಡೆಯ ಹೋರಾಟದ ಇಚ್ಛಾಶಕ್ತಿ , ಬದ್ಧತೆ ಇದಕ್ಕೆ ಕಾರಣವಾಗಿದೆ. ರಾಜ್ಯ ಪ್ರತಿ ಜಿಲ್ಲೆ ಹಾಗು ತಾಲೂಕು ಮತ್ತು ಹೋಬಳಿ ಮಟ್ಟದಲ್ಲಿಯು ಕರವೇ ಕಾರ್ಯಕರ್ತರು ತಮ್ಮದೇ ಅದ ಸಂಘಟನೆಯಲ್ಲಿ ತೊಡಗಿಸಿಕೊಂಡಿದ್ದಾರೆ ಎಂದರು.

ಚಾಮರಾಜನಗರ ಜಿಲ್ಲೆ ಸಾಂಸ್ಕೃತಿಕವಾಗಿ ಶ್ರೀಮಂತಿಕೆಯನ್ನು ಹೊಂದಿದೆ. ವರನಟ ಡಾ.ರಾಜಕುಮಾರ್ ಅವರನ್ನು ಕೊಟ್ಟ ಜಿಲ್ಲೆ. ತಮಿಳುನಾಡು, ಕೇರಳ ಗಡಿಯನ್ನು ಹಂಚಿಕೊಂಡಿದೆ. ಇಲ್ಲಿನ ಕನ್ನಡಿಗರ ಸ್ವಾಭೀಮಾನ ಇತರರಿಗೆ ಮಾದರಿಯಾಗಿದೆ. ಪರ ಭಾಷಿಕರ ಹಾವಳಿ ಇದ್ದರು ಸಹ ಕನ್ನಡತನವನ್ನು ಬಿಟ್ಟು ಕೊಟ್ಟಿಲ್ಲ. ಕನ್ನಡದ ಬಗ್ಗೆ



ಅಭಿಮಾನವನ್ನು ಹೊಂದಿರುವ ಜನಪದರ ನೆಲ ಬೀಡಾಗಿದೆ. ಇಂಥ ಜಿಲ್ಲೆಯ ಬಗ್ಗೆ ಹೆಮ್ಮೆ ಬಗ್ಗೆ ಬಹಳಷ್ಟು ಹೋರಾಟವನ್ನು ಈ ನೆಲದಲ್ಲಿ ಮಾಡಿದ್ದೇವೆ ಎಂದು ನಾರಾಯಣ ಗೌಡ ಸ್ಮರಿಸಿಕೊಂಡರು.

ರಾಜಕಾರಣ ಗಳಲ್ಲಿ ಕನ್ನಡದ ಬಗ್ಗೆ ಇಚ್ಛಾಶಕ್ತಿ ಇಲ್ಲವಾಗಿದೆ. ಓಟ್ ಬ್ಯಾಂಕ್ ರಾಜಕಾರಣದಿಂದಾಗಿ ಕನ್ನಡಿಗರ ಹಕ್ಕುಗಳಿಗೆ ಬೆಲೆ ಇಲ್ಲದಂತಾಗಿದೆ. ನಮ್ಮದೇ ನೆಲದಲ್ಲಿ ಕನ್ನಡರಿಗರಿ ಉದ್ಯೋಗ ಸಿಗುತ್ತಿಲ್ಲ. ಕನ್ನಡಿಗರ ಹಿತ ಕಾಯುವ ಸರೋಜಿನಿ ಮಹಿಷಿ ವರದಿ ಮಂಡನೆಯಾಗಿ 48 ವರ್ಷಗಳೇ ಕಳೆಯುತ್ತಿದೆ. ರಾಮಕೃಷ್ಣ ಹೆಗಡೆ ಅವರ ಕಾಲದಲ್ಲಿ ರಚನೆಯಾದ ಸರೋಜಿನಿ ಮಹಿಷಿ ವರದಿಯು ಇದುವರೆಗೆ ಜಾರಿಯಾಗಿಲ್ಲ. ಯಥವತ್ ಅನುಷ್ಠಾನವಾದರೆ ಕನ್ನಡರಿಗೆ ಹೆಚ್ಚಿನ ಉದ್ಯೋಗಗಳು ಲಭಿಸುತ್ತಿದೆ. ಆದರೆ ಅಧಿಕಾರಕ್ಕೆ ಬಂದ ರಾಜಕೀಯ ಪಕ್ಷಗಳು ಕನ್ನಡಿಗರ ಹಿತ ಕಾಪಾಡುತ್ತಿಲ್ಲ ಎಂದು ನಾರಾಯಣ ಗೌಡ ಭೇಸರ ವ್ಯಕ್ತಪಡಿಸಿದರು.

ದಲಿತ ಮಹಾಸಭಾದ ಉಪಾಧ್ಯಕ್ಷ ವೆಂಕಟರಮಣಸ್ವಾಮಿ(ಪಾಪು) ಮಾತನಾಡಿ, ಕರವೇ ನಾರಾಯಣ ಗೌಡರ ಹೋರಾಟ ದೊಡ್ಡದು. ಬೆಂಗಳೂರಿನಲ್ಲಿದ್ದ ಪರ ಭಾಷಿಗರ ಹಾವಳಿಯಿಂದ ಕನ್ನಡಿಗರು ತತ್ತರಿಸಿ ಹೋಗಿದ್ದರು. ಇಂಥ ಸಂದರ್ಭದಲ್ಲಿ ಕರವೇ ನಾರಾಯಣಗೌಡರು ಕನ್ನಡಿಗರಿಗೆ ಧೈರ್ಯ ತುಂಬಿ, ಹೋರಾಟ ದ ಮೂಲಕ ಪರ ಭಾಷಿಕರ ಹಾವಳಿಯನ್ನು ಮಟ್ಟ ಹಾಕಿದರು. ಇಲ್ಲದಿದ್ದರೆ ಇಂದು ಬೆಂಗಳೂರಿನಲ್ಲಿ ಕನ್ನಡಿಗರನ್ನು ಹುಡುಕು ಪರಿಸ್ಥಿತಿ ನಿರ್ಮಾಣವಾಗುತ್ತಿತ್ತು.

ರಾಜ್ಯಾಧ್ಯಂತ ತಮ್ಮ ಚಳವಳಿಯ ಮೂಲಕ ನಾಡು, ನುಡಿ, ಜಲ ರಕ್ಷಣೆಯಲ್ಲಿ ತೊಡಗಿರುವ ನಾರಾಯಣಗೌಡರು ರಾಜಕಾರಣ ಗಳಿಗೆ ಸಿಂಹ ಸ್ವಪ್ನವಾಗಿದ್ದರು. ಇಂಥವರು ನಮ್ಮ ಚಾಮರಾಜನಗರ ಜಿಲ್ಲೆ ಯಿಂದ ವಿಧಾನಸಭೆಗೆ ಆಯ್ಕೆಯಾಗಿ ಹೋಗಬೇಕು. ಕನ್ನಡ ಹೋರಾಟ ಗಾರ ವಾಟಾಳ್ ನಾಗರಾಜ ಅವರನ್ನು ಮೂರು ಬಾರಿ ಶಾಸಕರನ್ನಾಗಿ ಮಾಡಿದ ಕ್ಷೇತ್ರ ನಮ್ಮದು. ಹೀಗಾಗಿ ನಾರಾಯಣಗೌಡರು ಇಲ್ಲಿಂದಲೇ ವಿಧಾನಸಭೆ ಪ್ರವೇಶ ಮಾಡಬೇಕು. ಅವರು ಸ್ಪರ್ಧೆ ಮಾಡಿದರೆ ನಮ್ಮ ಸಂಪೂರ್ಣ ಬೆಂಬಲ ನೀಡುವುದಾಗಿ, ಚಾಮರಾಜನಗರ ಕ್ಷೇತ್ರದಿಂದ ಸ್ಪರ್ಧೇ ಮಾಡುವಂತೆ ಪಾಪು ಅಹ್ವಾನ ನೀಡಿದರು. ಸಮಾರಂಭದಲ್ಲಿ ಜಿ.ಪಂ. ಮಾಜಿ ಸದಸ್ಯ ಎಸ್. ಸೊಮನಾಯಕ, ಕರವೇ ರಾಜ್ಯ ಪ್ರಧಾನ ಕಾರ್ಯದರ್ಶಿ ವಿನೋಧ ಅಬ್ಬಿಗೆರೆ, ರಾಜ್ಯ ಉಪಾಧ್ಯಕ್ಷ ವೀರಭದ್ರಪ್ಪ, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ಅಧ್ಯಕ್ಷ ಮೂಡ್ಲುಪುರ ನಂದೀಶ್, ಕರವೇ ಮೈಸೂರು ಜಿಲ್ಲಾಧ್ಯಕ್ಷ ಪ್ರವೀಣ್, ರಾಜ್ಯ ಮಹಿಳಾ ಉಪಾಧ್ಯಕ್ಷೆ ಸುಜಾತ ಷಣ್ಮುಖಂ, ಚಾಮರಾಜನಗರ ಜಿಲ್ಲಾಧ್ಯಕ್ಷ ಮಂಜೇಶ, ಪ್ರಧಾನ ಕಾರ್ಯದರ್ಶಿ ರೂಪೇಶ್, ಜಿಲ್ಲಾ ಸಹ ಕಾರ್ಯದರ್ಶಿ ಅರ್ಜುನ್, ಜಿಲ್ಲಾ ಸಂಘಟನಾ ಕಾರ್ಯದರ್ಶಿ ಹೇಮಂತ್, ಮಹಿಳಾ ಜಿಲ್ಲಾಧ್ಯಕ್ಷೆ ಲಕ್ಷ್ಮಿ, ತಾಲೂಕು ಮಹಿಳಾ ಅಧ್ಯಕ್ಷೆ ಸುಮ, ಕೊಳ್ಳೇಗಾಲ ತಾಲೂಕು ಅಧ್ಯಕ್ಷೆ ರಾಜೇಶ್ವರಿ, ನಗರ ಅಧ್ಯಕ್ಷ ಸಂತೋಷ, ಗುಂಡ್ಲುಪೇಟೆ ಅಧ್ಯಕ್ಷ ರಮೇಶ್ ನಾಯಕ, ಚಾಮರಾಜನಗರ ಜಿಲ್ಲಾ ಉಪಾಧ್ಯಕ್ಷ ರಾಜೇಂದ್ರ ನಾಯಕ, ಕೊಳ್ಳೇಗಾಲ ತಾಲೂಕು ಅಧ್ಯಕ್ಷ ಅಯಾಜ್ ಕನ್ನಡಿಗ, ಮಂಡ್ಯ ತಾಲೂಕು ಅಧ್ಯಕ್ಷ ಮನು ಕಾರ್ಯಕರ್ತರು ಹಾಜರಿದ್ದರು.

# ಜಿಲ್ಲಾಡಳಿತ ಮುಂಭಾಗ ರೈತರ ಪ್ರತಿಭಟನೆ

## ಬೈಕ್ ರ್‍ಯಾಲಿ ಮೂಲಕ ಆಗಮಿಸಿದ ರಾಜ್ಯ ರೈತಸಂಘ, ಹಸಿರು ಸೇನೆ ಕಾರ್ಯಕರ್ತರು

ಚಾಮರಾಜನಗರ: ಖರೀದಿ ಕೇಂದ್ರಗಳನ್ನು ತೆರೆಯುವಂತೆ ಒತ್ತಾಯಿಸಿ ಸಾಮೂಹಿಕ ನಾಯಕತ್ವದ ರಾಜ್ಯ ರೈತಸಂಘ ಹಾಗೂ ಹಸಿರು ಸೇನೆ ವತಿಯಿಂದ ನಗರದಲ್ಲಿ ಸೋಮವಾರ ಪ್ರತಿಭಟನೆ ನಡೆಸಲಾಯಿತು.

ನಗರದ ಜಿಲ್ಲಾಡಳಿತ ಭವನದ ಮುಂಭಾಗಕ್ಕೆ

ಬೈಕ್ ರ್‍ಯಾಲಿ ಮೂಲಕ ಜಿಲ್ಲೆಗೆ ಆಗಮಿಸಿದ ರೈತರು ಪ್ರವಾಸಿ ಮಂದಿರದಲ್ಲಿ ಜಮಾಯಿಸಿ ಬಳಿಕ ಅಲ್ಲಿಂದ ಜಿಲ್ಲಾಡಳಿತ ಭವನಕ್ಕೆ ಬೈಕ್‌ಗಳ ಮೂಲಕ ಆಗಮಿಸಿ ಪ್ರತಿಭಟನೆ ನಡೆಸಿದರು. ಜಿಲ್ಲೆಯ ಎಲ್ಲಾ ಕೆರೆಕಟ್ಟೆಗಳಿಗೂ ನೀರು ತುಂಬಿಸಬೇಕು ಹಾಗೂ ಹನೂರು ಹಾಗೂ ಗುಂಡುಪೇಟೆ ಭಾಗಕ್ಕೆ ಹೆಚ್ಚಿನ ಪ್ರಾತಿನಿಧ್ಯ ನೀಡಬೇಕು. ಕೊರಟ್ಟಿ, ಹೊಸೂರು, ಶೆಟ್ಟಳ್ಳಿ, ಮಾಟಳ್ಳಿ, ಪಂಚಾಯ್ತಿಗಳಿಗೆ ದಂಟಳಿ, ಮಾರ್ಗವಾಗಿ ಏತ ನೀರಾವರಿ ಮಾಡಬೇಕು. ಯಳಂದೂರು ಭಾಗದಲ್ಲಿರುವ ಕೆರೆಗಳನ್ನು ಹೂಳೆತ್ತಬೇಕು ಹಾಗೂ ಇತರೆ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿದರು.

ಮುಸುಕಿನ ಜೋಳಕ್ಕೆ ಗೋವಿನ ಜೋಳಕೆ, ಕನಿಷ್ಠ ಬೆಂಬಲ ಬೆಲೆಯ ಪಟ್ಟಿಯಲಿ ಕ್ವಿಂಟಾಲ್ ಗೆ 2400 ರೂಪಾಯಿ ನಿಗದಿಯಾಗಿದು, ಸದ್ಯ ರಾಜ್ಯ ವ್ಯಾಪಿಯಲ್ಲಿ ಕ್ವಿಂಟಾರಿಗೆ 1900 – 1400 ಗೆ ಇಳಿಕೆಯಾಗಿದೆ. ಒಂದೆಡೆ ಕಡಿಮೆ ಗುಣಮಟ್ಟದ ಬಿತ್ತನೆ ಬೀಜ ಮತ್ತೊಂದೆಡೆ ಹವಾಮಾನ ವೈಪರಿತದಿಂದ ಈಗಾಗಲೇ ಜೋಳದ ಬೆಳೆಗಾರರು ಸಂಕಷ್ಟದಲಿ ಇರುವಾಗ ಬೆಲೆಕುಸಿತ ಮತ್ತೊಂದು ದೊಡ್ಡ, ಅಘಾತವಾಗಿ ಪರಿಣಮಿಸಿದೆ. ರೈತರನ್ನು ಸಂಕಷ್ಟದಿಂದ ಪಾರುಮಾಡಲು ರಾಜ್ಯ ಸರ್ಕಾರ ಈ ಕೂಡಲೇ ಖರೀದಿ ಕೇಂದ್ರಗಳನ್ನು ತೆರೆಯುವಂತೆ ಆಗ್ರಹಿಸಿದರು.

ಗ್ರಾಮೀಣ ಭಾಗದ ಅರ್ಥ ವ್ಯವಸ್ಥೆಯ ಮೂಲ ಆಧಾರವಾಗಿರುವ ಹೈನುಗಾರಿಕೆ ಅದರಲ್ಲೂ ರೈತ ಮಹಿಳೆಯರು ತಮ್ಮ ಜೀವನ ನಿರ್ವಹಣೆಗಾಗಿ ನಂಬಿಕೊಂಡಿರುವ ಪ್ರಮುಖ ಚಟುವಟಿಕೆಯಾಗಿದ್ದು ಪ್ರತಿ 10 ದಿನಕ್ಕೆ ಕೊಡಬೇಕಾದ ಹಣವನ್ನು, 20 ರಿಂದ 30 ದಿನಗಳ ನಂತರ ಕೊಡುತ್ತಿದ್ದಾರೆ. ಲೆಕ್ಕ ಪತ್ರದಲಿ ಪ್ರತಿ 10 ದಿನಕ್ಕೊಮ್ಮೆ ನೊಂದಣಿ ಮಾಡುತ್ತಿದ್ದು ಹಣವನ್ನು ಮಾತ್ರ ಸೂಕ್ತ ಸಮಯಕ್ಕೆ ನೀಡುತ್ತಿಲ್ಲ. ಕಾಲಮಿತಿ ಮೀರಿದ ನಂತರ ಹಣವನ್ನು ಕೊಡುತ್ತಿರುವುದರಿಂದ ಗ್ರಾಮೀಣ ಪ್ರದೇಶದಲ್ಲಿ ಜೀವನ ನಿರ್ವಹಣೆ ಕಷ್ಟವಾಗುತ್ತಿದೆ. ಈ ಹಿಂದೆ ಹಸುವಿಗೆ ವಿಮಾ ಸೌಲಭ್ಯವಿದ್ದು, ಅದನ್ನು ರದ್ದು ಮಾಡಲಾಗಿದೆ ಮತ್ತು ಸಮಯಕ್ಕೆ ಸರಿಯಾಗಿ ವೈದ್ಯರ ಸಹಾಯ ಹೊರೆಯುತ್ತಿಲ್ಲ ಎಂದು ಒತ್ತಾಯಿಸಿದರು. ಪ್ರತಿಭಟನೆಯಲ್ಲಿ ರೈತ ಮುಖಂಡರಾದ ಹೊನ್ನೂರು ಪ್ರಕಾಶ್, ಪಾಪಣ್ಣ, ಬರಗಿ ಮಹೇಶ್, ಚಂಗಡಿ ಕರಿಯಪ್ಪ, ಬೇರಂಬಾಡಿ ಶಶಿ, ಗುಂಡ್ಲುಪೇಟೆ ತಾಲೂಕು ಅಧ್ಯಕ್ಷ ಷಣ್ಮುಗ, ಸ್ವಾಮಿ, ಅಂಬಳೆ ಮಹದೇವಸ್ವಾಮಿ, ರಾಣಿಯಮ್ಮ ಸೇರಿದಂತೆ ಇತರರು ಭಾಗವಹಿಸಿದ್ದರು.



### ದಲ್ಲಾಳಿಗಳ ಹಾವಳಿ

**ಎಪಿಎಂಸಿ ಮಾರುಕಟ್ಟೆಯಲ್ಲಿ ದಲ್ಲಾಳಿಗಳ ಹಾವಳಿ ಹೆಚ್ಚಾಗಿದ್ದು, ಕಾನೂನು ವಿರುದ್ಧವಾಗಿ ಆಹಾರ ಪದಾರ್ಥಗಳನ್ನು ಬೆಳೆದ ರೈತರಿಂದಲೂ ದಲ್ಲಾಳಿಗಳಿಂದ ಆಹಾರ ಪದಾರ್ಥಗಳನ್ನು ಖರೀದಿ ಮಾಡುವ ವರ್ತಕರಿಂದಲೂ ರಾಜಾರೋಷವಾಗಿ, ಬಹಿರಂಗವಾಗಿ ದ್ವಿಮುಖ ಕಮಿಷನ್ ಪಡೆಯುತ್ತಿರುತ್ತಾರೆ. ಕೂಡಲೇ ಎಪಿಎಂಸಿ ಕಾರ್ಯದರ್ಶಿಗಳು ಮತ್ತು ಆಡಳಿತ ಮಂಡಳಿಗೆ ಯಾವುದೇ ಕಾರಣಕ್ಕೂ ರೈತರಿಂದ ಕಮಿಷನ್ ಪಡೆಯಬಾರದು ಎಂಬ ಸಂದೇಶ ಜಿಲ್ಲಾಧಿಕಾರಿಗಳಿಂದ ರವಾನೆ ಆಗಬೇಕು.**

### ಮಾನವ ಸಂಘರ್ಷ ದಿನನಿತ್ಯದ ಸವಾಲು

**ಮಾನವ ಸಂಘರ್ಷ ದಿನನಿತ್ಯದ ಸವಾಲಾಗಿದು ಕಾಡುಪ್ರಾಣಿಗಳಿಂದ ಬೆಳೆ ಹಾನಿ ಯಾಗುತ್ತಿದ್ದು. ಬೆಳೆ ಹಾನಿಗೆ ಮಾರುಕಟ್ಟೆಯ ದರದಲ್ಲಿ ವೈಜ್ಞಾನಿಕವಾಗಿ ಬೆಳೆ ನಷ್ಟ ಪರಿಹಾರ ಕಟ್ಟಿ ಕೊಡಬೇಕು. ಪ್ರತಿ ಮೂರು ತಿಂಗಳಿಗೊಮ್ಮೆ ಜಿಲ್ಲಾಡಳಿತ ಮತ್ತು ತಾಲೂಕು ಆಡಳಿತ ರೈತರ ಕುಂದು ಕೊರತೆ ಸಭೆಯನ್ನು ಮಾಡದೆ ತಮಗೆ ಸಮಯ ಸಿಕ್ಕಾಗ ಮತ್ತು ರೈತರು ಬಂದು ಪ್ರಶ್ನೆ ಮಾಡಿದಾಗ ಮಾತ್ರ ಇಂತಹ ಸಭೆಗಳು ನಡೆಯುತ್ತಿರುವುದು ಸರಿಯಲ್ಲ. ರೈತರ ಕುಂದು ಕೊರತೆ ಸಭೆಯ ಬಗ್ಗೆ, ಮಾಹಿತಿ ಸರಿಯಾಗಿ ಕೊಡುತ್ತಿಲ್ಲ. ಕಬ್ಬಿನ ಖರೀದಿ ದರವನ್ನು ರಾಜ್ಯ ವ್ಯಾಪ್ತಿ ಒಂದೆ ನಿಯಮವನ್ನು ಅನುಸರಿಸುವುದು. ಕಬ್ಬಿನ ಕಾರ್ಖಾನೆಗಳು ಉಪ ಯುತ್ಪನ್ನಗಳಾದ ಬ್ಯಾಗಸೆ ಮತ್ತು ಕಾಕಂಬಿಯಿಂದ ಬರುವ ಆದಾಯವನ್ನು ರೈತರೊಂದಿಗೆ ಹಂಚಿಕೊಳ್ಳುವಂತೆ ಒತ್ತಾಯ ಮಾಡಲಾಯಿತು.**

# ಎಸ್ಸಿ, ಎಸ್ಟಿ ಸಮುದಾಯಕ್ಕೆ ಮೀಸಲಿಟ್ಟ ಅನುದಾನ, ಮತ ಬ್ಯಾಂಕ್‌ಗೆ ಬಳಕೆ

## ಕಾಂಗ್ರೆಸ್ ವಿರದ್ಧ ಮಲ್ಲಿಕಾರ್ಜುನ್ ಆಕ್ರೋಶ



ರಾಮನಗರ: ಆಯವ್ಯಯದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಮೀಸಲಿಟ್ಟ ಅನುದಾನವನ್ನು ಮತ ಬ್ಯಾಂಕ್ ವೃದ್ಧಿಯ ಯೋಜನೆಗಳಿಗೆ ಬಳಕೆ ಮಾಡುತ್ತಿದೆ ಎಂದು ಧಮ್ಮದೀವಿಗೆ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷ ಮಲ್ಲಿಕಾರ್ಜುನ್ ಆಕ್ರೋಶ ವ್ಯಕ್ತಪಡಿಸಿದರು.

ನಗರದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿದರು. ಎಸ್ಸಿ ಎಸ್ಟಿ , ಆದಿ ವಾಸಿ ಜನರ ಶೈಕ್ಷಣಿಕ, ಸಾಮಾಜಿಕ ಹಾಗೂ ಆರ್ಥಿಕ ಉನ್ನತೀಕರಣಕ್ಕೆ ಬಳಕೆ ಮಾಡಬೇಕಾದ ಅನುದಾನವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ತನ್ನ ರಾಜಕೀಯ ಲಾಭಕ್ಕಾಗಿ ಗ್ಯಾರಂಟಿ ಯೋಜನೆಗಳಿಗೆ ವಿನಿಯೋಗಿಸಿ ದ್ರೋಹ ಬಗೆಯುತ್ತಿದೆ ಎಂದರು.

**ದಮನಿತ, ದುರ್ಬಲ ಜಾತಿಗಳ ಮಕ್ಕಳ ಭವಿಷ್ಯ ಹಾಳಾಗುವ ಆತಂಕ**

ರಾಜ್ಯ ಸರ್ಕಾರ 2025–26ನೇ ಸಾಲಿನ ಆಯವ್ಯಯದಲ್ಲಿ ಶಕ್ತಿ ಯೋಜನೆ ಒಂದಕ್ಕೆ ಪರಿಶಿಷ್ಟ ಜಾತಿ ಉಪಯೋಜನೆ (ಎಸ್ ಸಿಎಸ್ ಪಿ) ಅಡಿ 106000 ಲಕ್ಷ ಹಾಗೂ ಗಿರಿಜನ ಉಪಯೋಜನೆ (ಟಿಎಸ್ಪಿ) ಅಡಿ 47700 ಲಕ್ಷ ರು.ಸೇರಿದಂತೆ ಒಟ್ಟಾರೆ 530000 ಲಕ್ಷ ರು.ಗಳನ್ನು ಹಂಚಿಕೆ ಮಾಡಿದೆ ಎಂದು ದೂರಿದರು.

ಈ ಸರ್ಕಾರ ದಮನಿತ ಜಾತಿಗಳು, ದುರ್ಬಲ ವರ್ಗಗಳ ಮಕ್ಕಳ ಭವಿಷ್ಯವನ್ನು ಹಾಳು ಮಾಡುತ್ತಿದ್ದು, ಪಕ್ಷಕ್ಕೆ ವೈಯಕ್ತಿಕ ಲಾಭ ಮಾಡಿಕೊಳ್ಳಲು ಪರಿಶಿಷ್ಟರ ಹಣವನ್ನು ದುರ್ಬಳಕೆ ಮಾಡಿಕೊಳ್ಳುತ್ತಿದೆ.

ಪರಿಶಿಷ್ಟರ ಏಳ್ಗೆಯ ಮೀಸಲು ಹಣವನ್ನು ದುರ್ಬಳಕೆ ಮಾಡಿಕೊಂಡಿರುವುದು ಅಕ್ಷಮ್ಯ ಅಪರಾಧ. ಇದನ್ನು ಕೇಳ ಬೇಕಾದ ವಿರೋಧ ಪಕ್ಷಗಳು ಜಾತಿಕಾರಣ, ರಾಜಕಾರಣದ ಲಾಭ ಬುಡುಕರಾಗಿ ಸದ್ದಡಗಿದಂತಾಗಿದೆ. ಇದಲ್ಲದೆ ದಲಿತ ಸಂಘಟನೆಗಳು, ಬಹುಜನ ಚಳವಳಿಗಳು ಹಾಗೂ ಶೋಷಿತ ಸಮಾಜದ ಸಂಘಟನೆಗಳು ಹೋರಾಟದ ಹಾದಿ ಹಿಡಿಯದೆ ಮೌನ ವಹಿಸಿವೆ.

**ಒಂದೇ ತಾಯಿಯ ಮಕ್ಕಳನ್ನು ಹೋಳಾಗಿಸುವ ಯತ್ನ**

ಒಂದೇ ತಾಯಿಯ ಮಕ್ಕಳಾಗಿದ್ದ ಮಾದಿಗ, ಭೋವಿ, ಲಂಬಾಣಿ, ವಾಲ್ಮೀಕಿ, ಆದಿವಾಸಿಗಳು, ಅಲೆಮಾರಿಗಳು, ಅರೆ ಅಲೆಮಾರಿ, ಬುಡಕಟ್ಟು ಸಮುದಾಯಗಳನ್ನು ಒಳ ಮೀಸಲಿನ ಹೆಸರಿನಲ್ಲಿ ಹೊಡೆದು ಹೋಳಾಗಿಸಿ ಸಂಘಟನೆಯ ನಾಯಕರನ್ನು ಮೂಕರು ಮತ್ತು ಕಿವುಡರನ್ನಾಗಿ ಮಾಡಿದೆ. ಇದು ಪ್ರಜಾಪ್ರಭುತ್ವ ವ್ಯವಸ್ಥೆಗೆ ಅಸಹ್ಯ ತರುವಂತಿದೆ ಎಂದು ಕಿಡಿಕಾರಿದರು.

ಕಾಂಗ್ರೆಸ್ ಪಕ್ಷಕ್ಕೆ ವೈಯಕ್ತಿಕ ಲಾಭ ತರುವ ಯೋಜನೆಗಳಿಗೆ ಎಸ್ಸಿ ಎಸ್ಟಿಗಳ ವಿಶೇಷ ಘಟಕ ಯೋಜನೆ ಹಣವನ್ನು ಬಳಸುವುದಾದರೆ ಬಿಟ್ಟಿ ಭಾಗ್ಯಗಳನ್ನು ನಿಲ್ಲಿಸಬೇಕು. ಜನಪರ ಸರ್ಕಾರದ ಧ್ಯೇಯವೆಂದರೆ ದಮನಿತರು, ದುರ್ಬಲರು ಹಾಗೂ ಹಿಂದುಳಿದವರನ್ನು ಸಬಲೀಕರಣಗೊಳಿಸಿ ಸಾಮಾಜಿಕ ನ್ಯಾಯ ನೀಡಿ ಸಮಾನತೆ ಸೃಷ್ಟಿಸುವುದೇ ಹೊರತು ಬೆಂದ ಮನೆಯಲ್ಲಿ ಗಳ ಹಿರಿಯುವುದಲ್ಲ ಎಂದು ಮಲ್ಲಿಕಾರ್ಜುನ್ ಆಕ್ರೋಶ ವ್ಯಕ್ತಪಡಿಸಿದರು. ಸುದ್ದಿಗೋಷ್ಠಿಯಲ್ಲಿ ಮುಖಂಡರಾದ ಸಾತನೂರು ಶಿವಮಾದು, ತಾಮಸಂದ್ರ ಮುತ್ತುರಾಜು, ಹರಿಹರ ಬಸವರಾಜು, ಶೀಗೇಕೋಟೆ ವೀರಭದ್ರಯ್ಯ, ಶ್ರೀನಿವಾಸ್ ಇದ್ದರು.

ವರ್ತಮಾನ
ಜಾಹಿರಾತಿಗೆ ಉತ್ತಮ ಮಾಧ್ಯಮ

# ವೀರೇಂದ್ರ ಹೆಗ್ಗಡೆ ಹುಟ್ಟುಹಬ್ಬ



ಗುಂಡ್ಲುಪೇಟೆ: ತಾಲೂಕಿನ ಅಣ್ಣೂರುಕೇರಿಯಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಸಂಸ್ಥೆ ವತಿಯಿಂದ ಡಾ.ಡಿ ವೀರೇಂದ್ರ ಹೆಗ್ಗಡೆಯವರ ಹುಟ್ಟುಹಬ್ಬದ ಪ್ರಯುಕ್ತ ಆರೋಗ್ಯ ತಪಾಸಣಾ ಶಿಬಿರ ಕಾರ್ಯಕ್ರಮ ನಡೆಯಿತು.

ಕಾರ್ಯಕ್ರಮವನ್ನು ಗ್ರಾಮ ಪಂಚಾಯಿತಿ ಅಧ್ಯಕ್ಷರು ರಘು ಉದ್ಘಾಟನೆ ಮಾಡಿ ಮಾತನಾಡಿ, ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಸಂಸ್ಥೆಯ ಸೇವಾ ಕಾರ್ಯಕ್ರಮಗಳು ಜನರಿಗೆ ತುಂಬಾ ಅನುಕೂಲವಾಗಿದೆ ಮಹಿಳೆಯರು ಸಂಸ್ಥೆ ಸಾಮಾಜಿಕ ಕಾರ್ಯಗಳನ್ನು ಸದ್ಬಳಕೆ ಮಾಡಿಕೊಳ್ಳುವಂತೆ ಸಲಹೆ ನೀಡಿದರು. ಡಾ.ಶಿವಕುಮಾರ್ ಮಾತನಾಡಿ, ಆರೋಗ್ಯದ ಬಗ್ಗೆ ಹೆಚ್ಚಿನ ಗಮನ ಕೊಡಿ ಅರೋಗ್ಯ ಅತ್ಯಮೂಲ್ಯ. ಬಿಪಿ ಶುಗರ್ ನಿಯಂತ್ರಣ ಮಾಡುವ ಆಹಾರ ಪದ್ಧತಿ ಸ್ವಚ್ಛತೆ ಬಗ್ಗೆ ಮಾಹಿತಿ ನೀಡಿದರು. ಧರ್ಮಸ್ಥಳ ಸಂಸ್ಥೆಯ ಯೋಜನಾಧಿಕಾರಿ ಚಂದ್ರಶೇಖರ್ ಮಾತನಾಡಿ, ಈ ದಿನ ಖಾವಂದರ ಹುಟ್ಟುಹಬ್ಬದ ಪ್ರಯುಕ್ತ ಎಲ್ಲೆಡೆ ಕಾರ್ಯಕ್ರಮ ಸಂಸ್ಥೆಯ ಹಲವಾರು ಸೇವಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ಹೇಳಿದರು. ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿ ಶಿಲ್ಪಾ, ಆರೋಗ್ಯ ಇಲಾಖೆ ಸಿಬ್ಬಂದಿಗಳು, ಪೊಲೀಸ್ ಪೇದೆ ಮಹೇಶ್ ,ದೇವಸ್ಥಾನ ಸಮಿತಿ ಉಪಾಧ್ಯಕ್ಷ ರಾಜು,ಹಾಲಿನ ಡೈರಿ ಕಾರ್ಯದರ್ಶಿ ವಸಂತ್ ಕುಮಾರ್, ಮುಖಂಡ ಮಂಜು, ಕೃಷಿ ಮೇಲ್ವಿಚಾರಕರಾದ ಸುಬ್ರಹ್ಮಣ್ಯ,ಸೇವಾಪ್ರತಿನಿಧಿ ಶೋಭಾ,ಸಂಘದ ಸದಸ್ಯರು ಹಾಗೂ ಅಣ್ಣರೂಕೇರಿ ಗ್ರಾಮಸ್ಥರು ಪಾಲ್ಗೊಂಡಿದ್ದರು.

# ಮ.ಬೆಟ್ಟಕ್ಕೆ ಹರೀಶ್ ಗೌಡ ಭೇಟಿ

ಹನೂರು: ರಾಜ್ಯದ ಪ್ರಸಿದ್ಧ ಧಾರ್ಮಿಕ ಯಾತ್ರಾ ಸ್ಥಳ ಶ್ರೀ ಕ್ಷೇತ್ರ ಮಲೆ ಮಹದೇಶ್ವರ ಬೆಟ್ಟಕ್ಕೆ ಹುಣಸೂರು ಶಾಸಕ ಜಿ ಡಿ ಹರೀಶ್ ಗೌಡ ಕುಟುಂಬ ಸಮೇತ ಆಗಮಿಸಿ ವಿಶೇಷ ಪೂಜೆ ಸಲ್ಲಿಸಿ ದೇವರ ದರ್ಶನ ಪಡೆದರು.

ಹುಣಸೂರು ಕ್ಷೇತ್ರದ ಶಾಸಕ ಜಿ ಡಿ ಹರೀಶ್ ಗೌಡ ಪತ್ನಿ ವರ್ಷ ಪುತ್ರ, ಪುತ್ರಿ ಕುಟುಂಬ ಸಮೇತ ಶ್ರೀ ಕ್ಷೇತ್ರಕ್ಕೆ ಆಗಮಿಸಿ ವಿಶೇಷ ಪೂಜೆಯಲ್ಲಿ ಪಾಲ್ಗೊಂಡರು ಕ್ಷೇತ್ರಕ್ಕೆ ಆಗಮಿಸಿದ ಶಾಸಕರನ್ನು ಪ್ರಾಧಿಕಾರದ ಕಾರ್ಯದರ್ಶಿ ಎ ಈ ರಘು ಆತ್ಮೀಯವಾಗಿ ಸ್ವಾಗತ ಕೋರುವ ಮೂಲಕ ಬರಮಾಡಿಕೊಂಡರು.

ನಂತರ ಮಹದೇಶ್ವರ ಸ್ವಾಮಿಗೆ ವಿಶೇಷ ಪೂಜೆ ಸಲ್ಲಿಸಿ ದೇವರ ದರ್ಶನ ಪಡೆದುಕೊಂಡರು. ನಂತರ ಶ್ರೀ ಕ್ಷೇತ್ರದಲ್ಲಿ ನಡೆಯುತ್ತಿರುವ ಅಭಿವೃದ್ಧಿ ಕಾಮಗಾರಿಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿ ಪ್ರಗತಿಯಲ್ಲಿರುವ ಕಾಮಗಾರಿಗಳ ಬಗ್ಗೆ ಕಾರ್ಯದರ್ಶಿಗಳಿಂದ ಮಾಹಿತಿ ಪಡೆದುಕೊಂಡರು.

**ಪರ ಪೂಜೆಯಲ್ಲಿ ಪಾಲ್ಗೊಂಡ ಶಾಸಕ**



ಮೈಸೂರಿನ ಕುಂಬಾರಕೊಪ್ಪಲು ಗ್ರಾಮದ ಸ್ನೇಹಿತರು ಶ್ರೀ ಕ್ಷೇತ್ರ ಮಹದೇಶ್ವರ ಬೆಟ್ಟದಲ್ಲಿ ಪ್ರತಿವರ್ಷವು ಮಲೆ ಮಹದೇಶ್ವರ ಭಕ್ತರಿಗೆ ಪರಮಾಡುವ ಸಂಪ್ರದಾಯ ಹಲವು ವರ್ಷಗಳಿಂದ ನಡೆದುಕೊಂಡು ಬಂದಿದೆ.ಅದರಂತೆ ಶ್ರೀ ಕ್ಷೇತ್ರ ಮಲೆ ಮಹದೇಶ್ವರ ಬೆಟ್ಟದಲ್ಲಿ ಹಮ್ಮಿಕೊಳ್ಳಲಿದ್ದ ಪರ ಸೇವೆಗೆ ಶಾಸಕ ಹರೀಶ್ ಗೌಡ ಆಗಮಿಸಿ ಪರಪೂಜೆ ಸಲ್ಲಿಸಿದರು.

ಇವೇಳೆ ಜೆ ಡಿ ಹರೀಶ್ ಗೌಡ ಬೆಂಬಲಿಗರು ಹಾಗೂ ಜೆಡಿಎಸ್ ಕಾರ್ಯಕರ್ತರು ಹಾಜರಿದ್ದರು.

# ಖಿನ್ನತೆಗೊಳಗಾಗಿ ಯುವಕ ಆತ್ಮಹತ್ಯೆ

ಚಾಮರಾಜನಗರ: ಖಿನ್ನತೆ ಗೊಳಗಾಗಿದ್ದ ಯುವಕನೊಬ್ಬ ಸೋಮವಾರ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾನೆ.



ತಾಲೂಕಿನ ವೆಂಕಟಯ್ಯನಚತ್ರ ಗ್ರಾಮದ ನಿವಾಸಿ ನಾಗೇಶ್(28) ಮೃತಪಟ್ಟ ವ್ಯಕ್ತಿ. ಈತನ ತಂದೆ ಮಹದೇವಶೆಟ್ಟಿ ಹಾಗೂ ಸಹೋದರ ಇಬ್ಬರೂ ಕೂಡ ಇತ್ತೀಚಿಗೆ ಮೃತಪಟ್ಟಿದ್ದರು. ಇದರಿಂದ ಮಾನಸಿಕವಾಗಿ ಖಿನ್ನತೆಗೆ ಒಳಗಾಗಿದ್ದ ನಾಗೇಶ್ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ವಿಷಯ ತಿಳಿದ ಕೂಡಲೇ ಪೂರ್ವ ಪೊಲೀಸ್ ಠಾಣೆಯ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ, ಮೃತ ದೇಹವನ್ನು ಮರಣೋತ್ತರ ಪರೀಕ್ಷೆಗಾಗಿ ಚಾಮರಾಜನಗರ ಸಿಮ್ಸ್ ಆಸ್ಪತ್ರೆಗೆ ರವಾನಿಸಿದ್ದಾರೆ. ಈ ಸಂಬಂಧ ರಾಮಸಮುದ್ರ ಪೂರ್ವ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವರ್ತಮಾನ
ಜಾಹಿರಾತಿಗೆ ಉತ್ತಮ ಮಾಧ್ಯಮ

## ಡಾ.ಡಿ.ವೀರೇಂದ್ರ ಹೆಗ್ಗಡೆರವರ ಹುಟ್ಟುಹಬ್ಬ: ಉಚಿತ ಆರೋಗ್ಯ ತಪಾಸಣಾ ಶಿಬಿರ

# ಒಂದು ಸರ್ಕಾರ ಮಾಡುವ ಕೆಲಸ ವೀರೇಂದ್ರ ಹೆಗ್ಗಡೆ ಮಾಡಿದ್ದಾರೆ

ಚಾಮರಾಜನಗರ: ಡಾ.ಡಿ.ವೀರೇಂದ್ರ ಹೆಗ್ಗಡೆರವರ ಹುಟ್ಟುಹಬ್ಬದ ಪ್ರಯುಕ್ತ ಉಚಿತ ಆರೋಗ್ಯ ತಪಾಸಣಾ ಶಿಬಿರ ನಡೆಯಿತು.

ತಾಲೂಕಿನ ದೊಡ್ಡಮೋಳೆಯಲ್ಲಿ ಗ್ರಾಮ ಪಂಚಾಯತಿ ಕಚೇರಿಯ ಮುಂಭಾಗದಲ್ಲಿ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿಯೋಜನೆ ಟ್ರಸ್ಟ್, ರೋಟರಿ ಸಂಸ್ಥೆ ಚಾಮರಾಜನಗರ, ನಾರಾಯಣ ಹೃದಯಾಲಯ ಮೈಸೂರು, ಗ್ರಾಮ ಪಂಚಾಯತಿ ದೊಡ್ಡಮೋಳೆ ಮತ್ತು ಸಮುದಾಯ ಆರೋಗ್ಯ ಕೇಂದ್ರ ಹರದನಹಳ್ಳಿ ಅವರ ಸಂಯುಕ್ತಾಶ್ರಯದಲ್ಲಿ ಡಾ.ಡಿ. ವೀರೇಂದ್ರ ಹೆಗ್ಗಡೆ ಮತ್ತು ಹೇಮಾವತಿ ವಿ.ಹೆಗ್ಗಡೆಯವರ ಮಾರ್ಗದರ್ಶನದಲ್ಲಿ ಡಾ.ಡಿ.ವೀರೇಂದ್ರ ಹೆಗ್ಗಡೆರವರ ಹುಟ್ಟುಹಬ್ಬದ ಪ್ರಯುಕ್ತ ಉಚಿತ ಆರೋಗ್ಯ ತಪಾಸಣಾ ಶಿಬಿರ ನಡೆಯಿತು.

ರೋಟರಿ ಅಧ್ಯಕ್ಷ ಕಾಗಲವಾಡಿ ಚಂದ್ರು ಚಾಲನೆ ನೀಡಿ ಮಾತನಾಡಿ, ಒಂದು ಸರ್ಕಾರ ಮಾಡುವ ಕೆಲಸವನ್ನು ಡಾ.ವೀರೇಂದ್ರ ಹೆಗ್ಗಡೆ ಅವರು ಮಾಡಿದ್ದಾರೆ. ಅವರು ಶ್ರೀಕ್ಷೇತ್ರ ಧರ್ಮಸ್ಥಳ



ಗ್ರಾಮಾಭಿವೃದ್ಧಿ ಯೋಜನೆಯ ಮೂಲಕ ಮಹಿಳೆಯನ್ನು ಸಂಘಟನೆ ಮಾಡಿ ಅವರು ಆರ್ಥಿಕ ಅಭಿವೃದ್ಧಿ ಹೊಂದುವಂತೆ ಮಾಡಿದ್ದಾರೆ ಗ್ರಾಮೀಣ ಅಭಿವೃದ್ಧಿ ಯೋಜನೆ ಸಮುದಾಯ ಅಭಿವೃದ್ಧಿ ಯೋಜನೆ ಆಯುರ್ವೇದ ಪ್ರಕೃತಿ ಚಿಕಿತ್ಸೆ ಸಿರಿ ಗ್ರಾಮೋದ್ಯೋಗಿ ಜನಜಾಗೃತಿ ವೇದಿಕೆ ಆರೋಗ್ಯ ಸುರಕ್ಷಾ ಯೋಜನೆಗಳು ಪರಿಸರ ಸಂಬಂಧ ಕಾರ್ಯಕ್ರಮಗಳು ಪ್ರಗತಿ ಬಂದು ರೋಡ್ ಸೆಟ್ ಸಂಸ್ಥೆ ಬಜನಾ ತರಬೇತಿ ವಿಪತ್ತುನಿರ್ವಹಣೆ ತಂಡ ಶಿಕ್ಷಣ ಸಂಸ್ಥೆ ಆಸ್ಪತ್ರೆಗಳು ಸಂಧ್ಯಾ ಸುರಕ್ಷಾ ವಾತ್ಸಲ್ಲ ಮನೆ. ಕೆರೆಯ ಅಭಿವೃದ್ಧಿ ಡೈರಿ ಅಭಿವೃದ್ಧಿ ಈ ರೀತಿ ಹಲವಾರು ಯೋಜನೆಗಳನ್ನ ರಾಷ್ಟ್ರ ಮಟ್ಟಕ್ಕೆ ಕೊಂಡು ಹೋಗಿರುತ್ತಾರೆ ಅವರಿಗೆ ದೇವರು ಹೆಚ್ಚಿನ ಆರೋಗ್ಯ, ಆಯಸ್ಸು ಕರುಣಿಸಲಿ ಎಂದು ಆಶಿಸಿದರು. ಕಾರ್ಯಕ್ರಮದಲ್ಲಿ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಜಿಲ್ಲಾ ನಿರ್ದೇಶಕ ಎ.ದಿನೇಶ್ ಮಾತನಾಡಿದರು.

ಯೋಜನಾಧಿಕಾರಿ ಹರೀಶ್ ಕುಮಾರ್ ಶೆಟ್ಟಿ ತಾ.ಪಂ.ಮಾಜಿ ಸದಸ್ಯ ಪುಟ್ಟಸ್ವಾಮಿ, ರೋಟರಿ ಸಂಸ್ಥೆಯ ಮಾಜಿ ಅಧ್ಯಕ್ಷ ಶ್ರೀನಿವಾಸನ್

ಡಾ.ದಿಶಾಂಕ್, ಸಮುದಾಯ ಅಧಿಕಾರಿ ಎನ್. ಮನು, ಯೋಜನೆಯ ಮೇಲ್ವಿಚಾರಕ ಶಶಿಕುಮಾರ್, ಕೃಷಿ ಮೇಲ್ವಿಚಾರಕ ಸುಪ್ರೀತ್, ಸೇವಾಪ್ರತಿನಿಧಿಗಳಾದ ರಾಜೇಶ್ವರಿ,ರತ್ನಮ್ಮ,ರಂಗಮಣಿ, ಪಲ್ಲವಿ ಹಾಜರಿದ್ದರು. ಬಿಪಿ, ಶುಗರ್, ಸಾಮಾನ್ಯ ಕಾಯಿಲೆ, ಹೃದಯ ಸಂಬಂಧಿ ಕಾಯಿಲೆ, ಮಂಡಿನೋವು, ಕೀಲುನೋವು ಪರೀಕ್ಷೆ ಮಾಡಲಾಯಿತು. ಅಗತ್ಯಯುಳ್ಳವರು ಉಚಿತ ಔಷಧಿ ವಿತರಿಸಲಾಯಿತು. ಒಟ್ಟು ,170 ಮಂದಿ ಆರೋಗ್ಯ ತಪಾಸಣೆ , 30 ಇಸಿಜಿ ಮಾಡಿಸಿಕೊಂಡರು.

## ಇಂದು ನಗರದಲ್ಲಿ ಸಂವಿಧಾನ ದಿನಾಚರಣೆ ಕಾರ್ಯಕ್ರಮ

ಚಾಮರಾಜನಗರ, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಸಮಾಜ ಕಲ್ಯಾಣ ಇಲಾಖೆ ಸಂಯುಕ್ತಾಶ್ರಯದಲ್ಲಿ ಸಂವಿಧಾನ ದಿನಾಚರಣೆ ಕಾರ್ಯಕ್ರಮನ್ನು ನವೆಂಬರ್ 26ರಂದು ನಗರದಲ್ಲಿ ಹಮ್ಮಿಕೊಳ್ಳಲಾಗಿದೆ.

ಅಂದು ಬೆಳಿಗ್ಗೆ 8.30 ಗಂಟೆಗೆ ಜಿಲ್ಲಾಡಳಿತ ಭವನದ ಆವರಣದಲ್ಲಿರುವ ಡಾ. ಬಿ.ಆರ್. ಅಂಬೇಡ್ಕರ್ ಅವರ ಪುತ್ಥಳಿಗೆ ಮಾಲಾರ್ಪಣೆ ಮಾಡಲಾಗುತ್ತದೆ. ಬಳಿಕ ಜಿಲ್ಲಾಡಳಿತ ಭವನದಿಂದ ಜಾಥಾ ಹೊರಟು ಪೊಲೀಸ್ ಕವಾಯತು ಮೈದಾನವರೆಗೆ ನಡೆಯಲಿದೆ.

ಬೆಳಿಗ್ಗೆ 9 ಗಂಟೆಗೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ಕಚೇರಿ ಆವರಣದ ಮುಂಭಾಗದಲ್ಲಿರುವ ಪೊಲೀಸ್ ಕವಾಯತು ಮೈದಾನದಲ್ಲಿ ಸಂವಿಧಾನ ದಿನಾಚರಣೆಯ ವೇದಿಕೆ ಕಾರ್ಯಕ್ರಮದ ನಡೆಯಲಿದೆ.

ಪಶುಸಂಗೋಪನೆ, ರೇಷ್ಮೆ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಕೆ. ವೆಂಕಟೇಶ್ ಅವರು ಕಾರ್ಯಕ್ರಮ ಉದ್ಘಾಟಿಸುವರು. ಎಂ.ಎಸ್.ಐ.ಎಲ್. ಅಧ್ಯಕ್ಷರು ಹಾಗೂ ಶಾಸಕರಾದ ಸಿ. ಪುಟ್ಟರಂಗಶೆಟ್ಟಿ ಅವರು ಅಧ್ಯಕ್ಷತೆ ವಹಿಸುವರು. ಲೋಕಸಭಾ ಸದಸ್ಯರಾದ ಸುನೀಲ್ ಬೋಸ್ ಅವರು ಗೌರವ ಉಪಸ್ಥಿತಿ ವಹಿಸುವರು.

ಶಾಸಕರಾದ ಎ.ಆರ್. ಕೃಷ್ಣಮೂರ್ತಿ, ಹೆಚ್.ಎಂ. ಗಣೇಶ್ ಪ್ರಸಾದ್, ಎಂ.ಆರ್. ಮಂಜುನಾಥ, ಡಾ. ಡಿ. ತಿಮ್ಮಯ್ಯ, ಸಿ.ಎನ್. ಮಂಜೇಗೌಡ, ಮಧು ಜಿ. ಮಾದೇಗೌಡ, ಕೆ. ವಿವೇಕಾನಂದ, ಕಾವೇರಿ ಜಲಾನಯನ ಯೋಜನೆ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಪಿ. ಮರಿಸ್ವಾಮಿ, ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷರಾದ ಹೆಚ್.ವಿ. ಚಂದ್ರು, ಚಾಮರಾಜನಗರ–ರಾಮಸಮುದ್ರ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಮಹಮ್ಮದ್ ಅಸ್ಗರ್ (ಮುನ್ನ) ಅವರು ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳುವರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸರ್ಕಾರದ ಕಾರ್ಯದರ್ಶಿಗಳು, ಕರ್ನಾಟಕ ಹಿಂದು ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮದಾಯ ದತ್ತಿಗಳ ಇಲಾಖೆಯ ಆಯುಕ್ತರು ಹಾಗೂ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳಾದ ಡಾ. ಎಂ.ವಿ. ವೆಂಕಟೇಶ್, ಸಮಾಜ ಕಲ್ಯಾಣ ಇಲಾಖೆಯ ಕಾರ್ಯದರ್ಶಿಗಳಾದ ಡಿ. ರಂದೀಪ್, ಆಯುಕ್ತರಾದ ಡಾ.ಕೆ. ರಾಕೇಶ್‌ಕುಮಾರ್ ಅವರು ವಿಶೇಷ ಆಹ್ವಾನಿತರಾಗಿ ಕಾರ್ಯಕ್ರಮದಲ್ಲಿ ಭಾಗವಹಿಸುವರು. ಬೋಗಾಪುರ ಸರ್ಕಾರಿ ಪ್ರಥಮ ದರ್ಜೆ ವಸತಿ ಕಾಲೇಜಿನ ಪ್ರಾಂಶುಪಾಲರಾದ ಡಾ. ಪಿ. ದೇವರಾಜು ಅವರು ಸಂವಿಧಾನದ ಆಶಯಗಳ ಕುರಿತು ಮುಖ್ಯ ಭಾಷಣ ಮಾಡುವರು ಎಂದು ಪ್ರಕಟಣೆ ತಿಳಿಸಿದೆ.

## ತಾಲೂಕನ್ನು ಕ್ಷಯಮುಕ್ತ ತಾಲ್ಲೂಕನ್ನಾಗಿ ಮಾಡುವ ಗುರಿ

### ತಾಲೂಕು ವೈದ್ಯಾಧಿಕಾರಿ ಡಾ.ಆಲೀಂಪಾಶ ಅಭಿಮತ



ಗುಂಡ್ಲುಪೇಟೆ: ರಾಷ್ಟ್ರೀಯ ಕ್ಷಯರೋಗ ನಿರ್ಮೂ ಲನ ಕಾರ್ಯಕ್ರಮದ ಅಡಿ ತಾಲೂಕು ಆರೋಗ್ಯ ಅಧಿಕಾರಿಗಳ ಸೂಚನೆಯ ಮೇರೆಗೆ ಗುಂಡ್ಲುಪೇಟೆ ತಾಲೂಕಿನಲ್ಲಿ ಬರುವ ಮಲ್ಲ ಯ್ಯನಪುರ ಗ್ರಾಮದಲ್ಲಿ ಆರೋಗ್ಯ ತಪಾಸಣಾ ಶಿಬಿರವನ್ನು ಉದ್ಘಾಟನೆ ಮಾಡಿ ಮಾತನಾಡುತ್ತಿದ್ದ ಅವರು ಶಿಬಿರದಲ್ಲಿ 163 ಜನರಿಗೆ ರಕ್ತದೊತ್ತಡ ,ಸಕ್ಕರೆ ಕಾಯಿಲೆ, ಕ್ಷಯ ರೋಗ ತಪಾಸಣೆಗಾಗಿ ಕಫ ಪರೀಕ್ಷೆ ಮಾಡುವುದರ ಮೂಲಕ ಆರೋಗ್ಯ ತಪಾಸಣೆ ಮಾಡಲಾಯಿತು, ಎರಡು ವಾರಕ್ಕಿಂತ ಹೆಚ್ಚು ಕೆಮ್ಮು, ಎರಡು ವಾರಕ್ಕಿಂತ ಹೆಚ್ಚು ಜ್ವರ, ತೂಕ ಕಡಿಮೆಯಾಗು ವುದು, ಹಸಿವಾಗದೆ ಇರುವುದು, ಕಫದಲ್ಲಿ ರಕ್ತ ಇವುಗಳು ಕ್ಷಯರೋಗದ ಲಕ್ಷಣಗಳಾಗಿದ್ದು ಸಾರ್ವಜನಿಕರಿಗೆ ಇದರ ಬಗ್ಗೆ ಅರಿವು ಮೂಡಿಸಲಾಯಿತು ಹಾಗೂ ಗುಂಡ್ಲುಪೇಟೆ ತಾಲೂಕಿನ 34 ಗ್ರಾಮ ಪಂಚಾಯಿತಿಗಳ ಕಳೆದ ಸಾಲಿನಲ್ಲಿ 19 ಗ್ರಾಮ ಪಂಚಾಯಿತಿಗಳು ಕ್ಷಯಮುಕ್ತವಾಗಿದ್ದು ಮುಂಬರುವ ದಿನಗಳಲ್ಲಿ ಕ್ಷಯಮುಕ್ತ ಗುಂಡ್ಲುಪೇಟೆ ತಾಲೂಕನ್ನಾಗಿ ಮಾಡುವ ಗುರಿಯನ್ನು ಹೊಂದಲಾಗಿದೆ ಎಂದರು. ಶಿಬಿರದಲ್ಲಿ ವೈದ್ಯಾಧಿಕಾರಿಗಳು ಆಡಿ. ಸುಶ್ಮಿತಾ ಹಾಗೂ

ಪ್ರಾಥಮಿಕ ಆರೋಗ್ಯ ಕೇಂದ್ರ ಕಗ್ಗಳದ ಹುಂಡಿಯ ಸಿಬ್ಬಂದಿ ವರ್ಗದವರು ಹಾಜರಿದ್ದು ಹಾಗೂ ಕೂತನೂರು ಗ್ರಾಮ ಪಂಚಾಯಿತಿಯ ಪಿಡಿಓ ಕುಮಾರಸ್ವಾಮಿ ಮತ್ತು ಪಂಚಾಯತಿ ಸದಸ್ಯರಾದ ರಮೇಶ್ ರವರು ಈ ಒಂದು ತಪಾಸಣೆ ಶಿಬಿರವನ್ನು ಯಶಸ್ವಿಗೊಳಿಸಲು ಸಹಕರಿಸಿದರು.

## ಹಾವು ಕಚ್ಚಿ ಮಹಿಳೆ ಸಾವು

ಮಂಡ್ಯ: ಹಸುವಿಗೆ ಹುಲ್ಲು ಕೊಯ್ಯುವಾಗ ವಿಷಪೂರಿತ ಹಾವು ಕಚ್ಚಿ ಮಹಿಳೆ ಮೃತಪ ಟ್ಟಿರುವ ಘಟನೆ ತಾಲ್ಲೂಕಿನ ಉಪ್ಪರಕನಹಳ್ಳಿ ಗ್ರಾಮದಲ್ಲಿ ಮಂಗಳವಾರ ನಡೆದಿದೆ.

ಉಪ್ಪರಕನಹಳ್ಳಿ ಗ್ರಾಮದ ಕುಮಾರ ಅವರ ಪತ್ನಿ ನೇತ್ರಾ (40) ಮೃತ ಮಹಿಳೆ ಯಾಗಿದ್ದು, ಮೃತರಿಗೆ ಒಬ್ಬ ಪುತ್ರ, ಓರ್ವ ಪುತ್ರಿ ಇದ್ದಾರೆ. ಮಂಗಳವಾರ ಬೆಳಗ್ಗೆ ಜಮೀನಿನಲ್ಲಿ ಕೆಲಸ ಮಾಡುತ್ತಿದ್ದ ಪತಿ ಕುಮಾರ ಅವರಿಗೆ ಊಟ ಕೊಟ್ಟು ಹಸುವಿಗಾಗಿ ಹುಲ್ಲು ಕೊಯ್ಯುತ್ತಿದ್ದ ವೇಳೆ ನೇತ್ರಾ ಅವರಿಗೆ ವಿಷೂರಿತ ಹಾವು ಕಚ್ಚಿದೆ. ಹಾವು ಕಚ್ಚಿದ ತಕ್ಷಣ ನೇತ್ರಾ ಅವರು ಕೂಗಿಕೊಂಡ ಹಿನ್ನೆಲೆಯಲ್ಲಿ ಅವರನ್ನು ನಗರದ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದಾರೆ. ನಗರದ ಮಿಮ್ಸ್ ಆಸ್ಪತ್ರೆಯ ಶವಾಗಾರದಲ್ಲಿ ಪರೀಕ್ಷೆ ನಡೆಸಿ ಶವವನ್ನು ವಾರಸುದಾರರಿಗೆ ನೀಡಲಾಗಿದೆ.

ಈ ಸಂಬಂಧ ಕೆರಗೋಡು ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದು, ಮುಂದಿನ ಕ್ರಮ ಕೈಗೊಂಡಿದ್ದಾರೆ.

## ವಿಗ್ರಹ ವಿರೂಪ ಅರೋಪಿಗಳಿಗೆ ಕಠಿಣ ಶಿಕ್ಷೆಯಾಗಲಿ: ಒತ್ತಾಯ




ಚಾಮರಾಜನಗರ, ತಾಲೂಕಿನ ಜ್ಯೋತಿ ಗೌಡನ ಪುರ ಗ್ರಾಮದಲ್ಲಿ ಅಂಬೇಡ್ಕರ್ ಭಾವಚಿತ್ರವಿರುವ ಫ್ಲೆಕ್ಸ್ ಹಾಗೂ ಬುದ್ದನ ವಿಗ್ರಹ ವಿರೂಪಗೊಳಿಸಿರುವ ಕಿಡಿಗೇಡಿ ಗಳನ್ನು ಬಂಧಿಸಿ ಕಠಿಣ ಶಿಕ್ಷೆ ವಿಧಿಸಬೇಕು ಎಂದು ಗ್ರಾಮದ ಮುಖಂಡ ವೀರಣ್ಣ ಒತ್ತಾಯಿಸಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ಕರೆದಿದ್ದ ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಪ್ರಕರಣ ಸಂಬಂಧ ಈಗಾ ಗಲೇ ಪೊಲೀಸ್ ಇಲಾಖೆ ಓರ್ವನನ್ನು ಬಂಧಿಸಿದೆ. ತನಿಖೆಯು ಇನ್ನು ಸಹ ಪ್ರಗತಿಯಲ್ಲಿದೆ ಎಂದು ಎಸ್ಪಿ ಅವರ ಹೇಳಿಕೆ ನೀಡಿದ್ದಾರೆ. ಹೀಗಾಗಿ ಒಬ್ಬನಿಂದ ಆಗಿರುವ ಕೃತ್ಯ ಇದಾಗಿಲ್ಲ. ಇದೊಂದು ಪಿತೂರಿ ಹಾಗು ಷಡ್ಯಂತರವಾಗಿದೆ. ಹೀಗಾಗಿ ಇದರ ಹಿಂದೆ ಇನ್ನೂ ಹಲವರ ಕೈವಾಡವಿರುವ ಶಂಕೆ ಇದೆ. ಮಂಪರ ಪರೀಕ್ಷೆ ಮಾಡಿಸಿ, ಆರೋ ಪಿಗಳನ್ನು ಪತ್ತೆ ಮಾಡಿ, ಬಂಧಿಸಿ ಕಾನೂನಿನಡಿಯಲ್ಲಿ ಶಿಕ್ಷೆಯಾಗಬೇಕು ಎಂದು ಆಗ್ರಹಿಸಿದರು. ಈ ಕೃತ್ಯವನ್ನು ಓರ್ವ ವ್ಯಕ್ತಿ ಮಾಡಲು ಸಾಧ್ಯವಿಲ್ಲ. ಇದರ ಹಿಂದೆ ಕಾಣದ ಕೈಗಳ ಕೈವಾಡ ಇದೆ. ನಾವು ಯಾವುದೇ ಜನಾಂಗದ ವಿರೋಧಿ ಯಲ್ಲ. ಕೃತ್ಯ ಎಸಗಿರುವ ವ್ಯಕ್ತಿ ಯಾವುದೇ ಜನಾಂಗಕ್ಕೆ ಸೇರಿರಲಿ ಆತನಿಗೆ ಕಾನೂನಿನಡಿ ಶಿಕ್ಷೆಯಾಗ ಬೇಕು. ಅಲ್ಲದೇ ರಾಷ್ಟ್ರೀಯ ನಾಯಕರು. ಮಹಾ ಪುರುಷರ ವಿಗ್ರಹ ಮತ್ತು ಭಾವಚಿತ್ರಗಳನ್ನು ವಿರೂಪ ಗೊಳಿಸುವ ಪ್ರಕರಣಗಳಿಗೆ ಸಂಬಂಧಿಸಿ ದಂತೆ ಯಾವುದೇ ಸಮುದಾಯದವರನ್ನು ಇಂಥ ಕೃತ್ಯದಲ್ಲಿ ಭಾಗಿಯಾಗಿದ್ದರೆ, ಅಂಥವರನ್ನು ಉಗ್ರ ಶಿಕ್ಷೆಯನ್ನು ವಿಧಿಸುವ ಕಾನೂನಿಗೆ ತಿದ್ದುಪಡಿ ಮಾಡಬೇಕು ಎಂದು ಒತ್ತಾಯಿಸಿದರು. ನ.15 ರಂದು ಚಾ.ನಗರದಲ್ಲಿ ನಡೆದ ನಾಯಕ ಜನಾಂಗದ ಪ್ರತಿಭಟನೆಯಲ್ಲಿ ದಲಿತ ಜನಾಂಗದ ವಿರುದ್ಧವಾಗಿ ಮಾತನಾಡಿರುವುದು ಖಂಡನೀಯ. ಗ್ರಾಮದಲ್ಲಿ ಎಲ್ಲ ಜನಾಂಗದವರು ಸಹೋದರತೆಯಿಂದ ಜೀವನ ನಡೆಸುತ್ತಿದ್ದೇವೆ. ಸಂವಿಧಾನ ದಡಿಯಲ್ಲಿ ಬದುಕುತ್ತಿದ್ದೇವೆ. ಕೆಲವರು ಸಂವಿಧಾನ ಹಾಗೂ ಅಂಬೇಡ್ಕರ್ ಅವರನ್ನು ಅರ್ಥ ಮಾಡಿ ಕೊಳ್ಳಬೇಕು ಎಂದು ತಿಳಿಸಿದರು. ಕೃತ್ಯ ಎಸಗಿರು ವವರನ್ನು ಬಂಧಿಸಿ ಶಿಕ್ಷೆ ವಿಧಿಸಬೇಕು. ಅಲ್ಲದೇ ಅವರನ್ನು ಗಡಿ ಪಾರು ಮಾಡಬೇಕು. ಇಂತಹ ಕೃತ್ಯಗಳು ಮರುಕಳಿಸದಂತೆ ಕ್ರಮವಹಿಸಬೇಕು. ಜನಾಂಗಗಳ ನಡುವೆ ಗಲಭೆಗೆ ಅವಕಾಶ ಬೇಡ ಎಂದರು. ರಾಘವೇಂದ್ರ ಪ್ರಸನ್ನ ಮಾತನಾಡಿ, ಪ್ರಚೋದನಕಾರಿಯಾಗಿ ಹೇಳಿಕೆ ನೀಡುತ್ತಿರುವ ನಾಯಕ ಸಮುದಾಯದ ಕೆಲ ಮುಖಂಡರನ್ನು ತನಿಖೆ ಮಾಡಬೇಕು ಎಂದು ಆಗ್ರಹಿಸಿದರು. ಪತ್ರಿಕಾ ಗೋಷ್ಠಿಯಲ್ಲಿ ಗ್ರಾಮದ ಯಜಮಾನರಾದ ಕೃಷ್ಣಯ್ಯ, ಮುಖಂಡರಾದ ವೆಂಕಟೇಶ್, ಮರಿಸ್ವಾಮಿ, ಕೇಶವ ಮೂರ್ತಿ, ಶ್ರೀಕಂಠಮೂರ್ತಿ, ಲಿಂಗರಾಜು ಇದ್ದರು.

# ಅಧಿಕಾರ ಹಸ್ತಾಂತರ : ನಮ್ಮ ಗುಟ್ಟಿನ ವಿಚಾರ, ಬಹಿರಂಗ ಮಾಡುವುದಿಲ್ಲ

### ಪಕ್ಷಕ್ಕೆ ಮುಜುಗರ ತರಲು, ದುರ್ಬಲ ಮಾಡಲು ನನಗೆ ಇಷ್ಟವಿಲ್ಲ । ನನಗಾಗಿ ಶ್ರಮಿಸುವ ಕಾರ್ಯಕರ್ತರ ಪರ ನಿಲ್ಲೋದು ನನ್ನ ಕರ್ತವ್ಯ: ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್

ರಾಮನಗರ/ ಕನಕಪುರ: ಅಧಿಕಾರ ಹಸ್ತಾಂತರ ನಮ್ಮ ಐದಾರು ಜನರ ನಡುವಿನ ಗುಟ್ಟಿನ ವಿಚಾರ, ಅದನ್ನು ಬಹಿರಂಗ ಮಾಡುವುದಿಲ್ಲ ಎಂದು ಕೆಪಿಸಿಸಿ ಅಧ್ಯಕ್ಷ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಪ್ರತಿಕ್ರಿಯಿಸಿದರು.

ಕನಕಪುರದ ಟಿ.ಎಪಿ.ಸಿ.ಎಂ.ಎಸ್‌ಗೆ ಮಂಗಳವಾರ ನಡೆದ ಚುನಾವಣೆಯಲ್ಲಿ ಮತ ಚಲಾಯಿಸಿದ ನಂತರ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆಯವರು ದೆಹಲಿಗೆ ತೆರಳಲಿದ್ದಾರೆ. ಕಾಂಗ್ರೆಸ್ ವರಿಷ್ಠ ರಾಹುಲ್ ಗಾಂಧಿ ಅವರೊಂದಿಗೆ ಅಧಿಕಾರ ಹಸ್ತಾಂತರದ ವಿಚಾರ ಮಾತನಾಡುವರೇ ಎಂದು ಮಾಧ್ಯಮ ಪ್ರತಿನಿಧಿಗಳ ಪ್ರಶ್ನೆಗೆ ಅವರು ಹೀಗೆ ಪ್ರತಿಕ್ರಿಯಿಸಿದರು. ರಾಹುಲ್ ಗಾಂಧಿ ಹಾಗೂ ಮಲ್ಲಿಕಾರ್ಜುನ ಖರ್ಗೆಯವರ ನಡುವೆ ನಡೆಯುವ ಚರ್ಚೆಯ ವಿಚಾರಗಳು ನನಗೆ ಗೊತ್ತಿಲ್ಲ ಎಂದರು.

ಮುಖ್ಯ ಮಂತ್ರಿ ಸಿದ್ದರಾಮಯ್ಯ ಅವರು ಹಿರಿಯ ನಾಯಕರು, ಅವರು ನಮ್ಮ ಪಕ್ಷದ ಆಸ್ತಿ. ಅವರು ಸಿಎಂ ಆಗಿ ಏಳೂವರೆ ವರ್ಷಗಳ ಕಾಲ ಅಧಿಕಾರ ನಡೆಸಿದ್ದಾರೆ. ಮುಂದಿನ ಬಜೆಟ್ ಅನ್ನು ಅವರೇ ಮಂಡಿಸುವುದಾಗಿ ಹೇಳಿದ್ದಾರೆ. ಬಹಳ ಸಂತೋಷ. ಅವರು ವಿರೋಧ ಪಕ್ಷದ ನಾಯಕರಾಗಿ ಶ್ರಮಿಸಿದ್ದಾರೆ. ಪಕ್ಷ ಕಟ್ಟಿದ್ದಾರೆ. ನಾವೆಲ್ಲರೂ ಸೇರಿ 2028 ಹಾಗೂ 2029ರ ಚುನಾವಣೆ ಗುರಿಯತ್ತ ಗಮನ ಹರಿಸಬೇಕು ಎಂದು ತಿಳಿಸಿದರು.

ನಾನು ಆತ್ಮಸಾಕ್ಷಿಯನ್ನು ನಂಬಿದ್ದೇನೆ. ಆತ್ಮಸಾಕ್ಷಿಗೆ ತಕ್ಕಂತೆ ನಾವು ಕೆಲಸ ಮಾಡಬೇಕು. ಪಕ್ಷಕ್ಕೆ ಮುಜುಗರ ತರಲು, ಪಕ್ಷವನ್ನು ದುರ್ಬಲಗೊಳಿಸಲು ನನಗೆ ಇಷ್ಟವಿಲ್ಲ. ಪಕ್ಷ ಹಾಗೂ ಕಾರ್ಯಕರ್ತರು ಇದ್ದರೆ ನಾವು ಎಂದರು.

#### ನನಗಾಗಿ ಶ್ರಮಿಸುವ ಕಾರ್ಯಕರ್ತರ

#### ಸಚಿವ ಸ್ಥಾನ ಆಕಾಂಕ್ಷಿಗಳು ದೆಹಲಿಗೆ ಹೋಗಿದ್ದಾರೆ

ಕೆಲ ಶಾಸಕರು ದೆಹಲಿಗೆ ತೆರಳಿದ್ದು, ನಿಮ್ಮನ್ನು ಸಿಎಂ ಮಾಡಲು ಪ್ರಯತ್ನಿಸುತ್ತಿದ್ದಾರೆ ಎಂದು ಕೇಳಿದಾಗ, ಸಚಿವ ಸ್ಥಾನದ ಆಕಾಂಕ್ಷೆ ಇರುವವರು ಹೋಗಿದ್ದಾರೆ, ನನ್ನನ್ನು ಸಿಎಂ ಮಾಡುವ ಪ್ರಯತ್ನದ ಬಗ್ಗೆ ನನಗೆ ಗೊತ್ತಿಲ್ಲ. ನಾನು ಅವರಿಗೆ ಕರೆ ಮಾಡಿಲ್ಲ, ಅವರನ್ನು ಕಳುಹಿಸಿಲ್ಲ. ಯಾಕೆ ಹೋದಿರಿ ಎಂದು ಪ್ರಶ್ನೆ ಮಾಡುವುದಿಲ್ಲ ಎಂದರು. ಅಧಿಕಾರ ಹಂಚಿಕೆ ಒಪ್ಪಂದ ಆಗಿತ್ತೇ ಎಂದು ಕೇಳಿದಾಗ, ನಾನು ಆ ಬಗ್ಗೆ ಯಾಕೆ ಮಾತನಾಡಲಿ, ನೀವುಗಳೇ (ಮಾಧ್ಯಮಗಳು) ಏನೇನೋ ಬರೆಯುತ್ತಿದ್ದೀರಿ ಎಂದು ತಿಳಿಸಿದರು. ಅಧಿಕಾರ ಹಂಚಿಕೆ ವಿಚಾರವಾಗಿ ಬಸವರಾಜ ರಾಯರೆಡ್ಡಿ, ಸದಾನಂದ ಗೌಡರ ಹೇಳಿಕೆ ಬಗ್ಗೆ ಕೇಳಿದಾಗ, ನಾನು ಯಾರ ಹೇಳಿಕೆಗೂ ಪ್ರತಿಕ್ರಿಯೆ ನೀಡುವುದಿಲ್ಲ. ನಾನು ಅವರ ವಕ್ತಾರನಲ್ಲ ಎಂದು ತಿಳಿಸಿದರು.



#### ನನ್ನ ಕಷ್ಟಕಾಲದಲ್ಲಿ ಜನರು ಮಾಡಿದ್ದ ಪ್ರಾರ್ಥನೆ ಮರೆಯುವುದಿಲ್ಲ

ನೀವು ಸಿಎಂ ಆಗಬೇಕು ಎಂದು ಜನರು ಪೂಜೆ ಮಾಡುತ್ತಿದ್ದಾರಲ್ಲಾ ಎಂದಾಗ, ನನಗೆ ಅಧಿಕಾರ ಸಿಗಲಿ ಎಂದು ಈಗ ಪೂಜೆ ಮಾಡುತ್ತಿರುವುದಕ್ಕಿಂತ, ನಾನು ಜೈಲಿಗೆ ಹೋದಾಗ ನನ್ನ ತಾಯಂದಿರು, ಯುವಕರು, ಹಿರಿಯರು ದೇವಾಲಯದ ಅರ್ಚಕರು ಮಾಡಿದ ಪ್ರಾರ್ಥನೆಯನ್ನು ಮರೆಯಲು ಸಾಧ್ಯವಿಲ್ಲ. ಬಿಜೆಪಿ ಅವಧಿಯಲ್ಲಿ ನಾನು ಜೈಲಿಂದ ಬಿಡುಗಡೆ ಆದಾಗ ಪೊಲೀಸರ ಬೆದರಿಕೆಗೂ ಹಿಂಜರಿಯದೇ ನನ್ನನ್ನು ಜನ ಸ್ವಾಗತಿಸಿದರು. ನಾನು ಜೈಲಲ್ಲಿ ಇದ್ದಾಗ ಕರವೇ ನಾರಾಯಣ ಗೌಡರಿಗೆ ಪ್ರತಿಭಟನೆ ನಡೆಸದಂತೆ ಪೊಲೀಸ್ ಅಧಿಕಾರಿ ಭಾಸ್ಕರ್ ರಾವ್ ಅವರು ಬೆದರಿಕೆ ಹಾಕಿದ್ದರು. ಕೆಲವು ಸ್ವಾಮೀಜಿಗಳು ಬಂದರು, ಕೆಲವರು ಬರಲಿಲ್ಲ. ಚನ್ನಪಟ್ಟಣದಲ್ಲಿ ಮಾಜಿ ಸಿಎಂ ಕುಮಾರಸ್ವಾಮಿ ಬೇರೆ ಹೇಳಿಕೆ ಕೊಟ್ಟರು. ಅನೇಕರು ನಮ್ಮ ಮನೆಗೆ ಬಂದು ನನ್ನ ಪತ್ನಿ ಹಾಗೂ ಮಕ್ಕಳ ಜೊತೆ ಮಾತನಾಡಿ ಧೈರ್ಯ ತುಂಬಿದ್ದರು. ಅಂದು ಜನ ಹರಕೆ ಹೊತ್ತು ಪ್ರಾರ್ಥಿಸಿದ್ದರು. ಆಗ ಕಟ್ಟಿಕೊಂಡ ಹರಕೆ ಮುಗಿಸಲು ಇನ್ನೂ ನನಗೆ ಆಗುತ್ತಿಲ್ಲ. ನಿಮ್ಮನ್ನು ಸಿಎಂ ಸ್ಥಾನದಲ್ಲಿ ನೋಡಬೇಕು ಎಂದು ಜಿಲ್ಲೆಯ ನಾಲ್ಕೂ ಕ್ಷೇತ್ರಗಳಲ್ಲೂ ಜನ ಪಕ್ಷಕ್ಕೆ ಬೆಂಬಲ ನೀಡಿದ್ದಾರೆ ಅಲ್ಲವೇ ಎಂದು ಕೇಳಿದಾಗ, ನಾನು ಚುನಾವಣೆ ಸಂದರ್ಭದಲ್ಲಿ ಮಹದೇವಪ್ಪ ಅವರ ಕ್ಷೇತ್ರ, ಮಂಡ್ಯ ಸೇರಿದಂತೆ ಎಲ್ಲಾ ಕಡೆಗಳಲ್ಲಿ ನನ್ನ ಮುಖ ನೋಡಿ ಮತ ಹಾಕಿ ಎಂದೂ ಕೇಳಿದ್ದೇನೆ. ಜನ ನಮ್ಮ ಸಾಮೂಹಿಕ ನಾಯಕತ್ವಕ್ಕೆ ಮತ ಹಾಕಿದ್ದಾರೆ. ನನ್ನೊಬ್ಬನಿಗಾಗಿ ಮತ ಹಾಕಿದ್ದಾರೆ ಎಂದು ನಾನು ಹೇಳುವುದಿಲ್ಲ. 224 ಕ್ಷೇತ್ರಗಳಲ್ಲಿ ನಮಗಿಂತ ನಮ್ಮ ಕಾರ್ಯಕರ್ತರು ಹೆಚ್ಚು ಶ್ರಮ ಹಾಕಿದ್ದಾರೆ ಎಂದು ತಿಳಿಸಿದರು.

#### ಚುನಾವಣೆಯಲ್ಲಿ ಮತ ಹಾಕುವುದು ನನ್ನ ಕರ್ತವ್ಯ

ಅನೇಕ ಕೆಲಸಗಳ ಮಧ್ಯೆ ಕಾರ್ಯಕರ್ತರ ಚುನಾವಣೆಗೆ ಬಂದಿದ್ದೀರಿ ಎಂದು ಕೇಳಿದಾಗ, ಕಾರ್ಯಕರ್ತರು ಎಂದರೆ ನಾವು. ರಾಮಕೃಷ್ಣ ಹೆಗಡೆ ಅವರು ಸಿಎಂ ಆಗಿದ್ದಾಗ ಇದೇ ಚುನಾವಣೆಗೆ ನಾನು ಹಾಗೂ ಶ್ರೀಕಂಠಯ್ಯ ಅವರು ಚುನಾವಣೆಗೆ ಸ್ಪರ್ಧಿಸಿದ್ದೆವು. ಉಳಿದಂತೆ ಜನತಾದಳದಿಂದ ಸ್ಪರ್ಧಿಸಿದ್ದರು. ನನ್ನ ರಾಜಕೀಯ ಬದುಕಿನ ಮೊದಲ ಚುನಾವಣೆ ಅದಾಗಿತ್ತು. ಕನಕಪುರದಲ್ಲಿ ಈ ಚುನಾವಣೆ ಗೆದ್ದು ನಿರ್ದೇಶಕನಾಗಿ ಆಯ್ಕೆಯಾಗಿದ್ದೆ. ಆಗ ಆಸ್ಕರ್ ಫರ್ನಾಂಡಿಸ್ ಅವರು ಇದೇ ಕಟ್ಟಡದ ಕೋಣೆಯಲ್ಲಿ ಒಂದು ತಿಂಗಳು ಇದ್ದು, ಚುನಾವಣೆ ಮಾಡಿದ್ದರು. ಇದು ಕಾರ್ಯಕರ್ತರ ಚುನಾವಣೆ. ಕಾರ್ಯಕರ್ತರು ನನ್ನ ಚುನಾವಣೆ ಮಾಡುವಾಗ, ನಾನು ಅವರ ಚುನಾವಣೆಗೆ ಬಂದು ಮತ ಹಾಕದಿದ್ದರೆ ನನ್ನಿಂದ ಕರ್ತವ್ಯ ಲೋಪವಾಗುತ್ತದೆ. ಕಾರ್ಯಕರ್ತರು ಬಲಿಷ್ಠವಾಗಿದ್ದರೆ ಮಾತ್ರ ನಾವು ಬಲಿಷ್ಠವಾಗುತ್ತೇವೆ. ಚುನಾವಣೆಯಲ್ಲಿ ರಾಜಿ ಮಾಡಿಕೊಳ್ಳಿ ಎಂದು ಕೇಳಿದರು. ನಾವೇ ಚುನಾವಣೆ ಆಗಲಿ, ಕಾರ್ಯಕರ್ತರಿಗೆ ಚುನಾವಣೆ ಅನುಭವವಾಗಲಿ ಎಂದು ಹೇಳಿದ್ದೇವೆ. ನಾವು ಸಂಸತ್ ಚುನಾವಣೆ ವೇಳೆ ಯಾಮಾರಿದೆವು, ಎಷ್ಟೋ ಬೂತ್ ಗಳಿಗೆ ಏಜೆಂಟ್ ಗಳು ಇರಲಿಲ್ಲ. ಒಳೇಟು ಯಾವ ರೀತಿ ಬಿತ್ತು ಎಂದು ತಿಳಿಯಲಿಲ್ಲ. ನಾವು ನಮ್ಮ ತಪ್ಪನ್ನು ತಿದ್ದುಕೊಳ್ಳುತ್ತೇವೆ. ರಾಜಕಾರಣದಲ್ಲಿ ನಮ್ಮ ವೈರಿ ಯಾರು ಎಂದು ತಿಳಿಯಬೇಕು. ಈ ಚುನಾವಣೆಯಲ್ಲಿ ನಮ್ಮ ಪರ ಯಾರು ನಿಂತಿದ್ದಾರೆ, ವಿರುದ್ಧ ಯಾರು ನಿಂತಿದ್ದಾರೆ ಎಂದು ತಿಳಿಯುತ್ತದೆ. ಹೀಗಾಗಿ ಚುನಾವಣೆ ಮಾಡುತ್ತಿದ್ದೇವೆ ಎಂದು ತಿಳಿಸಿದರು.ಪಕ್ಷ ಸಂಘಟನೆಗೆ ಇಂತಹ ಚುನಾವಣೆಗಳು ಮುಖ್ಯವೇ ಎಂದು ಕೇಳಿದಾಗ, ಪಕ್ಷಕ್ಕೆ ಮೂಲ ಸ್ವರೂಪ ಇಲ್ಲವಾದರೆ ಯಾವ ಪಕ್ಷವೂ ಇರಲು ಸಾಧ್ಯವಿಲ್ಲ. ಇದು ನಮ್ಮ ಮೂಲ. ಸೊಸೈಟಿ, ಹಾಲಿನ ಒಕ್ಕೂಟ, ಪಿಎಲ್ ಡಿ, ಮುನ್ಸಿಪಾಲಿಟಿ, ಪಂಚಾಯ್ತಿಗಳು ನಮ್ಮ ಆಸ್ತಿಗಳಿದ್ದಂತೆ. ಇಲ್ಲಿರುವುದು 300 ಚಿಲ್ಲರೆ ಮತಗಳು, ಆದರೂ 300 ನಾಯಕರು ಕಾರ್ಯಕರ್ತರ ಗೆಲುವಿಗೆ ಬಂದಿದ್ದಾರೆ. ಹೀಗಾಗಿ ಎಷ್ಟೇ ಕೆಲಸದ ಒತ್ತಡ ಇದ್ದರೂ ಬಂದು ಮತ ಹಾಕುತ್ತಿದ್ದೇನೆ. ನಾವು ಬರಲಿಲ್ಲ ಅಂದರೆ, ನಾಯಕರೇ ಬಂದು ಮತ ಹಾಕಿಲ್ಲ, ನಾವು ಯಾಕೆ ಹಾಕಬೇಕು ಎಂದು ಹಳ್ಳಿಗಳಲ್ಲಿ ಮರ್ಯಾದೆ ತೆಗೆಯುತ್ತಾರೆ ಎಂದರು.

#### ಡಿಕೆಶಿ ಮತ ಚಲಾವಣೆ

ಕನಕಪುರ ತಾಲ್ಲೂಕು ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘದ (ಟಿ.ಎಪಿ.ಸಿ.ಎಂ.ಎಸ್) ಪದಾಧಿಕಾರಿಗಳ ಹುದ್ದೆಗೆ ಮಂಗಳವಾರ ಚುನಾವಣೆ ನಿಗಧಿಯಾಗಿತ್ತು. ಟಿ.ಎಪಿ.ಸಿ.ಎಂ.ಎಸ್ ಉಗ್ರಾಣದಲ್ಲಿ ಮತಗಟ್ಟೆಯನ್ನು ಸ್ಥಾಪಿಸಲಾಗಿತ್ತು. ಕನಕಪುರ ಕ್ಷೇತ್ರದ ಶಾಸಕರೂ ಆಗಿರುವ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್. ಚುನಾವಣೆಯಲ್ಲಿ ಭಾಗಿಯಾಗಿ ತಮ್ಮ ಮತ ಚಲಾಯಿಸಿದರು. ಮತಗಟ್ಟೆಯಿಂದ ಹೊರ ಬಂದ ಅವರು ತಾವು ಮತ ಚಲಾಯಿಸಿದ್ದಕ್ಕೆ ಸಾಕ್ಷಿಯಾಗಿ ಎಡಗೈ ತೋರುಬೆರಳಿಗೆ ಹಾಕಿದ್ದ ಗುರುತನ್ನು ತೋರಿಸಿದರು. ಈ ವೇಳೆ ಅವರ ಎಡಗೈಗೆ ಕ್ಯಾನುಲ (ಡ್ರಿಪ್ಸ್/ಇಂಜೆಕ್ಷನ್ ನೀಡಲು ವೈದ್ಯರು ಅಳವಡಿಸಿರುವ ಸೂಜಿ) ಕಂಡು ಬಂತು.



## ವಿಜೃಂಭಣೆಯ ಹನುಮ ಜಯಂತಿ ಆಚರಣೆ



ಗುಂಡ್ಲುಪೇಟೆ. ಇದೇ ಪ್ರಥಮ ಬಾರಿಗೆ ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಅದ್ದೂರಿ ಹನುಮ ಜಯಂತಿ ಶೋಭ ಯಾತ್ರೆ ಕಾರ್ಯಕ್ರಮ ನಡೆಸಲು ಇಂದು ಗುಂಡ್ಲುಪೇಟೆ ಪಟ್ಟಣದ ವಿಜಯನಾರಾಯಣ ಸ್ವಾಮಿ ದೇವಸ್ಥಾನದಲ್ಲಿ ನಡೆದ ಪೂರ್ವಭಾವಿ ಸಭೆಯಲ್ಲಿ ಒಮ್ಮತದ ನಿರ್ಧಾರ ಕೈಗೊಳ್ಳಲಾಯಿತು.

ಈ ಸಭೆಯಲ್ಲಿ ಸೇರಿದ್ದ ಹನುಮ ಭಕ್ತರು ಡಿಸೆಂಬರ್ ತಿಂಗಳ 27ನೇ ತಾರೀಕಿನಂದು ತಾಲ್ಲೂಕಿನಲ್ಲಿ ಅದ್ದೂರಿಯಾಗಿ ಹನುಮ ಜಯಂತಿ ಆಚರಿಸಲು ನಿರ್ಧರಿಸಲಾಯಿತು. ಈ ಆಚರಣೆಯು ಪಕ್ಷಾತೀತವಾಗಿ, ಎಲ್ಲ ಸಮುದಾಯದವರನ್ನು ಒಗ್ಗೂಡಿಸಿಕೊಂಡು ಹನುಮ ಜಯಂತಿಯನ್ನು ನಡೆಸಬೇಕೆಂದು ಎಲ್ಲರೂ ಸೇರಿ ತೀರ್ಮಾನ ಕೈಗೊಂಡರು. ಇದರ ಸಂಬಂಧ ಶನಿವಾರದಂದು ತಾಲ್ಲೂಕಿನ ಎಲ್ಲ ಸಮುದಾಯದ ಪ್ರಮುಖರನ್ನು ಪಕ್ಷಾತೀತವಾಗಿ ಕರೆದು ಮತ್ತೊಮ್ಮೆ ಸಭೆ ನಡೆಸಿ ಅದ್ದೂರಿಯಾದ ಹನುಮ ಜಯಂತಿಯ ಸಿದ್ಧತೆಗಳನ್ನು ಕುರಿತು ಚರ್ಚೆ ನಡೆಸಲು ನಿರ್ಧರಿಸಲಾಗಿದ್ದು

ತಾಲ್ಲೋಕಿನ ಎಲ್ಲಾ ಗ್ರಾಮಗಳಿಗೆ ತೆರಳಿ ಎಲ್ಲರನ್ನ ಕಾರ್ಯಕ್ರಮಕ್ಕೆ ಆಹ್ವಾನಿಸಬೇಕು, ಅರ್ಥಪೂರ್ಣವಾದ ಹನುಮ ಮೂರ್ತಿಯ ಮೆರವಣಿಗೆ ನಡೆಸಬೇಕು ಎಂದು ಚರ್ಚಿಸಲಾಯಿತು. ಪಕ್ಷ ಭೇದ ಹಾಗೂ ಜಾತಿ ಬೇದಗಳನ್ನ ಬದಿಗಿಟ್ಟು ನಾವೆಲ್ಲರೂ ಹಿಂದೂ ಎಂಬ ಭಾವನೆಯಲ್ಲಿ ಸಮಸ್ತ ಹಿಂದೂ ಭಾಂದವರನ್ನೊಳಗೊಂಡು ಕಾರ್ಯಕ್ರಮ ನಡೆಸಬೇಕೆಂದು ಎಲ್ಲರೂ ಒಮ್ಮತದ ಅಭಿಪ್ರಾಯ ತಿಳಿಸಿದರು. ಈ ಸಭೆಯಲ್ಲಿ ನೂರಾರು ಹನುಮ ಭಕ್ತರು ಉಪಸ್ಥಿತರಿದ್ದರು.

### ಜಿಲ್ಲಾಧಿಕಾರಿ ಶಿಲ್ಪಾನಾಗ್ ಸಲಹೆ

## ಪೊಲೀಸ್ ಕ್ರೀಡಾ ಸ್ಪರ್ಧೆಗಳಲ್ಲಿ ಕೀರ್ತಿ ತನ್ನಿ



ಚಾಮರಾಜನಗರ, ನ, ಜಿಲ್ಲೆಯ ಪೊಲೀಸರು ಕ್ರೀಡಾ ಸ್ಪರ್ಧೆಗಳಲ್ಲಿ ವಿಭಾಗ, ರಾಜ್ಯ ಹಾಗೂ ರಾಷ್ಟ್ರಮಟ್ಟದಲ್ಲಿ ಸಾಧನೆ ಮಾಡಿ ಕೀರ್ತಿ ತರಬೇಕು ಎಂದು ಜಿಲ್ಲಾಧಿಕಾರಿ ಶಿಲ್ಪಾ ನಾಗ್ ಸಲಹೆ ಮಾಡಿದರು. ನಗರದ ಡಿ.ಎ.ಆರ್. ಕೇಂದ್ರ ಸ್ಥಾನದ ಜಿಲ್ಲಾ ಪೊಲೀಸ್ ಕವಾಯತು ಮೈದಾನದಲ್ಲಿ ಹಮ್ಮಿಕೊಂಡಿರುವ 3 ದಿನಗಳ ಜಿಲ್ಲಾ ಪೊಲೀಸ್ ವಾರ್ಷಿಕ ಕ್ರೀಡಾಕೂಟಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು. ಚಾಮರಾಜನಗರ ಜಿಲ್ಲೆಯ ಪೊಲೀಸರ ಬಗ್ಗೆ ತುಂಬಾ ಹೆಮ್ಮೆ ಇದೆ. ಸದಾ ಒತ್ತಡದಲ್ಲೇ ಸರ್ಕಾರಿ ನೌಕರರು ಕಾರ್ಯನಿರ್ವಹಿಸುತ್ತಿದ್ದು, ಇಂತಹ ಸಂದರ್ಭದಲ್ಲಿ ಕುಟುಂಬ ಹಾಗೂ ವೈಯಕ್ತಿಕ ಆರೋಗ್ಯದ ಕಡೆ ಗಮನ ಕೊಡುವುದನ್ನೇ ಮರೆತು ಬಿಡುತ್ತಾರೆ. ಇದಕ್ಕಾಗಿಯೇ ಕ್ರೀಡಾ ಚಟುವಟಿಕೆಗಳು ಚೇತೋಹಾರಿಯಾಗಿದ್ದು, ಇದರಲ್ಲಿ ಸಂತೋಷದಿಂದ ಭಾಗವಹಿಸಬೇಕು ಎಂದರು.

ಜಿಲ್ಲಾಮಟ್ಟದ ಕ್ರೀಡಾಕೂಟದ ಬಳಿಕ ವಿಭಾಗೀಯ, ರಾಜ್ಯ ಹಾಗೂ ಇನ್ನೂ ಉನ್ನತ ಹಂತದಲ್ಲಿ ಆಯೋಜನೆಯಾಗುವ ಕ್ರೀಡಾಕೂಟದಲ್ಲಿಯೂ ಪ್ರತಿನಿಧಿಸಿ ಜಿಲ್ಲೆಗೆ ಹೆಸರು ತರಬೇಕು. ಎಲ್ಲ ಜಿಲ್ಲೆಗಳ ಪೈಕಿ ಚಾಮರಾಜನಗರ ಜಿಲ್ಲೆ ಅಗ್ರಸ್ಥಾನ ಪಡೆಯಬೇಕೆಂದು ಜಿಲ್ಲಾಧಿಕಾರಿಯವರು ಹಾರೈಸಿದರು. ಚಾಮರಾಜನಗರ ಜಿಲ್ಲೆಯ ಪೊಲೀಸ್ ಇಲಾಖೆ ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವಲ್ಲಿ ಉತ್ತಮ ಕಾರ್ಯ ತೋರುತ್ತಿದೆ. ಇತ್ತೀಚೆಗೆ ಜಿಲ್ಲೆಯಲ್ಲಿ ನಡೆದ ಸಚಿವ ಸಂಪುಟ ಸಭೆ, ಮುಖ್ಯಮಂತ್ರಿಯವರು ಭಾಗವಹಿಸಿದ ಸಹಕಾರ ಸಪ್ತಾಹ ಸಮಾರೋಪದಂತಹ ದೊಡ್ಡಮಟ್ಟದ ಕಾರ್ಯಕ್ರಮಗಳಲ್ಲಿ ಪೊಲೀಸರು ಸಮರ್ಪಕವಾಗಿ ಬಂದೋ ಬಸ್ತ್ ಕಾರ್ಯ ನಿರ್ವಹಿಸಿದ್ದು, ಇದಕ್ಕಾಗಿ ಜಿಲ್ಲಾಡಳಿತದ ವತಿಯಿಂದ ಅಭಿನಂದಿಸುತ್ತೇನೆ ಎಂದು ಹೇಳಿದರು. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಬಿ.ಟಿ. ಕವಿತಾ, ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿ ಶೃತಿ, ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ.ಎನ್. ಶಶಿಧರ್, ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.





# ಕನ್ನಡ ಉಳಿಸಿ ಬೆಳೆಸುವ ಕರ್ತವ್ಯ ನಮ್ಮದಲ್ಲವೇ?

ಕನ್ನಡ ಎನೆ ಕುಣಿದಾಡುವುದೆನ್ನದೆ
ಕನ್ನಡ ಎನೆ ಕಿವಿ ನಿಮಿರುವುದು!!

ಕನ್ನಡ ಭಾಷೆಯ ಸ್ವರೂಪವು ದ್ರಾವಿಡ ಭಾಷಾ ಬಳಗಕ್ಕೆ ಸೇರಿದ್ದು, ಸುಮಾರು 1500 ವರ್ಷಗಳ ಇತಿಹಾಸವನ್ನು ಹೊಂದಿರುವ ಒಂದು ಶ್ರೀಮಂತ ಭಾಷೆ. ದ್ರಾವಿಡ ಭಾಷಾ ಬಳಗಕ್ಕೆ ಸೇರಿದ ಈ ಭಾಷೆ, ಭಾರತದ ಮೂರನೇ ಅತಿ ಹಳೆಯ ಸಾಹಿತ್ಯಿಕ ಸಂಪ್ರದಾಯವನ್ನು ಹೊಂದಿದೆ. ಬ್ರಾಹ್ಮೀಲಿಪಿಯಿಂದ ಬೆಳೆದು ಬಂದ ಲಿಪಿಯನ್ನು ಕನ್ನಡ ಹೊಂದಿದೆ. ತಾಯಿ ಭುವನೇಶ್ವರಿ ಅರಿಶಿನ-ಕುಂಕುಮ ಸೀರೆಯನ್ನುಟ್ಟು ನಗುತಾ ನಗುತಾ

ನಮ್ಮ ನೆಲದಲ್ಲಿ ನಮಗಾಗಿ ನೆಲೆಸಿರುವಳು. ಕನ್ನಡವು ಭಾರತದಲ್ಲಿ ಅಧಿಕೃತ ಮಾನ್ಯತೆ ಪಡೆದ "ಅಭಿಜಾತ ಭಾಷೆ" ಎಂದು, ಭಾವನಾತ್ಮಕ ಚಿಂತನೆಯ ಲಹರಿಯೆಂದು ಹೇಳಬಹುದು. ನಮ್ಮ ವಿನೋಬಾ ಭಾವೆ

ಕನ್ನಡ ಲಿಪಿಯನ್ನು "ಲಿಪಿಗಳ ರಾಣಿಯೆಂದು" ಹೊಗಳಿದ್ದಾರೆ.

ಕನ್ನಡವನ್ನು ಉಳಿಸುವಲ್ಲಿ ಕನ್ನಡಿಗರಾದ ನಾವು, ನಮ್ಮ ಪಾತ್ರವನ್ನು ಬಹಳ ಎಚ್ಚರದಿಂದ ಪ್ರಯತ್ನಿಸಬೇಕು. ಭಾಷೆಯ ಪ್ರಚಾರ, ಶಿಕ್ಷಣ, ಸಂಶೋಧನೆ, ಮತ್ತು ತಂತ್ರಜ್ಞಾನದ ಬಳಕೆಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಬೇಕು. ಇದು ವೈಯಕ್ತಿಕ ಮತ್ತು ಸಾಂಸ್ಥಿಕ ಮಟ್ಟದಲ್ಲಿ ಭಾಷೆಯನ್ನು ಬೆಳೆಸುವಲ್ಲಿ ಸಹಾಯ ಮಾಡುತ್ತದೆ. ಕನ್ನಡ ಭಾಷೆಯ ಬಳಕೆ ಮತ್ತು ಬೆಳವಣಿಗೆಗೆ ಪ್ರತಿಯೊಬ್ಬ ಕನ್ನಡಿಗರೂ ಜವಾಬ್ದಾರರಾಗಿರಬೇಕು. ವೈಯಕ್ತಿಕ ಬಳಕೆಯಾಗಿ ಕನ್ನಡ:- ಮನೆಯಲ್ಲಿ, ಸಾರ್ವಜನಿಕ ಸ್ಥಳಗಳಲ್ಲಿ ಮತ್ತು ವ್ಯವಹಾರಗಳಲ್ಲಿ ಕನ್ನಡವನ್ನು ಬಳಸುವುದು. ಮಾತನಾಡಲು ಪ್ರಯತ್ನಿಸಿ, ಕನ್ನಡ ಪುಸ್ತಕಗಳನ್ನು ಓದುವುದು. ಶಿಕ್ಷಣ ಕ್ಷೇತ್ರದಲ್ಲಿ:- ಕನ್ನಡ ಮಾಧ್ಯಮ ಶಾಲೆಗಳನ್ನು ಉಳಿಸುವುದು-ಬೆಳೆಸುವುದು, ನಮ್ಮ ಮಕ್ಕಳನ್ನು ಕನ್ನಡ ಶಾಲೆಗಳಲ್ಲಿ ಓದಿಸಬೇಕು, ಮತ್ತು ಆಂಗ್ಲಮಾಧ್ಯಮ ಶಾಲೆಗಳಲ್ಲಿಕನ್ನಡ ಭಾಷೆಯಲ್ಲಿ

ಚಟುವಟಿಕೆಗಳನ್ನು ನೀಡುವುದು, ಕನ್ನಡ ನಾಟಕಗಳನ್ನು ಪ್ರದರ್ಶಿಸುವುದು, ಕನ್ನಡ ಮಕ್ಕಳ ಚಲನಚಿತ್ರಗಳು ಹೆಚ್ಚು-ಹೆಚ್ಚು ಮಾಡುವುದು, ಕನ್ನಡ ಪದ್ಯಗಳನ್ನು ನೃತ್ಯವಾಡಿಸುವ ಮೂಲಕ ಪರಿಚಯಿಸುವುದು.

ಸಾಹಿತ್ಯ ಮತ್ತು ಸಂಸ್ಕೃತಿ:- ಸಾಹಿತ್ಯ ಮತ್ತು ಸಂಸ್ಕೃತಿಯನ್ನು ಶ್ರೀಮಂತವಾದ, ಹೊನ್ನಿನ, ಶ್ರೀಗಂಧದ ಸುವಾಸನೆಯನ್ನ ಹೊಂದಿದ ನಾಡು ಕರುನಾಡು, ಕನ್ನಡನಾಡು. ಯಕ್ಷಗಾನ, ಭರತನಾಟ್ಯ, ರಂಗಕಲೆ, ನಾಟಕ, ಹರಿಕಥೆಯಂತಹ ಕಾರ್ಯಕ್ರಮಗಳನ್ನು ಪ್ರೋತ್ಸಾಹಿಸುವುದು, ಕಲಾವಿದರ ಪರಿಚಯದೊಂದಿಗೆ ಗೌರವಿಸುವುದು, ದೇಗುಲಗಳ ಕಲೆ ಮತ್ತು ವಾಸ್ತುಶಿಲ್ಪಗಳನ್ನು ಕಾಪಾಡುವುದು ಅದರ ಇತಿಹಾಸವನ್ನು ಕನ್ನಡದಲ್ಲಿ ಬರೆಯುವುದು. ಹಳ್ಳಿ, ಕುಗ್ರಾಮ, ನಗರ ಪ್ರದೇಶಗಳಲ್ಲಿ, ಬೀದಿನಾಟಕ, ಕನ್ನಡ ರಾಜ್ಯೋತ್ಸವ, ಕನ್ನಡ ಹಾಡು, ಮುಂತಾದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದ ು. ಕನ್ನಡ ಸಾಹಿತ್ಯ ಪರಿಷದ್, ಭಾರತೀಯ ಸಾಹಿತ್ಯ ಪರಿಷದ್‌ಗಳಲ್ಲಿ ನಡೆಯುವ ಕಾರ್ಯಕ್ರಮಗಳಲ್ಲಿ ಭಾಗವಹಿಸಿ, ಕನ್ನಡವನ್ನ ಎತ್ತಿಹಿಡಿಯುವುದು, ಇತರ ರಾಜ್ಯದ ಜನರಲ್ಲೂ ಕನ್ನಡ ಕಲಿಸುತ್ತಾ ಅದರ ಬಗ್ಗೆ

ಅಭಿಮಾನ ಮೂಡಿಸಿ ಮಾತಾಡಲು ಪ್ರೋತ್ಸಾಹಿಸುವುದು.

ನಮ್ಮ ಕರ್ನಾಟಕದ ಗಡಿ ಪ್ರದೇಶಗಳಲ್ಲಿ ಕನ್ನಡ ಭಾಷೆಯ ಬಗ್ಗೆ ತಿಳಿಸುವುದು ಮತ್ತು ಕನ್ನಡ ಮಾತಾಡುವಂತೆ ಎಚ್ಚರಿಸುವುದು, ನಾಮ ಫಲಕಗಳು ಕನ್ನಡದಲ್ಲಿರುವಂತೆ ಸೂಚಿಸುವುದು.

ಸಮೂಹ ಮಾಧ್ಯಮಗಳಲ್ಲಿ ಹೆಚ್ಚು ಹೊಸ-ಹೊಸ ಮತ್ತು ಸ್ಪಷ್ಟ ಕನ್ನಡ ಪದಗಳನ್ನು ಬಳಸುವುದು, ಪ್ರೇಕ್ಷಕರು, ಜನರಿಗೆ ಕನ್ನಡದ ಬಗ್ಗೆ ಒಲವು ಮೂಡಿಸಲು ಒಂದಷ್ಟು ಚಡುವಟಿಕೆಗಳನ್ನು ನೀಡುವುದು ಅದಕ್ಕೆ

ಬಹುಮಾನ ರೂಪವಾಗಿ ಕನ್ನಡ ಪುಸ್ತಕಗಳನ್ನು ಓದುವಂತೆ ಪ್ರೋತ್ಸಾಹಿಸುವುದು. ಭಾಷಾ ಒಲವಿನ ಜೊತೆಗೆ ಭಾಷೆಯ ಪ್ರಯೋಗದ ಬಗ್ಗೆ ತಿಳಿಸಿಕೊಡುವುದು. ಇಂದಿನ ಯುವಜನತೆ ಕನ್ನಡ ಮಾಧ್ಯಮದಲ್ಲಿ

ಓದಿದ್ದರೆ ಅಂತಹ ನಮ್ಮ ಜನರಿಗೆ ಉದ್ಯೋಗ ಅವಕಾಶ ಕಲ್ಪಿಸುವುದು. ತಂತ್ರಜ್ಞಾನ ಮತ್ತು ವಿಜ್ಞಾನ ಕ್ಷೇತ್ರಗಳಲ್ಲಿ ಕನ್ನಡ ಹೊಸ ಪದ ಪ್ರಯೋಗಿಸುವುದು. ಹೆಚ್ಚು-ಹೆಚ್ಚು ಕನ್ನಡ ನಿಯತಕಾಲಿಕೆಗಳು,





ವೃತ್ತಪತ್ರಿಕೆಗಳನ್ನು ತರಿಸಿ ಓದುವಂತೆ ಪ್ರಚೋದಿಸುವುದು ಅಥವಾ ಪ್ರೋತ್ಸಾಹಿಸುವುದು. ವಿದೇಶದಲ್ಲಿ ನೆರೆದಿರುವ-ವಾಸವಾಗಿರುವ ಕನ್ನಡ ಜನರು ಕನ್ನಡ ಕಾರ್ಯಕ್ರಮಗಳನ್ನು ಹಮ್ಮಿಕೊಂಡಾಗ ಅವರಲ್ಲಿ ಮತ್ತಷ್ಟು ಉತ್ಸಾಹ, ಪ್ರೋತ್ಸಾಹ ಮೂಡುವಂತೆ ನುಡಿಗಳನ್ನು ಆಡುವುದು, ಕನ್ನಡ ಸಾಹಿತ್ಯ, ವೃತ್ತಪತ್ರಿಕೆಗಳನ್ನು ಓದುವಂತೆ ತಿಳಿಸುವುದು. ಭಾಷಾಭಿಮಾನ ಮತ್ತಷ್ಟು ಹೆಚ್ಚಿಸುವುದು.

ವೃತ್ತಿಜೀವನದಲ್ಲಿ ಕನ್ನಡವನ್ನೇ ಉಸಿರಾಗಿಕೊಂಡಂತಹ, ಕನ್ನಡ ಶಿಕ್ಷಕರು, ಸಂಘ ಸಂಸ್ಥೆಗಳು, ಕನ್ನಡಪರ ಹೋರಾಟಗಾರರು, ಪತ್ರಕರ್ತರು, ಯುವ ಸಾಹಿತಿಗಳು, ಲೇಖಕರು, ಮದುವೆ, ದೊಡ್ಡ-ದೊಡ್ಡ ಸಮಾರಂಭಗಳಲ್ಲಿ ಕನ್ನಡದಲ್ಲಿ ಹಾಡುವ, ಸೃಜನಾತ್ಮಕ ಕಾರ್ಯಕ್ರಮ ನಿರ್ವಹಣಾಕಾರರನ್ನು ಪ್ರೋತ್ಸಾಹಿಸುವುದು, ಸನ್ಮಾನಿಸುವುದು, ಅವರಲ್ಲಿ ಮತ್ತಷ್ಟು ಹುರುಪು ತರಿಸುವುದು.

ಸಮಾರಂಭಗಳಲ್ಲಿ ತಾಂಬೂಲದ ಜೊತೆಗೆ ಕನ್ನಡ ಪುಸ್ತಕವನ್ನು ನೀಡಿ ಓದಿ ಪ್ರೋತ್ಸಾಹಿಸುವಂತೆ ತಿಳಿಸುವುದು. ಕನ್ನಡ ಪ್ರಾದೇಶಿಕ ದಿನಪತ್ರಿಕೆಗಳನ್ನು ಉತ್ತೇಜಿಸುವುದು. ಕನ್ನಡ ಮಾತಾಡಲು ಹೇಳಿಕೊಡುವ ಶಾಲೆಗಳು,

ಹೆಚ್ಚು ತೆರೆದು ಪ್ರೋತ್ಸಾಹಿಸುವುದು, ಕನ್ನಡ ಭಾಷಾಭಿಮಾನ ಅವರಲ್ಲಿ ಮೂಡಿಸುವುದು. ಅಲ್ಲದೆ ಇಂದಿನ ಯುವ ಮನಸ್ಸುಗಳು ಪರಭಾಷೆಯ ವ್ಯಾಮೋಹದಲ್ಲಿ ಮೂಲ ನೆಲೆಯನ್ನು ತೊದಲು ನುಡಿಯನ್ನು

ಮರೆತು "ಹಿತ್ತಲ ಗಿಡ ಮದ್ದಲ್ಲ" ಎಂಬಂತೆ ವರ್ತಿಸುತ್ತಿರುವುದು ನಮ್ಮೆಲ್ಲರ ಗ್ರಹಿಕೆಗೆ ಬಂದರೂ ತಿಳಿಹೇಳುವುದರಲ್ಲಿ ಸೋಲುತ್ತಿದ್ದೇವಾ? ಅನಿಸುತ್ತಿದೆ. ಈ ಕಾರಣಕ್ಕಾಗಿಯೇ ಮತ್ತೆ-ಮತ್ತೆ ಕನ್ನಡ ಕಟ್ಟುವ

ಕೆಲಸವಾಗಬೇಕಿದೆ. 80-90ರ ದಶಕದ ಜನವಾದ ನಮ್ಮಂತಹವರು ಪುಸ್ತಕ ಪ್ರಿಯವಾಗಿದ್ದೆವು, ಬಾಲಮಂಗಳ, ಪಂಚತಂತ್ರ, ಉಷಾ, ತುಷಾರ, ಚಂದಮಾಮ, ಕಸ್ತೂರಿ, ಮುಂತಾದ ಪುಸ್ತಕಗಳ ಜೊತೆಗೆ ಶಾಲೆಗಳಲ್ಲಿ ಪ್ರತಿದಿನ " ಅಂದಿನ ದಿನ ಪತ್ರಿಕೆಗಳನ್ನು" ದಿನಕೊಬ್ಬ ವಿದ್ಯಾರ್ಥಿಯಂತೆ ಓದಬೇಕಿತ್ತು, ಓದುವ ಹವ್ಯಾಸ ಅಲ್ಲಿಂದಲೇ ಮೂಡುತ್ತಿತ್ತು ಹೊಸ-ಹೊಸ ಪದ, ವಿಷಯಗಳು ಮನದಟ್ಟಾಗುತ್ತಿತ್ತು.

ಈಗ ನಾವು ಮೊಬೈಲ್ ನಂತಹ ಡಿಜಿಟಲ್ ಮಾಧ್ಯಮಗಳ ಕೈಗೊಂಬೆಯಾಗಿದ್ದೇವೆ. ಇದರಿಂದ ನಾವೂ ಹೊರಬಂದು, ನಮ್ಮ ಮಕ್ಕಳನ್ನು ಸಾಧ್ಯವಾದಷ್ಟು ಮಕ್ಕಳ ಕನ್ನಡ ಪುಸ್ತಕಗಳನ್ನು ಓದುವ ಚಟದಂತೆ ಬೆಳೆಸುವುದು. ದಿನಪತ್ರಿಕ ಓದುವ ಹವ್ಯಾಸ ಅವರಲ್ಲಿ ಬರಿಸುವುದು, ಹೊಸ ಪದ ಅಥವಾ ಸರಳ ಮಾತೃಭಾಷೆಯ ಪದ ಪ್ರಯೋಗ ಮಾಡುವಂತೆ ತಿಳಿಹೇಳುವುದು. ಅಕ್ಷರಗಳನ್ನು ಬರೆಸುವುದು ಭಾಷಾಭಿಮಾನ

ಮೂಡಿಸುವುದರಿಂದ ಹೊಸ ದಿಗಂತವನ್ನೆ ಸೃಷ್ಟಿಸಬಹುದು.

ಆಧುನಿಕ ಜಗತ್ತಿನ ಸದ್ಯದ ಸವಾಲುಗಳಿಂದ ಕನ್ನಡದ ಮೇಲೆ ವಿಪರೀತ ಪರಿಣಾಮ ಉಂಟಾಗುತ್ತಿರುವುದು. ಅದಲ್ಲದೆ "ನಮ್ಮ ದಿನನಿತ್ಯ ನಡೆ ನುಡಿಗಳಲ್ಲಿ ಬಳಸುವ ನಮ್ಮ ಭಾಷಿಕ ನೆಲೆಗಳು ಸ್ಫೋಟಗೊಂಡಿವೆ. ಇದರಿಂದ ಆಗುವ ಅನಾಹುತಗಳನ್ನು ಕಲ್ಪಿಸಿಕೊಳ್ಳಲು ಸಾಧ್ಯವಿಲ್ಲ" ಎಂದು ಚಂದ್ರಶೇಖರ ಕಂಬಾರರು ಅಂದೇ ಅಭಿಪ್ರಾಯಪಟ್ಟಿದ್ದರು. ಆದರೆ ಮಕ್ಕಳಲ್ಲಿ ಭಾಷಾಭಿಮಾನ, ಓದುವ ಹವ್ಯಾಸ ಮಾಡಿಸುವುದು

ಹಿರಿಯರಾದ ನಮ್ಮ ಮಹತ್ತಾದ ಕರ್ತವ್ಯವಾಗಿದೆ. ಅನೇಕ ಶ್ರೇಷ್ಠ ವಿಜ್ಞಾನಿಗಳು, ರಾಜಕಾರಣಿಗಳು, ಸಾಧಕರು, ವೈದ್ಯರು

ಅರ್ಥಶಾಸ್ತ್ರಜ್ಞರು ತಮ್ಮ ಭಾಷೆಯ ಮುಖಾಂತರವೇ ತಮ್ಮ ವಿಚಾರಗಳನ್ನು ವ್ಯಕ್ತಪಡಿಸಿದ ಕಾರಣ ಇಂದು ಪ್ರಪಂಚದ ದೊಡ್ಡ ಭಾಷೆಗಳಲ್ಲಿ ಒಂದಾಗಿ ಅಂತರಾಷ್ಟ್ರೀಯ ಮಟ್ಟದ ಭಾಷೆಯಾಯಿತು. ಎಂಬಂತಹ

ವಿಚಾರವನ್ನು ಮರಿಯಪ್ಪ ಭಟ್ಟು ತಮ್ಮ "ಕನ್ನಡ ಸಂಸ್ಕೃತಿ" ಎಂಬ ಕೃತಿಯಲ್ಲಿ ತಿಳಿಸಿದ್ದಾರೆ. ಆದರೆ ಇಂದಿನ ಜಾಗತೀಕರಣ ಲೋಕದಲ್ಲೂ ಅನೇಕ ಪುಸ್ತಕಾಲಯಗಳು, ಪುಸ್ತಕ ಪ್ರಕಾಶಕರು ವರ್ಷಕ್ಕೊಮ್ಮೆಯಂತೆ

ಪುಸ್ತಕ ಮೇಳಗಳನ್ನು ಆಚರಿಸಿ ಜನರಲ್ಲಿ ಜಾಗೃತಿ ಭಾಷಾ ಪ್ರೀತಿ, ಪುಸ್ತಕ ಪ್ರೀತಿ ಹೆಚ್ಚಿಸುತ್ತಿದ್ದಾರೆ.( ವೀರಕಪುತ್ರರವರು, ಸಪ್ನ ಪುಸ್ತಕದವರು, ಹರಿವು, ಬುಕ್ ಬ್ರಹ್ಮ) ಮುಂತಾದವರು ಕನ್ನಡಕ್ಕಾಗಿ

ಶ್ರಮಿಸುತ್ತಿದ್ದಾರೆ, ಪುಸ್ತಕ ಪ್ರೇಮಿಗಳಿಗೆ ರಸದೌತಣ ನೀಡುತ್ತಿದ್ದಾರೆ, ಅಲ್ಲದೆ ಲೇಖಕರು, ಸಾಹಿತಿಗಳಿಗೂ ಇದರಿಂದ ಹೆಚ್ಚು ಉತ್ಸಾಹದಿಂದ ಬರೆಯಲು ಪ್ರೋತ್ಸಾಹ ನೀಡುತ್ತಿದ್ದಾರೆ, ಅಲ್ಲದೆ ನಿಯತ್ತಕಾಲಿಕೆಗಳಲ್ಲೂ

ದೀಪಾವಳಿ ವಿಶೇಷಾಂಕ, ರಾಜ್ಯೋತ್ಸವ ಸಂಭ್ರಮ ಮುಂತಾದ ವಿಶೇಷವಾದ ಕೊಡುಗೆಗಳನ್ನು ನೀಡಿ ಜನರಲ್ಲಿ ಜವಾಬ್ದಾರಿಯ ಜೊತೆಗೆ ಕನ್ನಡ ಭಾಷಾಭಿಮಾನವನ್ನು ಮೂಡುವಂತೆ ಮಾಡುವಲ್ಲಿ ಯಶಸ್ವಿನ ಹಾದಿಯಲ್ಲಿದ್ದಾರೆ.

ಸಿರಿಗನ್ನಡಂ ಗೆಲ್ಗೆ
ಸವಿಗನ್ನಡಂ ಬಾಳ್ಗೆ



ವೀಣಾ ರವಿಕುಮಾರ್

# ಕನ್ನಡವೇ ಸತ್ಯ ಕನ್ನಡವೇ ನಿತ್ಯ

ನಮ್ಮ ದೇಶ ಭಾರತ. ನಮ್ಮ ತಾಯಿ ಭಾರತಿ. ಆ ಭಾರತಿಯ ಮುದ್ದು ಕುವರಿ ನಮ್ಮ ಕನ್ನಡಾಂಬೆಯ. ಅವಳ ಮಕ್ಕಳು ನಾವು ಕನ್ನಡಿಗರು. ಕನ್ನಡ ನಮ್ಮ ಭಾಷೆ ನಮ್ಮ ತಾಯಿ ನುಡಿ. ಆದರೆ ಇದು ಕೇವಲ ಒಂದು ಭಾಷೆಯಲ್ಲ ಅದೊಂದು ಸಂಸ್ಕೃತಿ ಜೀವನಾಡಿ ನಮ್ಮ ಉಸಿರು. ಕನ್ನಡ ಕಸ್ತೂರಿ ಎನ್ನುತ್ತೇವೆ ಅಂದರೆ ಕನ್ನಡದ ಕಂಪು ಮನಕ್ಕೆ ತಂಪು ಇಂಪು ನಾಡಿನ ಸೊಂಪು. ನಮ್ಮ ಕನ್ನಡನಾಡನ್ನು ಗಂಧದ ಗುಡಿ ಎನ್ನುತ್ತೇವೆ ಹೌದು ಶ್ರೀ ಗಂಧದ ತವರೂರು ನಮ್ಮ ಕನ್ನಡನಾಡು. ಪಶ್ಚಿಮ ಘಟ್ಟಗಳಿಂದ ಆವೃತವಾಗಿ ಸದಾ ಹಸಿರಾಗಿ ರಾರಾಜಿಸುತ್ತಿರುವ ನಮ್ಮ ಈ ನಾಡು ಹಲವು ಮಹಾನ್ ವೃಕ್ಷಗಳ ತಾಣವಾಗಿದೆ.





ಕಾವೇರಿ ಹರಿಯುತ್ತಿರುವುದು ಕನ್ನಡ ನಾಡಿನಲ್ಲಿ ಜೋಗದ ಜಲಪಾತವಿರುವುದು ಕನ್ನಡನಾಡಿನಲ್ಲಿ ಮೈಸೂರ ಚಾಮುಂಡಿ ಹರಸುತ್ತಿರುವುದು ಕನ್ನಡಿಗರನ್ನು ಕನ್ನಡನಾಡಿನಲ್ಲಿ. ಚೆನ್ನದ ನಾಡು ಸಿರಿಗಂಧದ ಬೀಡು ನಮ್ಮ ಈ ನಾಡು. ಇಂಥ ನಾಡಿನಲ್ಲಿ ಹುಟ್ಟಿದ ನಾವೇ ಭಾಗ್ಯವಂತರು. ಪಂಪ ರನ್ನ ಮುದ್ದಣರಂಥ ಕವಿಪುಂಗವರು ಬೇಂದ್ರೆ ಕುವೆಂಪು ಅಡಿಗರು ಶ್ರೀಕಂಠಯ್ಯ ಡಿವಿಜಿ ಯವರಂಥ ಕವಿಗಳು ಜನಿಸಿದ ನಾಡು ನಮ್ಮದು. ನಮ್ಮ ಭಾಷೆ ಅತ್ಯಂತ ಶ್ರೀಮಂತವಾಗಿದೆ. ಈ ನಾಡಿನ ಉದ್ದಗಲಕ್ಕೂ ಕನ್ನಡಾಂಬೆಯ ಉಸಿರಿದೆ ಮಣ್ಣಿನ ಕಣಕಣದಲ್ಲೂ ಕನ್ನಡಿಗನ ಮನದ ಮೂಲೆಮೂಲೆಗಳಲೂ ನುಡಿ ನಾಲಿಗೆಯ ಪಲುಕಿನ ಪ್ರತಿ ಸ್ಪಂದನೆಯಲ್ಲೂ ಕನ್ನಡಾಂಬೆಯ ಹೆಸರಿದೆ. ಕೆಚ್ಚೆದೆಯ ಕನ್ನಡಿಗರ ನಾಡು ನಮ್ಮದು. ಹೇಳುತ್ತಾ ಹೋದರೆ ಕಾಲದ ಪರಿವೆ ಇಲ್ಲದೆ ಪದಗಳ ಲೆಕ್ಕವಿಲ್ಲದೆ ಹೇಳುತ್ತಲೇ ಹೋಗಬಹುದು. ನವೆಂಬರ್ 1 1956 ರಂದು ಕರ್ನಾಟಕ ಮೂಡಿಬಂದರೂ ಕನ್ನಡ ಆಡಳಿತ ಭಾಷೆಯಾಗಿ ಒಡಮೂಡಲು ಹಲವು ವರುಷಗಳು ಕಾಯಬೇಕಾಯಿತು. ಕಡೆಗೆ 1973 ರಲ್ಲಿ ಕನ್ನಡ ಅಧಿಕೃತವಾಯಿತು ಕನ್ನಡ ಭಾಷೆ ಆಡಳಿತ ಭಾಷೆಯಾಯಿತು. ಕರ್ನಾಟಕಕ್ಕೆ ತನ್ನದೇ ಆದ ಬಾವುಟವಿದೆ.

ಅರಿಶಿನ ಕುಂಕುಮದ ಪ್ರತೀಕವಾದ ಸೌಭಾಗ್ಯ ಸ್ನೇಹ ಸೌಶೀಲ್ಯತೆಯ ಅನ್ವರ್ಥವಾದ ಹಳದಿ ಕೆಂಪು ಬಾವುಟ ಎಂ . ರಾಮಮೂರ್ತಿಯವರ ನೇತೃತ್ವದಲ್ಲಿ ತಯಾರಿಸಿ ಕರ್ನಾಟಕ ಕನ್ನಡಿಗರ ಭಾವನೆಗೆ ಬಣ್ಣ ಹಚ್ಚಿದ್ದೇವೆ. ಆ ಬಾವುಟವನ್ನು ಭಕ್ತಿಯಿಂದ ಸ್ಮರಿಸೋಣ. ತಾಯಿ ಭುವನೇಶ್ವರಿಯ ಪದತಲದಲ್ಲಿ ಶಿರಬಾಗಿ ಆರಾಧಿಸೋಣ. ಎಲ್ಲೇ ಇರು ಎಂತೇ ಇರು ನೀನೆಂದಿಗೂ ಕನ್ನಡವಾಗಿರು ಎಂಬ ಕವಿ ನುಡಿಯಂತೆ ಕನ್ನಡವನ್ನು ಸತ್ಯವಾಗಿಸೋಣ ನಿತ್ಯವಾಗಿಸೋಣ ನಿಜವಾದ ಅರ್ಥದಲ್ಲಿ ಉತ್ಸವವಾಗಿಸೋಣ.



ರಾಜೇಶ್ವರಿ



# ಹೊಯ್ಸಳರ ಪರಾಕ್ರಮಿ ದೊರೆ ಎರಡನೆಯ ವೀರ ಬಲ್ಲಾಳ



**ಎಂಥಾ ಸೌಂದರ್ಯ ನೋಡು ನಮ್ಮ**
**ಕರುನಾಡ ಬೀಡು**
**ಗಂಧದ ಗೂಡಿದು ಕಲೆಗಳ ತೌರಿದು**
**ಕನ್ನಡ ನಾಡಿದು ಚಿನ್ನದಾ ಮಣ್ಣಿದು**
**ಹರಿಯುವ ನೀರು, ಹಸುರಿನ ಪೈರು,**
**ಎಲ್ಲೆಡೆ ಆ ತಾಯ ಸಿರಿಯೇ**
**ಹೂಗಳ ಕೆಂಪು, ಮರಗಳ ಸಂಪು,**
**ಎಲ್ಲೂ ಆ ತಾಯ ನಗೆಯೇ**
**ಹರಿಯುವ ನೀರು, ಹಸುರಿನ ಪೈರು,**
**ಎಲ್ಲೆಡೆ ಆ ತಾಯ ಸಿರಿಯೇ**
**ಹೂಗಳ ಕೆಂಪು, ಮರಗಳ ಸಂಪು,**
**ಎಲ್ಲೂ ಆ ತಾಯ ನಗೆಯೇ**
**ಭರತ ಮಾತೆಯಾ ಈ ತನುಜಾತೆಯ**
**ಚೆಲುವನು ನೋಡುತ ನಲಿಯುತ ಮೆರೆಯುವೆನಾ**

ಹೊಯ್ಸಳ ಸಾಮ್ರಾಜ್ಯದ ಅತ್ಯಂತ ಪ್ರಬಲ ಮತ್ತು ಮಹಾನ್ ದೊರೆ ಎನಿಸಿದ ಎರಡನೆಯ ವೀರ ಬಲ್ಲಾಳನ (ಆಡಳಿತ: ಕ್ರಿ.ಶ. 1173?1220) ಸಾಧನೆಗಳು ಮತ್ತು ಕನ್ನಡ ನಾಡಿಗೆ ಆತ ನೀಡಿದ ಕೊಡುಗೆಯ ವಿವರವಾದ ಮತ್ತು ಆಕರ್ಷಕವಾದ ಬರಹ ಇಲ್ಲಿದೆ. ಇವನ ಆಳ್ವಿಕೆಯು ಹೊಯ್ಸಳರ ಇತಿಹಾಸದಲ್ಲಿ ಒಂದು ಪರಮ ವೈಭವದ ಪರ್ವಕಾಲ!

ಎರಡನೆಯ ವೀರ ಬಲ್ಲಾಳ: ಹೊಯ್ಸಳ ಸಾಮ್ರಾಜ್ಯದ ಏಕೈಕ ಚಕ್ರವರ್ತಿ ಎರಡನೆಯ ವೀರ ಬಲ್ಲಾಳನ 47 ವರ್ಷಗಳ ದೀರ್ಘ ಆಳ್ವಿಕೆಯು ರಾಜಕೀಯ ಕುಶಾಗ್ರಮತಿ, ಅಪ್ರತಿಮ ಸೇನಾಪತ್ಯ ಮತ್ತು ಕಲೆಯ ಅನನ್ಯ ಪೋಷಣೆಯ ಸಂಗಮವಾಗಿತ್ತು. ದಕ್ಷಿಣ ಭಾರತದ ರಾಜಕೀಯ ಶಕ್ತಿಗಳ ಸಮತೋಲನವನ್ನು ಇವನೊಬ್ಬನೇ ಬದಲಾಯಿಸಿದನು.

**ರಾಜಕೀಯ ಪರಾಕ್ರಮಿಯಾದ ಇವನು ಕರ್ನಾಟಕದ ರಕ್ಷಕ** (The Guardian of Karnataka)**ಎಂಬ ಬಿರುದಿನಿಂದ ಪ್ರಖ್ಯಾತನಾದನು**.

ಇವನು ಆಡಳಿತಕ್ಕೆ ಬಂದಾಗ, ಡೆಕನ್ ಪ್ರಸ್ಥಭೂಮಿಯಲ್ಲಿ ಅರಾಜಕತೆ ತಾಂಡವವಾಡುತ್ತಿತ್ತು. ಇವನು ಯುದ್ಧಗಳ ಮೂಲಕ ಚಾಲುಕ್ಯರು ಮತ್ತು ಯಾದವರಂತಹ ಪ್ರಬಲ ಶಕ್ತಿಗಳನ್ನು ಮಣಿಸಿ, ಹೊಯ್ಸಳರನ್ನು ಸ್ವತಂತ್ರ ಮತ್ತು ಸಾರ್ವಭೌಮ ಶಕ್ತಿಯನ್ನಾಗಿ ಮಾಡಿದನು.

- ಚಾಲುಕ್ಯರ ಅಂತಿಮ ಅಂತ್ಯ:
- ಇವನು ಸಿಂಹಾಸನ ಏರಿದಾಗ ಕಲ್ಯಾಣದ ಚಾಲುಕ್ಯರು ಪತನದ ಅಂಚಿನಲ್ಲಿದ್ದರು. ಆರನೆಯ ವಿಕ್ರಮಾದಿತ್ಯನ ನಂತರ ದುರ್ಬಲರಾದ ಚಾಲುಕ್ಯರನ್ನು ಇವನು ಸಂಪೂರ್ಣವಾಗಿ ನಿರ್ಮೂಲನಗೊಳಿಸಲು ಯತ್ನಿಸಿದ.
- ಬಲ್ಲಾಳನು ಚಾಲುಕ್ಯರ ಪ್ರದೇಶದ ಮೇಲೆ ನಿರಂತರ ದಾಳಿ ನಡೆಸಿ, ಅವರ ಅಂತಿಮ ಶಕ್ತಿಯನ್ನು ಕುಗ್ಗಿಸಿದನು. ಇವನಿಂದಲೇ ಚಾಲುಕ್ಯರ ಆಳ್ವಿಕೆಯು ಕೊನೆಗೊಂಡಿತು ಎಂದು ಹೇಳಬಹುದು.
- ಯಾದವರ (ಸೇವುಣರ) ಮೇಲಿನ ನಿರ್ಣಾಯಕ ವಿಜಯ:
- ದಖ್ಖನ್‌ನ ಉತ್ತರದ ಪ್ರಬಲ ಶಕ್ತಿಯಾಗಿ ಬೆಳೆಯುತ್ತಿದ್ದ ದೇವಗಿರಿಯ ಸೇವುಣ ಯಾದವರು ಹೊಯ್ಸಳರಿಗೆ ದೊಡ್ಡ ಬೆದರಿಕೆಯಾಗಿದ್ದರು.
- ಸೋಗೆ ವಿಜಯ (1190): ಬಲ್ಲಾಳನು ಯಾದವರೊಂದಿಗೆ ನಡೆದ ಪ್ರಮುಖ ಯುದ್ಧಗಳಲ್ಲಿ ಗೆದ್ದು, ಬನವಾಸಿ, ಲಕ್ಷ್ಮೇಶ್ವರ ಮತ್ತು ಕಲ್ಯಾಣದಂತಹ ಪ್ರಮುಖ ಪ್ರದೇಶಗಳನ್ನು ವಶಪಡಿಸಿಕೊಂಡನು. ಈ ವಿಜಯಗಳಿಂದಾಗಿ ಹೊಯ್ಸಳರ ಗಡಿಯು ಕೃಷ್ಣಾ ನದಿಯಿಂದ ಉತ್ತರದತ್ತ ವಿಸ್ತರಿಸಿತು.
- ಈ ಯಾದವರ ಮೇಲಿನ ವಿಜಯವು ಹೊಯ್ಸಳರ ಶ್ರೇಷ್ಠತೆಯನ್ನು ಸ್ಥಾಪಿಸಿತು ಮತ್ತು ಬಲ್ಲಾಳನು 'ಚಕ್ರವರ್ತಿ' ಎಂಬ ಬಿರುದನ್ನು ಅಧಿಕೃತವಾಗಿ ಪಡೆದನು.



- ಚೋಳ ಸಾಮ್ರಾಜ್ಯದ ರಕ್ಷಕ:
- ಬಲ್ಲಾಳನಿಗೆ ದಕ್ಷಿಣ ಭಾರತದಲ್ಲಿ ಅತ್ಯಂತ ಪ್ರತಿಷ್ಠೆ ತಂದುಕೊಟ್ಟದ್ದು ಚೋಳರ ಪರವಾಗಿ ಆತ ತೋರಿದ ಶೌರ್ಯ. ಪಾಂಡ್ಯರು ಚೋಳರ ಮೇಲೆ ದಾಳಿ ಮಾಡಿ ಅವರನ್ನು ದುರ್ಬಲಗೊಳಿಸಿದಾಗ, ಬಲ್ಲಾಳನು ಚೋಳರ ಪರವಾಗಿ ಮಧ್ಯ ಪ್ರವೇಶಿಸಿದನು.
- ಚೋಳ ದೊರೆ ಮೂರನೆಯ ಕುಲೋತ್ತುಂಗನಿಗೆ ನೆರವಾಗಿ, ಪಾಂಡ್ಯರೊಂದಿಗಿನ ಹೋರಾಟದಲ್ಲಿ ವಿಜಯ ಸಾಧಿಸಿದನು. ಈ ಸಹಾಯದ ಪ್ರತಿಫಲವಾಗಿ, ಚೋಳರು ಬಲ್ಲಾಳನಿಗೆ 'ಕಾವೇರಿ ಕನ್ಯಾ ರಕ್ಷಕ' ಮತ್ತು 'ಚೋಳ ಸಾಮ್ರಾಜ್ಯದ ಸ್ಥಾಪನಾಚಾರ್ಯ' ಎಂಬಂತಹ ಮಹತ್ವದ ಬಿರುದುಗಳನ್ನು ನೀಡಿ ಗೌರವಿಸಿದರು. ಈ ಮೂಲಕ ಹೊಯ್ಸಳರ ಪ್ರಭಾವವು ದಕ್ಷಿಣದ ಕಾವೇರಿ ಕಣಿವೆಯವರೆಗೂ ಹರಡಿತು.

**2. ಕನ್ನಡ ನಾಡಿಗೆ ಕೊಡುಗೆ: ಸ್ಥಿರತೆ ಮತ್ತು ಸಮೃದ್ಧಿಯ ಆಡಳಿತಗಾರನೆನಿಸಿದ**

ವೀರ ಬಲ್ಲಾಳನ ಆಳ್ವಿಕೆಯು ಕೇವಲ ಯುದ್ಧಗಳಿಂದ ಕೂಡಿರದೆ, ಕನ್ನಡ ನಾಡಿಗೆ ದೀರ್ಘಕಾಲದ ಶಾಂತಿ ಮತ್ತು ಸಮೃದ್ಧಿಯನ್ನು ತಂದಿತು.

- ರಾಜಕೀಯ ಏಕೀಕರಣ: ಬಲ್ಲಾಳನು ಚಾಲುಕ್ಯರ ಪತನದ ನಂತರ ಚದುರಿ ಹೋಗಿದ್ದ ಸಾಮಂತ ರಾಜರನ್ನು ಮತ್ತು ಪ್ರಾಂತ್ಯಗಳನ್ನು ಒಗ್ಗೂಡಿಸಿ, ಕರ್ನಾಟಕದ ಬಹುತೇಕ ಭಾಗವನ್ನು ಒಂದೇ ಆಡಳಿತದ ಅಡಿಯಲ್ಲಿ ತಂದನು. ಇದು ಕನ್ನಡ ನಾಡಿಗೆ ರಾಜಕೀಯ ಸ್ಥಿರತೆ ನೀಡಿತು.
- ರಾಜಧಾನಿ ಹಳೇಬೀಡಿನ ವೈಭವ: ಇವನು ತನ್ನ ರಾಜಧಾನಿಯನ್ನು ಹಳೇಬೀಡಿಗೆ (ದೋರಸಮುದ್ರ) ಸ್ಥಳಾಂತರಿಸಿ, ಅದನ್ನು ಭವ್ಯವಾಗಿ ನಿರ್ಮಿಸಿದನು. ಕಲೆ ಮತ್ತು ವ್ಯಾಪಾರದ ಕೇಂದ್ರವಾಗಿ ಹಳೇಬೀಡು ಪ್ರಖ್ಯಾತಗೊಂಡಿತು.
- ವ್ಯಾಪಾರ ಮತ್ತು ಕೃಷಿಯ ಉನ್ನತಿ: ಇವನ ಆಳ್ವಿಕೆಯ ಸ್ಥಿರತೆಯು ವ್ಯಾಪಾರ ಮತ್ತು ಕೃಷಿ ಚಟುವಟಿಕೆಗಳು ಸುಗಮವಾಗಿ ನಡೆಯಲು ಸಹಾಯಕವಾಯಿತು. ಬಸದಿಗಳು, ಕೆರೆಕಟ್ಟೆಗಳು ಮತ್ತು ದೇವಸ್ಥಾನಗಳ ನಿರ್ಮಾಣಕ್ಕೆ ಪ್ರೋತ್ಸಾಹ ನೀಡಿದನು.





**ಸಾಹಿತ್ಯ ಮತ್ತು ಕಲೆಯ ಪೋಷಣೆ (ಕಲಾಭಿಮಾನ)**
**ಬಲ್ಲಾಳನು ತಾನೇ ಒಬ್ಬ**

ವಿದ್ವಾಂಸನಾಗಿರಲಿಲ್ಲವಾದರೂ, ಆತ ತನ್ನ ಆಸ್ಥಾನದಲ್ಲಿ ಕವಿಗಳು ಮತ್ತು ವಿದ್ವಾಂಸರಿಗೆ ಮಹತ್ತರ ಆಶ್ರಯ ನೀಡಿದನು.

- ಕನ್ನಡ ಸಾಹಿತ್ಯಕ್ಕೆ ಆಶ್ರಯ: ಬಲ್ಲಾಳನ ಆಸ್ಥಾನದಲ್ಲಿ ಪ್ರಖ್ಯಾತ ಕನ್ನಡ ಕವಿಗಳಾದ ರುದ್ರಭಟ್ಟ ಮತ್ತು ಜನ್ನರಿಗೆ ಉನ್ನತ ಸ್ಥಾನವಿತ್ತು.
- ಜನ್ನ: ಇವನ ಆಸ್ಥಾನದ ಪ್ರಮುಖ ಕವಿ ಹಾಗೂ ಮಂತ್ರಿ (ದಂಡನಾಯಕ) ಆಗಿದ್ದ ಜನ್ನನು 'ಯಶೋಧರ ಚರಿತೆ' ಮತ್ತು 'ಅನಂತನಾಥ ಪುರಾಣ'ದಂತಹ ಪ್ರಮುಖ ಕೃತಿಗಳನ್ನು ರಚಿಸಿದನು. ಜನ್ನನು ಕೇವಲ ಕವಿಯಾಗಿರದೆ, ಆಡಳಿತಾತ್ಮಕ ಮತ್ತು ಮಿಲಿಟರಿ ಜವಾಬ್ದಾರಿಗಳನ್ನು ನಿರ್ವಹಿಸಿದುದು, ಬಲ್ಲಾಳನ ಆಸ್ಥಾನದಲ್ಲಿ ಜ್ಞಾನಕ್ಕೆ ಇದ್ದ ಗೌರವವನ್ನು ತೋರಿಸುತ್ತದೆ.
- ರುದ್ರಭಟ್ಟ: ಇವನು ಶ್ರೇಷ್ಠ ಕಾವ್ಯಗಳಲ್ಲಿ ಒಂದಾದ 'ಜಗನ್ನಾಥ ವಿಜಯ'ವನ್ನು ರಚಿಸಿದನು.
- ಹೊಯ್ಸಳ ವಾಸ್ತುಶಿಲ್ಪದ ಮುಂದುವರಿಕೆ: ಇವನ ಕಾಲದಲ್ಲಿ ಹಳೇಬೀಡಿನ ಹೊಯ್ಸಳೇಶ್ವರ ದೇವಾಲಯದ ನಿರ್ಮಾಣವು ಮುಂದುವರೆಯಿತು ಮತ್ತು ಇವನು ಕೇದಾರೇಶ್ವರ ದೇವಾಲಯದಂತಹ ಹಲವು ಸುಂದರ ದೇವಾಲಯಗಳ ನಿರ್ಮಾಣಕ್ಕೆ ಪ್ರೋತ್ಸಾಹ ನೀಡಿದನು.

**ವೀರ ಬಲ್ಲಾಳನ ಪರಂಪರೆ**

**ವೀರ ಬಲ್ಲಾಳನ ಸಾಧನೆಗಳು ಹೊಯ್ಸಳರ ಇತಿಹಾಸದಲ್ಲಿ ಒಂದು ವೈಭವದ ಮುದ್ರೆಯನ್ನು ಒತ್ತಿದವು.**

- ಇವನು ಹೊಯ್ಸಳರನ್ನು ಕೇವಲ ಸ್ಥಳೀಯ ಶಕ್ತಿಯಿಂದ ದಕ್ಷಿಣ ಭಾರತದ ಪ್ರಬಲ ಶಕ್ತಿಯಾಗಿ (ಕಚಿಟಿ-ಖಿಣಜುಚಿಟಿ ಕಂತಿಜಡಿ) ಪರಿವರ್ತಿಸಿದನು.
- ಕೃಷ್ಣಾ ನದಿಯಿಂದ ಕಾವೇರಿ ನದಿಯವರೆಗೆ ವಿಸ್ತರಿಸಿದ ಆತನ ಸಾಮ್ರಾಜ್ಯವು ಹಿಂದಿನ ಚಾಲುಕ್ಯರ ಮತ್ತು ರಾಷ್ಟ್ರಕೂಟರ ವಿಜಯಗಳ ಗರಿಮೆಯನ್ನು ಮರುಸ್ಥಾಪಿಸಿತು.
- ಇವನ ನಂತರದ ದೊರೆಗಳು ಇವನು ಸ್ಥಾಪಿಸಿದ ಬೃಹತ್ ಸಾಮ್ರಾಜ್ಯದ ಸ್ಥಿರತೆಯನ್ನು ಇನ್ನಷ್ಟು ದೀರ್ಘಕಾಲದವರೆಗೆ ಕಾಯ್ದುಕೊಳ್ಳಲು ಸಾಧ್ಯವಾಯಿತು.

ಎರಡನೆಯ ವೀರ ಬಲ್ಲಾಳನು ಹೊಯ್ಸಳ ವಂಶದ ಕೀರ್ತಿಯನ್ನು ಅಜರಾಮರಗೊಳಿಸಿದ ದೊರೆ. ಯಾದವರನ್ನು ಮಣಿಸಿ ಕನ್ನಡ ನಾಡಿನ ಗಡಿಯನ್ನು ಭದ್ರಪಡಿಸಿದ್ದು, ಚೋಳರೊಂದಿಗೆ ರಾಜಕೀಯ ಮೈತ್ರಿ ಮಾಡಿ ಕಾವೇರಿ ಕಣಿವೆಯ ಮೇಲೆ ಪ್ರಭಾವ ಬೀರಿದ್ದು, ಮತ್ತು ಕನ್ನಡ ಕವಿಗಳಿಗೆ ಮಹಾ ಆಶ್ರಯ ನೀಡಿದ್ದು?ಇವೆಲ್ಲವೂ ವೀರ ಬಲ್ಲಾಳನನ್ನು ಕನ್ನಡದ ಶ್ರೇಷ್ಠ ಚಕ್ರವರ್ತಿಗಳ ಸಾಲಿನಲ್ಲಿ ನಿಲ್ಲಿಸಿವೆ.ಉಘೇ ತಾಯಿ ಭುವನೇಶ್ವರಿ! ವಂದನೆಗಳು.



ರೂಪ ಮಂಜುನಾಥ
ಹೊಳೆನರಸೀಪುರ






"ವಿದ್ಯಾವಂತರಾಗಿ,
ಸಂಘಟಿತರಾಗಿ ಮತ್ತು ಉತ್ತೇಜಿತರಾಗಿರಿ....!"
-ಡಾ. ಬಿ.ಆರ್. ಅಂಬೇಡ್ಕರ್

# ಸಂವಿಧಾನ ದಿನಾಚರಣೆ

## ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವಕ್ಕಾಗಿ

**ಬೆಳಿಗ್ಗೆ 10.00 ಗಂಟೆಗೆ ವಿಧಾನಸೌಧದ ಭವ್ಯ ಮೆಟ್ಟಿಲುಗಳಿಂದ ಡಾ. ಬಿ.ಆರ್. ಅಂಬೇಡ್ಕರ್ ಭವನದವರೆಗೆ ಹಮ್ಮಿಕೊಂಡಿರುವ "ಕಾಲ್ನಡಿಗೆ ಜಾಥಾ" ಕ್ಕೆ ಮಾನ್ಯ ಸಮಾಜ ಕಲ್ಯಾಣ ಸಚಿವರಿಂದ ಚಾಲನೆ**



### ವೇದಿಕೆ ಕಾರ್ಯಕ್ರಮ

ದಿನಾಂಕ: 26.11.2025 ರ ಬುಧವಾರ ಬೆಳಿಗ್ಗೆ 11.00 ಗಂಟೆಗೆ, ಸ್ಥಳ: ಡಾ. ಬಿ.ಆರ್. ಅಂಬೇಡ್ಕರ್ ಭವನ, ವಸಂತನಗರ, ಬೆಂಗಳೂರು

**ಉದ್ಘಾಟನೆ**

**ಶ್ರೀ ಸಿದ್ದರಾಮಯ್ಯ**
ಸನ್ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ

**ಘನ ಉಪಸ್ಥಿತಿ**

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ**
ಮಾನ್ಯ ಸಭಾಪತಿಗಳು,
ಕರ್ನಾಟಕ ವಿಧಾನ ಪರಿಷತ್ತು

**ಶ್ರೀ ಡಿ.ಕೆ. ಶಿವಕುಮಾರ್**
ಮಾನ್ಯ ಉಪ ಮುಖ್ಯಮಂತ್ರಿಗಳು,
ಕರ್ನಾಟಕ ಸರ್ಕಾರ

**ಶ್ರೀ ಯು.ಟಿ. ಖಾದರ್ ಫರೀದ್**
ಮಾನ್ಯ ಸಭಾಧ್ಯಕ್ಷರು,
ಕರ್ನಾಟಕ ವಿಧಾನಸಭೆ

**ಅಧ್ಯಕ್ಷತೆ**

**ಡಾ|| ಹೆಚ್.ಸಿ. ಮಹದೇವಪ್ಪ**
ಮಾನ್ಯ ಸಮಾಜ ಕಲ್ಯಾಣ ಸಚಿವರು, ಕರ್ನಾಟಕ ಸರ್ಕಾರ



ಮಾನ್ಯ ಸಮಾಜ ಕಲ್ಯಾಣ ಸಚಿವರಾದ **ಡಾ. ಹೆಚ್.ಸಿ. ಮಹದೇವಪ್ಪ** ಅವರು ಭಾರತದ ಸಂವಿಧಾನ ಪೀಠಿಕೆಯ ಕುರಿತು ಮಾತನಾಡುತ್ತಿರುವುದು.

**ಸರ್ವರಿಗೂ ಆದರದ ಸುಸ್ವಾಗತ**

ವೈಜ್ಞಾನಿಕ ಮನೋಧರ್ಮ ಬೆಳೆಸಿಕೊಳ್ಳುವುದು; ಪ್ರಶ್ನೆ ಮಾಡುವ ಮತ್ತು ಬದಲಾವಣೆಗೆ ಒಡ್ಡಿಕೊಳ್ಳುವ ಮನಃಸ್ಥಿತಿ ಬೆಳೆಸಿಕೊಳ್ಳುವುದು.- ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ

CMofKarnataka https://dipr.karnataka.gov.in/

ಕರ್ನಾಟಕ ವಾರ್ತೆ

ಬ್ರಾಹ್ಮಣ ಸಮುದಾಯ / ಹಿಂದುಳಿದ ವರ್ಗಗಳ ಮಾಲೀಕತ್ವದ ಮತ್ತು ಸಂಪಾದಕತ್ವದ ಪತ್ರಿಕೆಗಳಿಗೆ ಪ್ರೋತ್ಸಾಹ ರೂಪದ ಜಾಹೀರಾತು

Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from Mihir Akash K.R, #78, Daya Marga Near Geetha School, Siddartha Nagar Mysore-570011, Editor K.N Ravi,